ಬೆಂಗಳೂರು

ಸ್ಥಳೀಯ ಶಿಕ್ಷಣ ವರದಿ

# ನಗರಗಳಲ್ಲಿ ಬಡತನ ಮತ್ತು ಮೂಲ ಶಿಕ್ಷಣದಿಂದ ವಂಚನೆ

ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್
ಬೆಂಗಳೂರು

# ನಗರಗಳಲ್ಲಿ ಬಡತನ ಮತ್ತು ಮೂಲ ಶಿಕ್ಷಣದಿಂದ ವಂಚನೆ

ಸ್ಥಳೀಯ ಶಿಕ್ಷಣ ವರದಿ

ಬೆಂಗಳೂರು, ಕರ್ನಾಟಕ

**ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್,**
ಭಾರತೀಯ ವಿಜ್ಞಾನ ಸಂಸ್ಥೆ ಆವರಣ,
ಬೆಂಗಳೂರು – 560 012

(c) ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್,
2002

ಪ್ರಕಾಶಕರು
ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್,
ಭಾರತೀಯ ವಿಜ್ಞಾನ ಸಂಸ್ಥೆ ಆವರಣ,
ಬೆಂಗಳೂರು - 560 012

ಈ ವರದಿಯ ಪ್ರತಿಗಳಗಾಗಿ ಸಂಪರ್ಕಿಸಿ:
ನಿಯಂತ್ರಕರು
ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್
ಭಾರತೀಯ ವಿಜ್ಞಾನ ಸಂಸ್ಥೆ ಆವರಣ,
ಬೆಂಗಳೂರು - 560 012
ದೂರವಾಣಿ : 080 - 360 4351
ಇ-ಮೇಲ್: mgp@hamsadvani.serc.iise.ernet.in

ಅನುವಾದ :
ವಾಸುದೇವ ಶರ್ಮಾ
ದೂರವಾಣಿ: 6322512 / 513
ಬೆಂಗಳೂರು

ISBN 81-87663-33-2

ನಿಯಾಸ್‌ನ ವಿಶೇಷ ಪ್ರಕಟನೆ 11-2002

SP 11-2002

ಅಕ್ಷರ ಜೋಡಣೆ:
ಸಂವಹನ, ಬೆಂಗಳೂರು

ಮುದ್ರಣ:
ವರ್ಬ ನೆಟ್‌ವರ್ಕ್ ಸರ್ವಿಸಸ್
139 ಕೋಜಿ ಅಪಾರ್ಟ್‌ಮೆಂಟ್ಸ್,
8ನೇ ಮುಖ್ಯ ರಸ್ತೆ, 12ನೇ ಕ್ರಾಸ್
ಮಲ್ಲೇಶವರಂ, ಬೆಂಗಳೂರು 560 003

ನ್ಯಾಷನಲ್ ಇನ್ಸಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್, ಬೆಂಗಳೂರಿನ ಸಮಾಜ ಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರ ವಿಭಾಗಗಳು ಪ್ರಾಥಮಿಕ ಶಿಕ್ಷಣ ಕುರಿತು ನಡೆಸಿದ ಅಧ್ಯಯುನದ ಒಂದು ಭಾಗ ಈ ವರದಿ. ಇದರ ಕ್ಷೇತ್ರಾಧ್ಯಯನವನ್ನು ಅಕ್ಟೋಬರ್ 1999ರಿಂದ ನವೆಂಬರ್ 2001ರವರೆಗೆ ಈ ಮುಂದಿನ ಆರು ಪ್ರದೇಶಗಳಲ್ಲಿ ನಡೆಸಲಾಯಿತು: ಜಾನ್‌ಪುರ ಬ್ಲಾಕ್ (ಉತ್ತರಾಂಚಲ); ಜೈಪುರ (ರಾಜಾಸ್ಥಾನ); ತಂಜಾವೂರು (ತಮಿಳುನಾಡು) ಮತ್ತು ಚಿರಾಲ (ಆಂಧ್ರಪ್ರದೇಶ). ಅಧ್ಯಯನ ನಡೆಸಲಾದ ಎಲ್ಲ ಪ್ರದೇಶಗಳ ಸಮಗ್ರ ವರದಿಗಳು ಪ್ರತ್ಯೇಕವಾಗಿ ಲಭ್ಯವಿದೆ.

ಸ್ಥಳೀಯ ಶಿಕ್ಷಣ ವರದಿ (Local Eduction Report-LER)ಯು ಉದ್ದೇಶ ಈ ಅಧ್ಯಯನವನ್ನು ಯಾವ ಸಮುದಾಯದ ಸದಸ್ಯರೊಡನೆ ನಡೆಸಿದೆವೋ ಅವರೊಡನೆ ಅಧ್ಯಯುನದಲ್ಲಿ ಕಂಡುಕೊಂಡಿದನ್ನು ಹಂಚಿಕೊಳ್ಳುವುದು ಹಾಗೂ ಈ ಅಧ್ಯಯನವನ್ನು ಪ್ರಚುರಪಡಿಸುವುದು. ಹೀಗಾಗಿ, ಪ್ರಾಥಮಿಕವಾಗಿ ನಾವು ಅಧ್ಯಯನ ನಡೆಸಿದ ಪ್ರದೇಶಗಳ ಪರಿಸ್ಥಿತಿ ಹಾಗೂ ಅದರ ಒಟ್ಟಾರೆ ಸ್ಥಿತಿ-ಗತಿ ಹೇಗಿದೆ ಎಂಬ ವಿವರಣಾತ್ಮಕ ವರದಿ ಇದಾಗಿದೆ. ಸಮುದಾಯದ ಸದಸ್ಯರು, ಶಿಕ್ಷಕ ಶಿಕ್ಷಕಿಯರು, ಚುನಾಯಿತ ಪ್ರತಿನಿಧಿಗಳು, ಪೋಷಕರು, ಶಿಕ್ಷಣ ಇಲಾಖೆಯ ಸಿಬ್ಬಂದಿ ಹಾಗೂ ಪ್ರಾಥಮಿಕ ಶಿಕ್ಷಣವನ್ನು ಪ್ರೋತ್ಸಾಹಿಸುವವರೆಲ್ಲರಿಗೂ ಈ ವರದಿ ಪ್ರಯೋಜನಕಾರಿಯಾಗುವುದೆಂಬುದು ನಮ್ಮ ಆಶಯ..

ಈ ವರದಿ ಸಾಧ್ಯವಾದುದು ವಿವಿಧ ಹಂತಗಳಲ್ಲಿ ಹಲವರ ಸಹಾಯದಿಂದ. ಕ್ಷೇತ್ರಾಧ್ಯಯನದ ಎರಡನೇ ಹಂತದ ಕೆಲಸಗಳಲ್ಲಿ ಹಾಗೂ ಈ ವರದಿಗಾಗಿ ಅಂಕಿ–ಅಂಶಗಳ ಕ್ರೋಢೀಕರಣದಲ್ಲಿ ಸರಿತಾ ತುಕಾರಾಂ ಸಹಾಯ ನೀಡಿದ್ದಾರೆ. ಅಧ್ಯಯನದ ಮೊದಲ ಹಂತದಲ್ಲಿ ಎಸ್. ಧರ್ಮೇಂದ್ರ ಕ್ಷೇತ್ರ ಸಂಶೋಧನೆ ಮಾಡಿದರು. ಡಾ.ಕೀರ್ತಿಶೇಖರ್, ಎಚ್.ಟಿ.ರಾಮಚಂದ್ರಪ್ಪ ಮತ್ತು ಕೆ.ಸಿ.ಜ್ಯೋತಿ ಮನೆ ಮನೆ ಸರ್ವೇಕ್ಷಣೆಯಲ್ಲಿ ಸಹಾಯ ಮಾಡಿದರು. ಮತ್ತು ಸವಿತಾ ಶಾಸ್ತ್ರಿ ಅಂಕಿ ಅಂಶಗಳನ್ನು ಪರಿಷ್ಕರಿಸಿದರು. ಅವರೆಲ್ಲರೂ ತೋರಿದ ಆಸಕ್ತಿ ಮತ್ತು ಬೆಂಬಲಕ್ಕಾಗಿ ವಂದನೆಗಳು. ಅಧ್ಯಯನದಲ್ಲಿ ಭಾಗವಹಿಸಿ ತಾಳ್ಮೆಯಿಂದ ತಮ್ಮ ಸಮಯ ಹಾಗೂ ಮಾಹಿತಿ ನೀಡಿದ ಮಕ್ಕಳು – ಶಾಲೆಗೆ ಹೋಗುವ ವಿದ್ಯಾರ್ಥಿಗಳು ಹಾಗೂ ಶಾಲೆಯ ಹೊರಗಿದ್ದವರು, ಶಿಕ್ಷಕ ವೃಂದ, ಪೋಷಕರು ಹಾಗೂ ಸಮುದಾಯದ ಸದಸ್ಯರಿಗೆ ವಿಶೇಷ ಕೃತಜ್ಞತೆಗಳು. ಈ ವರದಿಯನ್ನು ಕರ್ನಾಟಕದಲ್ಲಿ ಪ್ರಚುರ ಪಡಿಸಲು ನಿರ್ಧರಿಸಿದಾಗ ವಾಸುದೇವ ಶರ್ಮಾ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಅವರಿಗೂ ನಮ್ಮ ಕೃತಜ್ಞತೆಗಳು.

ಈ ಸಂಶೋಧನೆಗೆ ಸಹಾಯ ನೀಡಿದವರು ಬೆಂಗಳೂರಿನ ನ್ಯಾಷನಲ್ ಇನ್ಸಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್ ಹಾಗೂ ಚಿಕಾಗೋವಿನ ಸ್ಪೆನ್ಸರ್ ಫೌಂಡೇಶನ್. ಈ ಸ್ಥಳೀಯ ಶಿಕ್ಷಣ ವರದಿಗಳನ್ನು ಅಭಿವೃದ್ಧಿ ಪಡಿಸಲು ಕೆನೆಡಿಯನ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಏಜೆನ್ಸಿ (CIDA), ನವದೆಹಲಿ ಧನಸಹಾಯ ಮಾಡಿದೆ.

ಜನವರಿ 2002

ಎ. ಆರ್. ವಾಸವಿ
ನಾ.ಇ.ಅ.ಸ್ಟ., ಬೆಂಗಳೂರು.

*ಅನುವಾದ*
ವಾಸುದೇವ ಶರ್ಮಾ

# ನಗರಗಳಲ್ಲಿ ಬಡತನ ಮತ್ತು ಮೂಲಶಿಕ್ಷಣದಿಂದ ವಂಚನೆ

ಅಂದು 2001ರ ನವೆಂಬರ್ 9, ಶುಕ್ರವಾರ, ಬೆಳಗ್ಗೆ 11-30. ನಗರದ ಮಧ್ಯ ಭಾಗದಲ್ಲಿರುವ ವಾಹನ ನಗರ ಸ್ಲಂ ಸಮುದಾಯದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಿಕೋ ಎನ್ನುತ್ತಿತ್ತು. ಒಳಗಡೆ ಮಕ್ಕಳಿಲ್ಲ. ಕೇವಲ ವಯಸ್ಕರು. ಯಾವುದೋ ಅಮಲಿನಲ್ಲಿದ್ದ ಅವರು ಅಲ್ಲಲ್ಲಿ ಬಿದ್ದಿದ್ದರು. ನಗರ ಪಾಲಿಕೆ ಚುನಾವಣಾ ಪ್ರಕ್ರಿಯೆ ಘೋಷಣೆಯಾದ ದಿನದಿಂದ ಶಾಲೆಯ ಮುಖ್ಯ ತರಗತಿಯನ್ನು ಪ್ರಮುಖ ರಾಜಕೀಯ ಪಕ್ಷದ ಕಾರ್ಯಕರ್ತರು ವಶಪಡಿಸಿಕೊಂಡಿದ್ದಾರೆ. ಅಲ್ಲಿ ದಿನಕ್ಕೆರಡು ಬಾರಿ ಅಡುಗೆ ಮಾಡಲಾಗುತ್ತದೆ ಮತ್ತು ಕೊಳೆಗೇರಿಯ ನಿವಾಸಿಗಳಿಗೆ ಉಚಿತವಾಗಿ ಹಂಚಲು ಸಾರಾಯಿ ದಾಸ್ತಾನು ಮಾಡಲಾಗಿದೆ. ಕಳೆದ ಹನ್ನೆರಡು ದಿನಗಳಿಂದ ಶಾಲೆ ನಡೆಯುತ್ತಿಲ್ಲ ಮತ್ತು ಶಾಲೆಯ ಬಳಿ ಯಾವುದೇ ಮಕ್ಕಳು ಕಾಣುವುದಿಲ್ಲ.

ಈ ಶಾಲೆಯ ಸ್ಥಿತಿ ಬೆಂಗಳೂರಿನ ಬಡಪೀಡಿತ ಅಥವಾ ಕೊಳೆಗೇರಿಗಳಲ್ಲಿರುವ ಸರಕಾರೀ ಶಾಲೆಗಳ ವಿಷಾದಕರ ಪರಿಸ್ಥಿತಿಯ ಸಂಕ್ಷಿಪ್ತ ರೂಪದಂತಿದ್ದು, ರಾಜಕೀಯ ಹಿತಾಸಕ್ತಿಗಳು ಮಕ್ಕಳ ಮೂಲಭೂತ ಶಿಕ್ಷಣದ ಹಕ್ಕಿನ ಮೇಲೆ ತಮ್ಮ ಅಗ್ರಸ್ಥಾನವನ್ನು ಹೇಗೆ ಮೆರೆಸುತ್ತಾರೆ ಎಂಬುದಕ್ಕಿದು ದ್ಯೋತಕವಾಗಿದೆ. ನಗರಗಳ ಬಹುಪಾಲು

ಸರಕಾರೀ ಶಾಲೆಗಳ ಸ್ಥಿತಿ ಹೀಗಿದ್ದು, ಇದು ಹಲವಾರು ಪ್ರಶ್ನೆಗಳಿಗೆ ದಾರಿ ಮಾಡಿಕೊಡುವುದು. ಉನ್ನತವಾದ ತಾಂತ್ರಿಕ ಕೇಂದ್ರಗಳಿಗೆ, ಉದ್ಯಮ ಶೀಲತೆಗೆ ಹಾಗೂ ಅತ್ಯುತ್ತಮ ಆಡಳಿತಕ್ಕೆ ಹೆಸರುವಾಸಿಯಾಗಿರುವ ಈ ನಗರದ ಸರಕಾರೀ ಶಾಲೆಗಳೇಕೆ ವಸ್ತುಶಃ ಅಸಮರ್ಪಕ ಮತ್ತು ಕೆಲಸ ಮಾಡುವುದಿಲ್ಲ? ಶಿಕ್ಷಣಕ್ಕಾಗಿ ಸಾಮೂಹಿಕ ಬೇಡಿಕೆಯಿದ್ದರೂ ಸಹ ಬಡಕುಟುಂಬಗಳ ಅನೇಕ ಮಕ್ಕಳು ಶಾಲೆಗಳಿಂದ ಹೊರಗೇಕಿದ್ದಾರೆ? ಚುರುಕಾಗಿರುವ ಹಾಗೂ ಉತ್ಸಾಹಿಗಳಂತೆ ಕಂಡುಬರುವ ಮಕ್ಕಳು ಶಾಲೆಯೆಂದರೆ ಬೇಸರ ಹುಟ್ಟಿಸುವ ಕ್ರೂರ ಸ್ಥಳಗಳು ಎಂದೇಕೆ ಅನ್ನುವರು?

ಬೆಂಗಳೂರಿನ ಬಡ ಪ್ರದೇಶಗಳಲ್ಲಿ ಮಕ್ಕಳಿಗೆ ಲಭ್ಯವಿರುವ ಶಿಕ್ಷಣ ಕುರಿತು ಇರುವ ಅವಗಾಹನೆಯ ಸುತ್ತ ಇಂತಹ ಪ್ರಶ್ನೆಗಳು ಉದ್ಭವಿಸಿವೆ. ಇದರ ಉದ್ದೇಶ ನಗರಗಳು ಅತ್ಯುತ್ತಮವಾದ ಮೂಲಭೂತ ಶಿಕ್ಷಣ ಅವಕಾಶಗಳನ್ನು ಒದಗಿಸುತ್ತವೆ ಎಂಬ ಬಹುಜನರ ಅಭಿಪ್ರಾಯವನ್ನು ಪ್ರಶ್ನಿಸುವುದು ಮತ್ತು ಬೆಳೆಯುತ್ತಿರುವ ನಗರಗಳ ಬಡತನದಲ್ಲಿರುವ ಬಹುತೇಕ ಮಕ್ಕಳಿಗೇಕೆ ಶಿಕ್ಷಣದ ಮೂಲಭೂತ ಹಕ್ಕನ್ನು ನೀಡುಲಾಗುತ್ತಿಲ್ಲ ಎಂದು ಪರೀಕ್ಷಿಸುವುದು. ಇಲ್ಲಿರುವ ವಿವರಗಳು ತೋರಿಸುವಂತೆ, ಮಕ್ಕಳು ಶಿಕ್ಷಣದಿಂದ ವಂಚಿಂತರಾಗಲು ಹಲವಾರು ಕಾರಣಗಳಿವೆ. ಇಂತಹ ವಂಚನೆಯ ಫಲವಾಗಿ, ಮಕ್ಕಳ ಶೈಕ್ಷಣಿಕ ಅವಕಾಶನ್ನು ಕಸಿದುಕೊಂಡು ಮೂರನೇ ಹಾಗೂ ಸೇವಾಕ್ಷೇತ್ರಗಳು ಹುಲುಸಾಗಿ ಬೆಳೆಯುತ್ತಿವೆ.

## ನಗರಗಳಲ್ಲಿ ಮೂಲ ಶಿಕ್ಷಣದ ಬಗ್ಗೆ ಇರುವ ತಪ್ಪುಕಲ್ಪನೆಗಳ ಮರುಚಿಂತನೆ

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶೈಕ್ಷಣಿಕ ಅವಕಾಶಗಳಿಗಿರುವ ವ್ಯತ್ಯಾಸಗಳ ಬಗ್ಗೆ ನಡೆದಿರುವ ಅಧ್ಯಯನಗಳು ಹಾಗೂ ಅಂಕಿಅಂಶಗಳು, ನಗರಗಳು ಗ್ರಾಮೀಣ ಪ್ರದೇಶಗಳಿಗಿಂತ ಎಂತಹ ಮೇಲ್ಮೈ ಸಾಧಿಸಿವೆ ಎಂಬುದನ್ನು ತೋರಿಸಿವೆ. ಮೂಲಭೂತ ಸೌಕರ್ಯಗಳು, ಶಾಲೆಗಳ ನಿರ್ವಹಣೆ ಹಾಗೂ ಸಾಕ್ಷರತೆಯ ಪ್ರಮಾಣಗಳಲ್ಲಂತೂ ಇದು ಸುಸ್ಪಷ್ಟ. ಕರ್ನಾಟಕದ ಸಮಗ್ರ ಮಾಹಿತಿಯೂ ಎಲ್ಲಡೆ ಇಂತಹ ನಗರಪರ ಪಕ್ಷಪಾತ ಇರುವುದನ್ನು ತೋರಿಸಿವೆ. 1991ರ ಜನಸಂಖ್ಯೆ ವರದಿಗಳು ಗ್ರಾಮೀಣ ಪ್ರದೇಶದಲ್ಲಿ ಶೇ.47ರ ಸಾಕ್ಷರತಾ ಮಟ್ಟ ತೋರಿಸಿದರೆ ನಗರಗಳಲ್ಲಿ ಇದು ಶೇ.74 ಎಂದಿವೆ. ನಗರೀಕರಣ ಮತ್ತು ಕೈಗಾರೀಕರಣವೇ ಇಲ್ಲದ ರಾಯಚೂರು ಮತ್ತು ಗುಲ್ಬರ್ಗಾ, ರಾಜ್ಯದಲ್ಲೇ ಅತ್ಯಂತ ಕಡಿಮೆ ಸಾಕ್ಷರತಾ ಮಟ್ಟವನ್ನು ಹೊಂದಿರುವ ಜಿಲ್ಲೆಗಳಾಗಿವೆ. 1992-93ನೇ

ಸಾಲಿನಲ್ಲಿ ಶಾಲೆಗೆ ಹೋಗುತ್ತಿದ್ದ ಕರ್ನಾಟಕದ ಮಕ್ಕಳ ಅಂಕಿಸಂಖ್ಯೆ ಬೆಂಗಳೂರು ಗ್ರಾಮೀಣ ಪ್ರದೇಶದಲ್ಲಿ ಶೇ.65.3 ಎಂದಿದ್ದರೆ, ಅದೇ ಬೆಂಗಳೂರು ನಗರದಲ್ಲಿ ಶೇ.82.4 ಎಂದಿದೆ.[1] 1996ರಲ್ಲಿ ಶಾಲೆಯ ಹೊರಗಿರುವ ಮಕ್ಕಳ ಸಂಖ್ಯೆ ಬೆಂಗಳೂರು ಗ್ರಾಮಾಂತರದಲ್ಲಿ ಶೇ.33.3 ಇದ್ದಾಗ ಬೆಂಗಳೂರು ನಗರದಲ್ಲಿ ಅದು ಕೇವಲ ಶೇ.12.7[2]

ಆದರೆ, ಎಂದೋ ಹೊಂದಿದ್ದ ಇಂತಹ ಸ್ಥಾನಮಾನವನ್ನು, ಅದರಲ್ಲೂ ಬಡವರಿಗೆ ಮೂಲಭೂತ ಶೈಕ್ಷಣಿಕ ಅವಕಾಶಗಳನ್ನು ನೀಡುವ ವಿಚಾರದಲ್ಲಿ ಬೆಂಗಳೂರು ನಗರ ಈಗ ಹೆಮ್ಮೆಪಡಲಾಗದು. ವಿಚಾರವಂತರು ಈಗಾಗಲೇ ಗುರುತಿಸಿರುವಂತೆ, ಭಾರತದ ನಗರಗಳ ಬಡ ಪೀಡಿತ ಪ್ರದೇಶಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥ ಮಕ್ಕಳನ್ನು ಹೊಂದಿವೆ.[3] ಬೆಂಗಳೂರಿನಲ್ಲಿ, ನಗರ ಬೆಳವಣಿಗೆ, ಅದರಲ್ಲೂ ಬಡ ಪ್ರದೇಶಗಳ ಬೆಳವಣಿಗೆ, ಶಿಕ್ಷಣ ವ್ಯವಸ್ಥೆಯ ನಿರ್ವಹಣೆಯಲ್ಲಿನ ಸಮಸ್ಯೆಗಳು, ಬಡಪ್ರದೇಶಗಳಲ್ಲಿರುವ ಜನರ ಕುಂದುಕೊರತೆಗಳೇ ಮೊದಲಾದುವು ಬಡಕುಟುಂಬಗಳಲ್ಲಿರುವ ಮಕ್ಕಳ ಶೈಕ್ಷಣಿಕ ಅವಕಾಶಗಳನ್ನು ಕುಂಠಿತಗೊಳಿಸುತ್ತಿವೆ.

## ನಗರದ ಬೆಳವಣಿಗೆ

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.33ರಷ್ಟು ನಗರವಾಸಿಗಳನ್ನು ಕರ್ನಾಟಕ ರಾಜ್ಯ ಹೊಂದಿದ್ದು, ಇದು ದೇಶದಲ್ಲೇ ಅತ್ಯಧಿಕ ಪ್ರಮಾಣವಾಗಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.27 ಮಾತ್ರಾ ನಗರವಾಸಿಗಳು.[4] ಬೆಂಗಳೂರಿನ ಬೆಳವಣಿಗೆ ಕೂಡಾ ಇದನ್ನು ಬೆಂಬಲಿಸುತ್ತಿದೆ – ಕಳೆದ ಮೂರು ದಶಕಗಳಲ್ಲಿ ಬೆಂಗಳೂರಿನ ಜನಸಂಖ್ಯೆ 1971ರಲ್ಲಿ 16.64 ಲಕ್ಷದಿಂದ 1981ರಲ್ಲಿ 29.21 ಲಕ್ಷಕ್ಕೇರಿ, 1991ರಲ್ಲಿ 41.30 ಲಕ್ಷ ಮುಟ್ಟಿದ್ದು, ಈಗ 2001ರ ಜನಸಂಖ್ಯಾ ವರದಿಯಂತೆ 56.86 ಲಕ್ಷಕ್ಕೇರಿದೆ[5]. ಈ ಮೂಲಕ, ಬೆಂಗಳೂರು ರಾಷ್ಟ್ರದ 5ನೇ ಅತ್ಯಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ನಗರವಾಗಿದೆ. ನಗರ ಬೆಳೆದಂತೆ,

[1] ಕರ್ನಾಟಕದಲ್ಲಿ ಮಾನವಾಭಿವೃದ್ಧಿ ವರದಿ, ಬೆಂಗಳೂರು, ಕರ್ನಾಟಕ ಸರ್ಕಾರ, 1999

[2] ಮೇಲಿನಂತೆ. 2001ರ ಸಮೀಕ್ಷೆ ಗ್ರಾಮೀಣ ಮತ್ತು ನಗರಗಳ ವ್ಯತ್ಯಾಸ ನೀಡಿಲ್ಲ.

[3] ರಂಗಾಚಾರ್ ಗೋವಿಂದ, ಭಾರತದ ನಗರಗಳ ಬಡಜನರ ಶೈಕ್ಷಣಿಕ ಮಟ್ಟ, ಸಂಶೋಧನಾ ವರದಿ, 105, ಅಂತಾರಾಷ್ಟ್ರೀಯ ಯೋಜನಾ ಸಂಸ್ಥೆ, ಪ್ಯಾರೀಸ್, 1995.

[4] ಕರ್ನಾಟಕ ಗ್ರಾಮೀಣ ಮತ್ತು ನಗರ ಜನಸಂಖ್ಯೆ ವಿಂಗಡಣೆ. ಜನಗಣತಿ 2001, ಬೆಂಗಳೂರು, ಜನಗಣತಿ ನಿರ್ದೇಶಕರ ಕಛೇರಿ, 2001.

[5] ಮೇಲಿನಂತೆ

ಕೂಲಿಕಾರ್ಮಿಕ ಸಮುದಾಯಕ್ಕೆ ಸಾಕಷ್ಟು ಮನೆಗಳು ಮತ್ತು ನಾಗರೀಕ ಸೌಲಭ್ಯಗಳನ್ನು ಒದಗಿಸುವಲ್ಲಿ ಸೋತ ಕಾರಣ, ಜನಸಾಮಾನ್ಯರು ಹೇಳುವ 'ಕೊಳೆಗೇರಿ'ಗಳ (ಸ್ಲಂಗಳು) ಸೃಷ್ಟಿಯಾಯಿತು. ಕೊಳೆಗೇರಿಗಳ ಮಾಹಿತಿ ಆಧಾರದ ಮೇಲೆ ಹೇಳುವುದಾದರೆ, ನಗರಗಳ ಬೆಳವಣಿಗೆಯ ಜೊತೆ ಜೊತೆಯಾಗಿ ಕೊಳೆಗೇರಿಗಳ ಗಾತ್ರ ಮತ್ತು ಸಂಖ್ಯೆಯೂ ಬೆಳೆದಿದೆ.

## ಬಡ ಪ್ರದೇಶಗಳು ಅಥವಾ ಸ್ಲಮ್‌ಗಳ ಬೆಳವಣಿಗೆ

ಕಳಪೆ ದರ್ಜೆಯ ಮನೆಗಳು, ಅಸಮರ್ಪಕ ಮೂಲಭೂತ ಸೌಕರ್ಯಗಳು ಮತ್ತು ತೀರಾ ಕಳಪೆ ನಾಗರೀಕ ಸೌಲಭ್ಯಗಳೇ ಲಕ್ಷಣಗಳಾಗಿರುವ ಬಡ ಪ್ರದೇಶಗಳನ್ನು ಗುರುತಿಸುವುದು ಸುಲಭ. ಆದರೆ, ಅಧಿಕೃತವಾಗಿ ಕೊಳೆಗೇರಿಗಳನ್ನು ಗುರುತಿಸಿ ಅಂಕಿಸಂಖ್ಯೆ ತೆಗೆದುಕೊಳ್ಳುವ ಕೆಲಸ ಅತ್ಯಂತ ದುಸ್ತರವಾಗಿದೆ. ನಗರದ ಕೊಳೆಗೇರಿ/ಬಡ ಪೀಡಿತ ಪ್ರದೇಶಗಳ ಸಂಖ್ಯೆ ಹಾಗೂ ಗಾತ್ರ, ಅಂಕಿ ಸಂಖ್ಯೆ ಸಂಗ್ರಹಿಸುತ್ತಿರುವ ಸಂಸ್ಥೆ ಅಥವಾ ಜನರನ್ನು ಅವಲಂಬಿಸಿ ಬದಲಾಗುತ್ತಿರುತ್ತದೆ.[6] ತೀರಾ ಇತ್ತೀಚಿನ ಮಾಹಿತಿ ಎಂದರೆ 2001ರ ಜನಗಣತಿ, ಬೆಂಗಳೂರಿನಲ್ಲಿ 733 ಸ್ಲಂಗಳನ್ನು ಪಟ್ಟಿಮಾಡಿದೆ.[7]

ಬಡ ಪೀಡಿತ ಪ್ರದೇಶಗಳು ಅಥವಾ ಕೊಳೆಗೇರಿಗಳ ಅಂಕಿ ಸಂಖ್ಯೆ ವೈವಿಧ್ಯತೆ ಬಗ್ಗೆ ಇಷ್ಟೆಲ್ಲಾ ವ್ಯತ್ಯಾಸಗಳಿದ್ದರೂ ಸಹ, ನಗರದಲ್ಲಿ ಕೊಳೆಗೇರಿಗಳು ಹೆಚ್ಚಿರುವುದು ಸುಸ್ಪಷ್ಟ. 1940 ರಿಂದ 1970ರ ವರೆಗೆ ಮುಖ್ಯವಾಗಿ ಉದ್ಯೋಗವಕಾಶಗಳಿದ್ದ ಕಾರ್ಖಾನೆಗಳ ಸಮೀಪ ಕೊಳೆಗೇರಿಗಳು ತಲೆ ಎತ್ತುತ್ತಿದ್ದವು. 1970ರ ನಂತರ ನಗರದ ದಿಢೀರ್ ವಿಸ್ತರಣೆಯಿಂದಾಗಿ ಕಾಲುವೆಗಳ (ದೊಡ್ಡಮೋರಿ) ಅಕ್ಕ ಪಕ್ಕ ಕೆರೆ ಬಯಲು, ಕಲ್ಲುಗಣಿಗಳು ಅಥವಾ ರೈಲ್ವೆ ಹಳಿಗಳ ಅಕ್ಕ ಪಕ್ಕ ಕೊಳೆಗೇರಿಗಳು ಬೆಳೆಯುವಂತಾದವು.[8]

---

[6] ಕೊಳೆಗೇರಿ ನಿವಾರಣಾ ಮಂಡಲಿ 1996-97ರಲ್ಲಿ 17.17 ಲಕ್ಷ ಜನಸಂಖ್ಯೆ ಹೊಂದಿರುವ 339 ಪ್ರದೇಶಗಳನ್ನು ಸ್ಲಂಗಳೆಂದು ಗುರುತಿಸಿದೆ. 1991ರಲ್ಲಿ ಸ್ಕೆಂಕ್ (Schenk) ಬೆಂಗಳೂರಿನಲ್ಲಿ ನಗರದ ಶೇ.20 ಜನಸಂಖ್ಯೆಯ ಒಟ್ಟು 1.12 ಮಿಲಿಯನ್ ಜನರಿರುವ (11.2 ಲಕ್ಷ) 444 ಸ್ಲಂಗಳನ್ನು ಗುರುತಿಸಿತ್ತು. 1998-99ರಲ್ಲಿ ಬೆಂಗಳೂರು ಸಾಕ್ಷರತಾ ಸಮಿತಿ 22 ಲಕ್ಷ ಜನಸಂಖ್ಯೆ ಇರುವ 763 ಸ್ಲಂಗಳನ್ನು ಗುರುತಿಸಿತ್ತು.

[7] ಜನಗಣತಿ ವಿವರ, ಕರ್ನಾಟಕ, ಭಾರತ ಜನಗಣತಿ, 2001, ನಿರ್ದೇಶಕರು, ಜನಗಣತಿ, ಕರ್ನಾಟಕ.

[8] ಸಾಲೋಮನ್ ಬೆಂಜಮಿನ್ ಮತ್ತು ಆರ್. ಭುವನೇಶ್ವರಿ, ನಗರಾಡಳಿತ ಮತ್ತು ಬಡತನ ; ಬೆಂಗಳೂರಿನಲ್ಲಿ ಜೀವನೋಪಾಯದ ದೃಷ್ಟಿಕೋಣ, ಸೆಪ್ಟಂಬರ್ 1999

ನಗರದ ಹೊರ ವಲಯುಗಳಿಗೆ ಒತ್ತರಿಸಲ್ಪಟ್ಟ ಕೊಳೆಗೇರಿಗಳೂ ಸಹ ದೊಡ್ಡದಾಗಿವೆ. ತೀರಾ ಕಳಪೆ ಮಟ್ಟದ ನಾಗರೀಕ ಸೌಲಭ್ಯಗಳು, ಕಿಕ್ಕಿರಿದ ಅಸಮರ್ಪಕ ಜನವಸತಿಗಳನ್ನು ಹೊಂದಿವೆ. ಕೆಲವುಕಾಲದ ಹಿಂದೆ ಗ್ರಾಮೀಣ ಕೃಷಿ ಪ್ರದೇಶಗಳಾಗಿದ್ದ ಈ ಪ್ರದೇಶಗಳು ಈಗ ನಗರದಲ್ಲಿ ಮುಳುಗಿಹೋಗಿ, ಕೊಳೆಗೇರಿ ಅಥವಾ ಬಡ ಪೀಡಿತ ಪ್ರದೇಶಗಳ ಲಕ್ಷಣಗಳನ್ನು ಬೆಳಸಿಕೊಂಡಿವೆ. ಈ ಪ್ರದೇಶಗಳ ಜನ ನಗರದವರಿಗೆ ಹಲವಾರು ಸೇವೆಗಳನ್ನು ಮಾಡುವ ಕೂಲಿ ಕರ್ಮಿಕರೇ ಆಗಿದ್ದರೂ ಅವರು ಬಡತನದ ಸ್ಥಿತಿಯಲ್ಲೇ ಬದುಕು ಮುಂದುವರಿಸುವರು. ಭಾರತದ ಮೂರು ನಗರಗಳಲ್ಲಿ (ಬೆಂಗಳೂರು, ಕೊಲ್ಕತ್ತಾ ಮತ್ತು ಇಂದೂರ್) ನ್ಯಾಷನಲ್ ಸೆಂಟರ್ ಫಾರ್ ಹ್ಯೂಮನ್ ಸೆಟಲ್‌ಮೆಂಟ್ ಅಂಡ್ ಎನ್ವಿರೋನ್‌ಮೆಂಟ್ ನಡೆಸಿದ ಸರ್ವೇಕ್ಷಣೆಯಂತೆ ಬೆಂಗಳೂರಿನ ಕೊಳೆಗೇರಿಗಳಲ್ಲಿ ವಾಸಿಸುವ ಶೇ.73 ಮಂದಿ ಬಡತನರೇಖೆಯಡಿ ಇದ್ದಾರೆ.[9] ಅನೇಕ ಕೊಳೆಗೇರಿ ನಿವಾಸಿಗಳಿಗೆ ಯಾವುದೇ ಆಸ್ತಿ ಪಾಸ್ತಿ ಮತ್ತು ಉಳಿತಾಯವಿಲ್ಲ. ಜೊತೆಗೆ ಮೇಲಿಂದ ಮೇಲೆ ಉದ್ಯೋಗರಹಿತರಾಗುವ ಪಾಡು. ಅನೇಕ ನಾಗರೀಕ ಸೌಲಭ್ಯಗಳು ಇವರಿಗೆ ದೊರೆಯುವುದಿಲ್ಲ ಮತ್ತು ಸಾರ್ವಜನಿಕ ಸೇವಾ ವ್ಯವಸ್ಥೆಗಳು – ಆರೋಗ್ಯ, ಪೋಲೀಸ್ ರಕ್ಷಣೆ, ಶಿಕ್ಷಣ ಮತ್ತಿತರ ಸರ್ಕಾರಿ ಸಂಸ್ಥೆಗಳ – ಸೇವೆ ಇವರಿಗೆ ಸಿಗುವುದೇ ಇಲ್ಲ.[10]

## ಬಡಪೀಡಿತ ಪ್ರದೇಶಗಳಲ್ಲಿ ಸಾಕ್ಷರತಾ ಮಟ್ಟ

ಕೊಳೆಗೇರಿಗಳು ದೊಡ್ಡವಾದಂತೆ, ಅತಿಯಾದಂತೆ, ಅಲ್ಲಿ ವಾಸಿಸುವ ಮಕ್ಕಳಿಗೆ ಸಾಕಷ್ಟು ಶಾಲಾ ವ್ಯವಸ್ಥೆಗಳು ಬೆಳೆಯಲಿಲ್ಲ. ಎಚ್. ರಾಮಚಂದ್ರನ್ ಮತ್ತು ಎಸ್.ವಿ. ಸುಬ್ರಮಣಿಯಂ ನಡೆಸಿದ ಅಧ್ಯಯನ ನಗರಗಳ ಬಡ ಪೀಡಿತ ಪ್ರದೇಶಗಳಲ್ಲಿ ವಯಸ್ಕರ ಸಾಕ್ಷರತಾ ಮಟ್ಟದ ಬೆಳವಣಿಗೆ ತೀರಾ ನಿಧಾನ ಗತಿಯಲ್ಲಿದೆಯೆಂದು ತೋರಿಸಿದೆ.[11] 1973 ರಿಂದ 1992 ರೊಳಗಿನ ಅವಧಿಯಲ್ಲಿ ಬೆಂಗಳೂರು ನಗರದ 11 ಸ್ಲಮ್‌ಗಳ ಸಾಕ್ಷರತೆ ಮಟ್ಟ ಕುರಿತ ನಡೆದ ಈ ಅಧ್ಯಯನ, 1973ರಲ್ಲಿ ಶೇ.59 ಇದ್ದ ಅನಕ್ಷರತೆ 1992ರ ಹೊತ್ತಿಗೆ ಶೇ.49ಕ್ಕೆ ಇಳಿದಿದೆ ಎಂದು ತೋರಿಸಿದೆ. ಅಂದರೆ ಈ ಇಪ್ಪತ್ತು ವರ್ಷಗಳಲ್ಲಿ ಸಾಕ್ಷರತೆ

[9] ಮೇಲಿನಂತೆ

[10] ಸ್ಯಾಮ್ಯುಯಲ್ ಪಾಲ್ ಮತ್ತು ಸೀತಾ ಶೇಖರ್, ನಾಗರೀಕ ಸೌಲಭ್ಯಗಳ ಮಟ್ಟ, ಬೆಂಗಳೂರು ನಗರ ಕುರಿತು ಎರಡನೇ ಪ್ರಗತಿ ಪತ್ರ, ಪಬ್ಲಿಕ್ ಅಫೇರ್ ಸೆಂಟರ್, ಬೆಂಗಳೂರು-2000

[11] ಹಾನ್ಸ್ ಸ್ಟೆಂಕ್, ಭಾರತದ ಕೊಳೆಗೇರಿಗಳಲ್ಲಿ ವಾಸ, ಬೆಂಗಳೂರಿನ ಅಧ್ಯಯನ, ಸಂಪಾದಕರು, IDPAD / ಮನೋಹರ್, ದೆಹಲಿ, 2001

ಶೇ. 10 ಕಡಿಮೆಯಾಗಿದೆ. ಪ್ರಾಥಮಿಕ ಶಿಕ್ಷಣ ಪಡೆದವರ ಸಂಖ್ಯೆಯಲ್ಲಿ ಕೇವಲ ಶೇ. 1 ರಷ್ಟು ಹೆಚ್ಚಳ ಈ 20 ವರ್ಷಗಳಲ್ಲಿ ಆಗಿದೆಯೆಂದೂ ಈ ಅಧ್ಯಯನ ತೋರಿಸಿದೆ – 1973ರಲ್ಲಿ ಶೇ. 21 ಇದ್ದದ್ದು 1992ರಲ್ಲಿ ಶೇ. 22 ಆಗಿದೆ. 2001ರ ಜನಗಣತಿ ವರದಿಯಂತೆ ಬೆಂಗಳೂರಿನ ಸ್ಲಮ್‌ಗಳ ಸಾಕ್ಷರತಾ ಮಟ್ಟ ಶೇ. 59.69.[12]

ಶಾಲೆಗಳನ್ನು ಕುರಿತು ಹೊರಬಿದ್ದಿರುವ ಮಾಹಿತಿ, ವಿಧ್ಯಾರ್ಥಿಗಳು ಹಾಗೂ ಶಿಕ್ಷಕರ ಅನುಪಾತ ಸರಿಯಾಗಿ, ವಿತರಣೆಯಾಗಿಲ್ಲವೆಂದೂ ತೋರಿಸುತ್ತದೆ.

## ಪಟ್ಟಿಕೆ – 1

## ಪ್ರಾಥಮಿಕ ಶಾಲೆಗಳ ಚಿತ್ರಣ 1999-2000[13]

### ಬೆಂಗಳೂರು ನಗರ

| | ಸರ್ಕಾರಿ | ಅನುದಾನಿತ | ಅನುದಾನರಹಿತ |
|---|---|---|---|
| ಒಟ್ಟು ಶಾಲೆಗಳು | 1,312 | 553 | 898 |
| ಶಿಕ್ಷಕರು | 6,324 | 4,030 | 8,616 |
| ವಿದ್ಯಾರ್ಥಿಗಳು | 2,30,134 | 1,77,600 | 3,44,267 |
| ಶಾಲೆ : ಶಿಕ್ಷಕರು | 1:4.82 | 1:7.28 | 1:9.59 |
| ಶಾಲೆ : ವಿದ್ಯಾರ್ಥಿಗಳು | 1:175 | 1:321.1 | 1:383.3 |
| ಅಧ್ಯಾಪಕರು : ವಿಧ್ಯಾರ್ಥಿಗಳು | 1:36 | 1:44 | 1:39.9 |

ಸರಕಾರಿ ಶಾಲೆಗಳಿಗಿಂತ ಅನುದಾನಿತ ಶಾಲೆಗಳು ಮತ್ತು ಅನುದಾನ ರಹಿತ ಶಾಲೆಗಳಿಗೇ ಹೆಚ್ಚು ಬೇಡಿಕೆ ಇದೆ ಎಂಬುದು ಈ ಅಂಕಿ ಅಂಶದಿಂದ ಕಂಡುಬರುತ್ತದೆ. ವಾಸ್ತವವಾಗಿ, ಖಾಸಗಿ ಶಾಲೆಗಳಲ್ಲಿ ಬಡ ಮತ್ತು ಕೆಳ ಮಧ್ಯಮ ವರ್ಗಗಳ ಮಕ್ಕಳ ಹೆಚ್ಚಿನ ಹಾಜರಾತಿ ಶಿಕ್ಷಣಕ್ಕೆ ಎಷ್ಟು ಬೇಡಿಕೆ ಇದೆ ಮತ್ತು ಸರ್ಕಾರೀ ಶಾಲೆಗಳ ಬಗ್ಗೆ ಎಂತಹ ತಿರಸ್ಕಾರವಿದೆ ಎಂಬುದಕ್ಕೆ ದ್ಯೋತಕ. ಆದರೆ, ಬಡಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಅನೇಕ ಖಾಸಗಿ ಶಾಲೆಗಳು ನೋಂದಣಿಯಾಗಿಲ್ಲ, ಅವುಗಳ ಗುಣಮಟ್ಟ ತೀರಾ ಕಳಪೆ, ಶಿಕ್ಷಕರಿಗೆ ತರಬೇತಿಯಿಲ್ಲ ಮತ್ತು ಸರಕಾರೀ ದಾಖಲೆ ಅಂಕಿ ಸಂಖ್ಯೆಯಲ್ಲಿ ಇವು ಬರುವುದೇ ಇಲ್ಲ.

ಇವೆಲ್ಲಕ್ಕಿಂತಲೂ ಮಿಗಿಲಾಗಿ ಸರಕಾರಿ ಶಾಲೆಗಳ ಮೇಲೆ ಅಧಿಕ ಒತ್ತಡವಿದೆ. ಈ ಅಂಕಿ ಅಂಶಗಳು ತೋರಿಸುವಂತೆ ಪ್ರತಿ ಸರಕಾರಿ ಪ್ರಾಥಮಿಕ ಶಾಲೆಗೆ

[12] 2001 ರ ಜನಗಣತಿ

[13] ಶೈಕ್ಷಣಿಕ ಅಂಕಿ ಅಂಶಗಳ ಪಕ್ಷಿನೋಟ 1999-2000. ಸಾರ್ವಜನಿಕ ಶಿಕ್ಷಣ ಆಯುಕ್ತರರ ಕಛೇರಿ, ಬೆಂಗಳೂರು – 2001

ಕೇವಲ 4-5 ಶಿಕ್ಷಕರಿದ್ದು, ಹಲವು ತರಗತಿಗಳಿಗೆ ಒಬ್ಬರೇ ಶಿಕ್ಷಕರಿರುವ ಪರಿಸ್ಥಿತಿಯಲ್ಲಿ ಶಿಕ್ಷಕರ ಮೇಲೆ ಹೊರೆ ಹಾಗೂ ಸಮಸ್ಯೆ ಅತ್ಯಧಿಕವಾಗಿದೆ. ಆದರೂ, ಸದ್ಯ ಇರುವ ಶಿಕ್ಷಕ – ವಿದ್ಯಾರ್ಥಿ ಅನುಪಾತವನ್ನೇ ಆಧಾರವಾಗಿಟ್ಟುಕೊಂಡು ಸರಕಾರಿ ನೀತಿ ನಿಯಮಗಳು ಶಾಲೆಗಳು ನಡೆಯುವ ಹಾಗೂ ಶಾಲೆಗಳಿಗಿರುವ ಬೇಡಿಕೆಯನ್ನು ಅಳೆಯುತ್ತವೆ. ಹೀಗೆ ಮಾಡುವಾಗ ಶಾಲೆಗಳು ಅಸಮರ್ಪಕವಾಗಿ ಕೆಲಸ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳು ಶಾಲೆಯಿಂದ ಹೊರಗಿದ್ದಾರೆ ಎಂಬುದನ್ನು ಗಮನಿಸುವುದೇ ಇಲ್ಲ. "ಆರ್ಥಿಕವಾಗಿ ಸೂಕ್ತವಲ್ಲದ ಶಾಲೆ"[14] ಗಳನ್ನು ಮುಚ್ಚುವ ಸರ್ಕಾರದ ನಿರ್ಧಾರ ಈ ಪ್ರದೇಶಗಳ ಮಕ್ಕಳಿಗೆ ಸರಕಾರಿ ಶಾಲೆಗಳಿಗೆ ಹೋಗುವ ಹಕ್ಕು ಮತ್ತು ಅವಕಾಶಗಳನ್ನು ಸಹ ಕಸಿದುಕೊಳ್ಳುತ್ತಿದೆ. ಬಡ ಪೀಡಿತ ಪ್ರದೇಶಗಳಲ್ಲಿರುವ ಒಟ್ಟು ಮಕ್ಕಳು ಹಾಗೂ ಇವರಲ್ಲಿ ಶೇಕಡಾ ಎಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಮತ್ತು ಇಂತಹ ಪ್ರದೇಶಗಳಲ್ಲಿರುವ ಒಟ್ಟು ಶಾಲೆಗಳೆಷ್ಟು ಎಂದು ನೋಡುವುದು ಇಲ್ಲಿ ಆಗಬೇಕಾದ ಸೂಕ್ತವಾದ ವಿಶ್ಲೇಷಣೆ.

## ಬಡಪೀಡಿತ ಪ್ರದೇಶಗಳು ಹಾಗೂ ಶಾಲೆಯಿಂದ ಹೊರಗಿರುವ ಮಕ್ಕಳು

ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ ವಿಪರೀತವಾಗುತ್ತಿರುವ ಬಗ್ಗೆ ನಡೆದ ರಾಷ್ಟ್ರೀಯ ಚರ್ಚೆ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರ 2001ರ ಜನವರಿಯಲ್ಲಿ ಒಂದು ಸರ್ವೇಕ್ಷಣೆ ನಡೆಸಿತು. ಸರ್ವೇಕ್ಷಣೆ ವರದಿಯಲ್ಲಿ ಹೇಳಿರುವಂತೆ 6 -14 ವರ್ಷದೊಳಗಿನ ಶಾಲೆಯಿಂದ ಹೊರಗಿರುವ 8.93,675 ಮಕ್ಕಳಲ್ಲಿ ಬೆಂಗಳೂರಿನ ಪಾಲು 33,302 ಮಕ್ಕಳು ಅಥವಾ ಶೇ.3.72 ಮಕ್ಕಳು. ಸ್ಲಮ್ ಪ್ರದೇಶಗಳಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಸರಾಸರಿ ಸಂಖ್ಯೆ ಶೇ.10 ಎಂದು ಹೇಳಲಾಗಿದೆ.[15] ಜೊತೆಗೆ, 6-14 ವರ್ಷದೊಳಗಿನ 1,52,570 ಪರಿಶಿಷ್ಟ ಜಾತಿಯ ಮಕ್ಕಳಲ್ಲಿ 8,579 ಹಾಗೂ 22,268 ಪರಿಶಿಷ್ಟ ವರ್ಗದ ಮಕ್ಕಳಲ್ಲಿ 1,356 ಮಕ್ಕಳು ಬೆಂಗಳೂರು ನಗರ ಪ್ರದೇಶದಲ್ಲಿ ಶಾಲೆಯಿಂದ ಹೊರಗಿದ್ದಾರೆ ಎಂದು ಈ ಸರ್ವೇಕ್ಷಣೆ ಹೇಳಿದೆ.[16]

---

[14] ಅತ್ಯಂತ ಕಡಿಮೆ ವಿದ್ಯಾರ್ಥಿ–ಶಿಕ್ಷಕ ಅನುಪಾತ ಇರುವ ಶಾಲೆಗಳು ಆರ್ಥಿಕವಾಗಿ ಹೊರೆ ಎಂಬ ಭಾವನೆಯಿಂದ ಅಂತಹ 2000 ಶಾಲೆಗಳನ್ನು ಮುಚ್ಚುವ ಕರ್ನಾಟಕ ಸರ್ಕಾರದ ಇತ್ತೀಚಿನ (2000ದ ಮಧ್ಯದಲ್ಲಿನ, ನಿರ್ಧಾರ).

[15] ಇಡೀ ರಾಜ್ಯವನ್ನು ಗಣನೆಗೆ ತೆಗೆದುಕೊಂಡಾಗ ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ.3.16 ಮಕ್ಕಳು ಶಾಲೆಯಿಂದ ಹೊರಗಿದ್ದಾರೆ.

[16] ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿ 1999-2000ದಲ್ಲಿ ನಡೆಸಿದ ಸರ್ವೇಕ್ಷಣೆ.

ಇಡೀ ಜಿಲ್ಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿರುವ ಈ ಮಾಹಿತಿ, ನಗರದ ಬಡತನ ಪೀಡಿತ ಪ್ರದೇಶಗಳಲ್ಲಿ ಶಾಲಾ ಅವಕಾಶಗಳು ತಪ್ಪಿರುವುದು ಅಥವಾ ಶಿಕ್ಷಣ ವಂಚನೆಯ ಬಗ್ಗೆ ಸ್ಪಷ್ಟ ಚಿತ್ರಣ ನೀಡುವುದಿಲ್ಲ. ಈ ಬಡ ಪ್ರದೇಶಗಳಲ್ಲಿ ಶಾಲೆಗಳ ಸ್ಥಿತಿಗತಿ ಹೇಗಿದೆ, ಮಕ್ಕಳು ಎಷ್ಟರ ಮಟ್ಟಿಗೆ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂಬುದರ ಬಗ್ಗೆಯೂ ಈ ಅಂಕಿ ಅಂಶ ಏನೂ ಹೇಳುವುದಿಲ್ಲ. ಬಹು ಮುಖ್ಯವಾಗಿ ಈ ಮಾಹಿತಿ ಎರಡು ಪ್ರಮುಖ ವಿಚಾರಗಳ ಬಗ್ಗೆ ಅಸ್ಪಷ್ಟ – ಒಂದು, ಬಡ ಪ್ರದೇಶಗಳಿಗಾಗಿರುವ ಶಾಲೆಗಳ ಒಟ್ಟು ಸಂಖ್ಯೆ ಇಲ್ಲ; ಎರಡು, ಶಿಕ್ಷಕ – ವಿದ್ಯಾರ್ಥಿ ಅನುಪಾತ, ಬಡಪ್ರದೇಶಗಳಲ್ಲಿ ಶಾಲಾ ನಿರ್ವಹಣೆ ಹೇಗೆ, ಹಾಗೂ ಶಾಲೆಯಿಂದ ಹೊರಗಿರುವ ಒಟ್ಟು ಮಕ್ಕಳ ಸಂಖ್ಯೆ ವಿವರಗಳೂ ಇಲ್ಲಿ ಅಲಭ್ಯ.

ಬೆಂಗಳೂರಿನ ಐದು ಬಡ ಪೀಡಿತ ಪ್ರದೇಶಗಳಲ್ಲಿ ಎನ್.ಐ.ಎ.ಎಸ್. (ನಿಯಾಸ್)[17] ನಡೆಸಲಾದ ಒಂದು ಮಾದರಿ ಸರ್ವೇಕ್ಷಣೆ, ಅತ್ಯಧಿಕ ಸಂಖ್ಯೆಯಲ್ಲಿ ಮಕ್ಕಳು ಶಾಲೆಯಿಂದ ಹೊರಗಿರುವುದನ್ನು ತೋರಿಸಿದೆ. ಈ ಸರ್ವೇಕ್ಷಣೆ ಆಧರಿಸಿರುವ ಶಾಲೆಯಿಂದ ಹೊರಗಿರುವ ಮಕ್ಕಳ ಮಾಹಿತಿ ಈ ರೀತಿ ಇದೆ.

### ಆಯ್ದ ವಾರ್ಡ್‌ಗಳ ಬಡ ಪೀಡಿತ ಪ್ರದೇಶಗಳು ಹಾಗೂ ಮಕ್ಕಳ ಶಿಕ್ಷಣ ಅವಕಾಶಗಳನ್ನು ಕುರಿತು ಸರ್ವೇಕ್ಷಣೆ

| ಸ್ಥಳ | ವಾರ್ಡ್ ಸಂಖ್ಯೆ | ಕುಟುಂಬಗಳ ಸಂಖ್ಯೆ | ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ | ಶಾಲೆಯ ಹೊರಗಿರುವ ಮಕ್ಕಳ ಸಂಖ್ಯೆ | ಶಾಲೆಯಿಂದ ಹೊರಗಿರುವ ಶೇ. ಮಕ್ಕಳ ಸಂಖ್ಯೆ |
|---|---|---|---|---|---|
| ಲಿಂಗರಾಜಪುರಂ | 88 | 167 | 376 | 61 | 13.9 |
| ಇಸ್ರೋ ಸ್ಥಳ | 82 | 210 | 428 | 83 | 16.11 |
| ಮಾರ್ಕಂಡೇಯ ಲೇಔಟ್ | 45 | 112 | 231 | 98 | 29.5 |
| ರಾಮಕೃಷ್ಣ ಸೇವಾ ನಗರ | 24 | 224 | 466 | 128 | 21.5 |
| ರಾಜಗೋಪಾಲ ನಗರ ಸ್ಥಳ | 24 | 223 | 243 | 226 | 48.1 |

ರಾಜಗೋಪಲನಗರದಲ್ಲಿ ತೀರಾ ಇತ್ತೀಚೆಗೆ ರಾಯಚೂರಿನಿಂದ ವಲಸೆ ಬಂದಿರುವ ಕಾರ್ಮಿಕ ವರ್ಗದವರು ಇರುವುದರಿಂದ ಅಲ್ಲಿ ಅತ್ಯಧಿಕ (48%) ಮಕ್ಕಳು

[16] ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿ 1999-2000ದಲ್ಲಿ ನಡೆಸಿದ ಸರ್ವೇಕ್ಷಣೆ.

[17] ಈ ಸರ್ವೇಕ್ಷಣೆಯನ್ನು 2001ರ ಮೇ–ಜೂನ್ ಅವಧಿಯಲ್ಲಿ ಡಾ. ಕೀರ್ತಿಶೇಖರ್, ಕೆ.ಟಿ.ರಾಮಚಂದ್ರ ಮತ್ತು ಕೆ.ಸಿ.ಜ್ಯೋತಿ ನಡೆಸಿದರು.

ಶಾಲೆಯಿಂದ ಹೊರಗಿರುವುದು ಕಂಡು ಬರುವರು. ಹೀಗಾಗಿ ಇದು ಇತರ ಬಡ ಪ್ರದೇಶಗಳ ಸ್ಥಿತಿಯ ಪ್ರಾತಿನಿಧಿಕವೆನಿಸುವುದಿಲ್ಲ. ಇದರಿಂದಾಗಿ ಉಳಿದ ಸ್ಲಂಗಳಿಂದ ಹೊರಹೊಮ್ಮಿರುವ ಅಂಕಿ ಅಂಶಗಳ ಆಧಾರದಿಂದ ಒಟ್ಟಾರೆ ಶೇ. 21 ಮಕ್ಕಳು ಶಾಲೆಯಿಂದ ಹೊರಗಿದ್ದಾರೆಂದು ಹೇಳಬಹುದು. ಇದರಲ್ಲಿ ಸ್ಪಷ್ಟವಾಗಿ ಕಾಣುವುದು, ಇತ್ತೀಚೆಗೆ ಸರ್ಕಾರ ನಡೆಸಿರುವ ಸಮೀಕ್ಷೆಯಂತೆ ಶೇ. 10 ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಎಂದು ಹೇಳಿರುವ ವರದಿಗಳಿಗಿಂತ ಹೆಚ್ಚು ಮಕ್ಕಳು ಬಡ ಪೀಡಿತ ಪ್ರದೇಶಗಳಲ್ಲಿ ಶಿಕ್ಷಣ ವಂಚಿತ ಪರಿಸ್ಥಿತಿಯಲ್ಲಿ ಇದ್ದಾರೆ.

ಬೆಂಗಳೂರಿನ ಬಡಪೀಡಿತ ಪ್ರದೇಶಗಳಲ್ಲಿ ಕಾರ್ಯನಿರತರಾಗಿರುವ ಸರ್ಕಾರೇತರ ಸಂಸ್ಥೆಗಳೂ ಸಹ ಅತ್ಯಧಿಕ ಸಂಖ್ಯೆಯಲ್ಲಿ ಮಕ್ಕಳು ಶಾಲೆಯಿಂದ ಹೊರಗಿರುವುದನ್ನು ಗುರುತಿಸಿವೆ. ಉದಾಹರಣೆಗೆ, ಪರಸ್ಪರ ಎಂಬ ಸರ್ಕಾರೇತರ ಸಂಸ್ಥೆ ಮಲ್ಲೇಶ್ವರಂ ಕ್ಷೇತ್ರದ 13 ಪ್ರದೇಶಗಳಲ್ಲಿ 2001ರಲ್ಲಿ ನಡೆಸಿದ ಸಮೀಕ್ಷೆ 17 ಸ್ಲಂಗಳಲ್ಲಿ 9,737 ಮಕ್ಕಳು ಇರುವುದನ್ನು ಗುರುತಿಸಿದೆ. ಇದರಲ್ಲಿ ಶೇ.52 ಮಕ್ಕಳು ಶಾಲೆಗೆ ಹೋಗುತ್ತಿದ್ದರೆ, ಶೇ. 17 ಮಕ್ಕಳು ದುಡಿಮೆಯಲ್ಲಿ ಸಿಲುಕಿದ್ದಾರೆ. ಉಳಿದ ಶೇ.37 ಮಕ್ಕಳು ಶಾಲೆಯಲ್ಲೂ ಇಲ್ಲ ಮತ್ತು ದುಡಿಮೆಯಲ್ಲೂ ಬಿದ್ದಿಲ್ಲ.[18]

ಬೆಳೆಯುತ್ತಿರುವ ನಗರಗಳಲ್ಲಿ ವಾಸಮಾಡಿದರೂ ಅನೇಕ ಮಕ್ಕಳಿಗೆ ಜೀವನದುದ್ದಕ್ಕೂ ನೆರವಾಗಬಲ್ಲ ಸಾಕ್ಷರತೆಯನ್ನು ನೀಡಬಲ್ಲ ಮೂಲ ಶಿಕ್ಷಣ ಲಭ್ಯವಾಗುವುದಿಲ್ಲ. ಶಿಕ್ಷಣ ಬೇಕು ಎಂಬ ಸಾರ್ವಜನಿಕ ಬೇಡಿಕೆ ಮುಗಿಲು ಮುಟ್ಟಿದ್ದರೂ, ಅದಕ್ಕನುಗುಣವಾಗಿ ಶಿಕ್ಷಣದ ಸೇವೆ ಮತ್ತು ಮೂಲಭೂತ ಸೌಕರ್ಯಗಳಲ್ಲಿ ಅಂತಹ ಬದಲಾವಣೆಗಳೇನೂ ಆಗಿಲ್ಲ. ಬೆಳೆಯುತ್ತಿರುವ ಮಹಾನಗರವಾದ ಬೆಂಗಳೂರು ಅದಕ್ಕೊಂದು ನಿದರ್ಶನ. ಈ ಪ್ರದೇಶಗಳ ಮಕ್ಕಳಿಗಾಗಿ ಸಮರ್ಪಕ ನಡೆಯುವ ಸಾಕಷ್ಟು ಸಂಖ್ಯೆಯ ಶಾಲೆಗಳನ್ನು ಒದಗಿಸದಿರುವುದು ಹಲವಾರು ಅಡ್ಡ ಪರಿಣಾಮಗಳಿಗೆ ಕಾರಣವಾಗಿದೆ. ಹಲವಾರು ಉದ್ದಿಮೆಗಳಲ್ಲಿ ಹಾಗೂ ಮನೆಗೆಲಸದಲ್ಲಿ ಹೆಚ್ಚುತ್ತಿರುವ ಬಾಲಕಾರ್ಮಿಕರ ಸಂಖ್ಯೆ, ಎಲ್ಲಿಯೂ ಇಲ್ಲದ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳ – ದುಡಿಯದ ಮತ್ತು ಶಾಲೆಯಲ್ಲಿರದ ಮಕ್ಕಳು[19] ಮತ್ತು ಅತ್ಯಧಿಕ ಸಂಖ್ಯೆಯಲ್ಲಿರುವ ಬಡ ಹಾಗೂ ಅಶಿಕ್ಷಿತ ದುಡಿಮೆಗಾರರ ಸಂಖ್ಯೆ ಇವನ್ನೆಲ್ಲಾ ಇದರ ಅಡ್ಡಪರಿಣಾಮಗಳು ಎಂದು ಹೇಳಬಹುದು.

---

[18] ನಮ್ಮೂರ ಮಕ್ಕಳು (ಮಕ್ಕಳ ಕುರಿತು ಅಂಕಿಸಂಖ್ಯೆ), ಪರಸ್ಪರ, ಬೆಂಗಳೂರು, 2001)

[19] ಡಿ.ಪಿ. ಚೌದರಿ, A dynamic profile of child labour in India, ಐ.ಎಲ್.ಒ., ನವದೆಹಲಿ, 1999

## ಬಡ ಪ್ರದೇಶಗಳು ಮತ್ತು ಅನೌಪಚಾರಿಕ ಹಣಕಾಸು ಸ್ಥಿತಿ

ನಗರದ ಅನೌಪಚಾರಿಕ ಹಣಕಾಸಿನ ಸ್ಥಿತಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. 1973 - 92 ರೊಳಗೆ ಗೃಹ ಆಧಾರಿತ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿದೆ ಎಂದು ರಾಮಚಂದ್ರ ಮತ್ತು ಸುಬ್ರಮಣ್ಯಂ ಅವರ ಅಧ್ಯಯನ ತೋರಿಸಿದೆ.[20] ಅದೇ ರೀತಿಯ ಪ್ರವೃತ್ತಿ ಈಗಲೂ ಇರುವುದಾಗಿ ಇತ್ತೀಚಿನ ಅಧ್ಯಯನಗಳಲ್ಲಿ ಕಂಡುಬಂದಿದೆ.[21] ಆಗಿಲಿಂದಲೂ, ನಗರದ ಬೆಳವಣಿಗೆಯ ಸ್ಫೋಟದೊಡನೆ, ಬಡ ಪೀಡಿತ ಪ್ರದೇಶಗಳು ಕೇವಲ ಜನವಸತಿಯ ಪ್ರದೇಶಗಳಾಗಿರದೆ, ಅಲ್ಲಿ ಹಲವಾರು ಆರ್ಥಿಕಾಭಿವೃದ್ಧಿ ಚಟುವಟಿಕೆಗಳೂ ನಡೆಯುವ ತಾಣಗಳಾಗಿವೆ [22] ಮನೆಯಲ್ಲಿ ತಯಾರಿಸಿದ ಆಹಾರ ಪದಾರ್ಥಗಳು; ಚೂರು ಪಾರು ಹೊಲಿಗೆ ಕೆಲಸಗಳು, *ಅಗರಬತ್ತಿ* ಮತ್ತು *ಬೀಡಿ* ತಯ್ಯಾರಿ, ಇತ್ಯಾದಿ ಈ ಎಲ್ಲವೂ ಇಂತಹ ಬಡಪೀಡಿತ ಪ್ರದೇಶಗಳಲ್ಲೇ ನಡೆದಿದೆ. ಈ ಎಲ್ಲದರ ಪರಿಣಾಮವಾಗಿ, ಬಡತನ ಪ್ರದೇಶಗಳು ಹಲವಾರು ಸೇವಾ ಕೆಲಸಗಳನ್ನು ಮಾಡುವವರು ಹಾಗೂ ದುಡಿಯುವ ವರ್ಗದವರಿಗೆ ವಸತಿಯಾಗುವುದಷ್ಟೇ ಅಲ್ಲ, ಅನೇಕ ಅನೌಪಚಾರಿಕ ಆರ್ಥಿಕ ಚಟವಟಿಕೆಗಳು, ಉತ್ಪಾದನೆಗಳನ್ನು ಗುತ್ತಿಗೆ ತೆಗೆದುಕೊಳ್ಳುವುದೇ ಮೊದಲಾದ ಕೆಲಸಗಳ ಕೇಂದ್ರಗಳಾಗಿವೆ.

## ನಗರಗಳ ಬೆಳವಣಿಗೆ ಮತ್ತು ಬಾಲಕಾರ್ಮಿಕ ಪದ್ಧತಿ

ನಗರಗಳಲ್ಲಿ ಶಿಕ್ಷಣ ಸೌಲಭ್ಯಗಳ ನಿಧಾನಗತಿಯ ಬೆಳವಣಿಗೆ ಮತ್ತು ಅದರಿಂದಾಗಿರುವ ಕಡಿಮೆ ಸಾಕ್ಷರತೆಯಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ಬಾಲಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಅನೇಕ ಉದ್ಯೋಗಗಳು ಹಾಗೂ ಸೇವಾ ಕ್ಷೇತ್ರಗಳಲ್ಲಿ ದುಡಿಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದರೂ, ನಗರದಲ್ಲಿ ದುಡಿಯುತ್ತಿರುವ ಮಕ್ಕಳ ಸಂಖ್ಯೆಯ ಬಗ್ಗೆ ಯಾವುದೇ ನಿಖರವಾದ ಸರ್ವೇಕ್ಷಣೆ ನಡೆದಿಲ್ಲ ಮತ್ತು ಅಂಕಿ ಸಂಖ್ಯೆ ಲಭ್ಯವಿಲ್ಲ. ರಾಜ್ಯದ ಕಾರ್ಮಿಕ ಇಲಾಖೆಯ

---

[20] ಹಾನ್ಸ್ ಸ್ಕೆಂಕ್, ಭಾರತದ ಸ್ಲಂಗಳಲ್ಲಿ ಜೀವನ, ಬೆಂಗಳೂರಿನ ಪ್ರಕರಣಾಧ್ಯಯನ, IDPAD/ಮನೋಹರ್, ದೆಹಲಿ 2001.

[21] ಸಾಲೋಮನ್ / ಬೆಂಜಮಿನ್ ಮತ್ತು ಆರ್. ಭುವನೇಶ್ವರಿ, ನಗರಾಡಳಿತ ಮತ್ತು ಬಡತನ, ಬೆಂಗಳೂರಿನಲ್ಲಿನ ಜೀವನ ದೃಷ್ಟಿಕೋನ, 1999; ಜೇಮ್ಸ್ ಹೀಟ್ಸ್ ಮನ್ (Becoming Silicon valley) ವಿಚಾರಣ ಸಂಕಿರಣ, ಸಂಪುಟ.503, 2001

[22] ಸಾಲೋಮನ್ / ಬೆಂಜಮಿನ್ ಮತ್ತು ಆರ್. ಭುವನೇಶ್ವರಿ, ನಗರಾಡಳಿತ ಮತ್ತು ಬಡತನ, ಬೆಂಗಳೂರಿನಲ್ಲಿನ ಜೀವನ ದೃಷ್ಟಿಕೋನ, 1999

ಕಛೇರಿಯ ಮಾಹಿತಿ, ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ದುಡಿಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ತೋರಿಸಿದರೂ, ನಿಜವಾದ ಅಂಕಿಸಂಖ್ಯೆ ಮಾತ್ರಾ ಅಲಭ್ಯ.[23] ಉದಾಹರಣೆಗೆ, 1996-97ರ ಅವಧಿಯಲ್ಲಿ ಬಾಲಕಾರ್ಮಿಕ ಘಟಕವು ಅಪಾಯಕಾರಿ ಉದ್ದಿಮೆಗಳಲ್ಲಿ 12 ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ 88 ಮಕ್ಕಳು ಬೆಂಗಳೂರಿನಲ್ಲಿ ದುಡಿಯುತ್ತಿರುವುದಾಗಿ ದಾಖಲಿಸಿದೆ. 1999-2000ದಲ್ಲಿ ಅಪಾಯಕಾರಿ ಉದ್ದಿಮೆಯಲ್ಲಿ 33 ಹಾಗೂ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ 104 ಮಕ್ಕಳು ಹಾಗೂ 2000-2001ರಲ್ಲಿ 147 ಮಕ್ಕಳು ಅಪಾಯಕಾರಿ ಉದ್ದಿಮೆಗಳಲ್ಲೂ 7015 ಮಕ್ಕಳು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಘಟಕವು ದಾಖಲು ಮಾಡಿದೆ.

ಈ ರೀತಿಯ ಮಾಹಿತಿ ನಂಬಲನರ್ಹ ಮತ್ತು ನಗರದ ನೈಜ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲ. ಉದಾಹರಣೆಗೆ, ನಗರದಲ್ಲಿ ಹೆಚ್ಚುತ್ತಿರುವ ಬಾಲಕಾರ್ಮಿಕರ ಸ್ಥಿತಿಯ ಬಗ್ಗೆ ಸರ್ಕಾರೇತರ ಸಂಸ್ಥೆಗಳು ದಾಖಲಿಸಿವೆ. ಮಲ್ಲೇಶ್ವರಂ ಕ್ಷೇತ್ರದಲ್ಲಿ ಪರಸ್ಪರ ಸಂಸ್ಥೆ ನಡೆಸಿರುವ ಸಮೀಕ್ಷೆ ಶೇ. 11 ಮಕ್ಕಳು ಕೂಲಿಗಾಗಿ ದುಡಿಮೆಯಲ್ಲಿರುವುದಾಗಿ ತೋರಿಸಿದೆ. ಜೊತೆಗೆ, ಬೆಂಗಳೂರಿನ ಐದು ಸ್ಲಂಗಳಲ್ಲಿ NIAS ನಡೆಸಿದ ಸಮೀಕ್ಷೆ ಈ ಮುಂದೆ ನೀಡಿರುವ ಸಂಖ್ಯೆಯಲ್ಲಿ 6 ರಿಂದ 14 ವರ್ಷದ ಮಕ್ಕಳು ಕೂಲಿಗಾಗಿ ದುಡಿಮೆಯಲ್ಲಿರುವುದಾಗಿ ತೋರಿಸಿದೆ.

- ಇಸ್ರೋ ಸ್ಲಂನಲ್ಲಿ ಸರ್ವೇಕ್ಷಣೆ ಮಾಡಲಾದ 515 ಮಕ್ಕಳಲ್ಲಿ ಶೇ. 16 ಮಕ್ಕಳು ದುಡಿಯುತ್ತಿದ್ದಾರೆ. ಗಂಡು ಮಕ್ಕಳು ಕಟ್ಟಡ ನಿರ್ಮಾಣದಲ್ಲಿ ಕೂಲಿಗಳಾಗಿ, ಏನಾದರೂ ಮಾರುವುದು ಅಥವಾ ಹೋಟೆಲ್‌ಗಳಲ್ಲಿ ಕೆಲಸ ಮಾಡಿದರೆ, ಹೆಣ್ಣು ಮಕ್ಕಳು ಮನೆಗೆಲಸ ಮತ್ತು ಕಟ್ಟಡ ಕಾರ್ಮಿಕರಾಗಿದ್ದಾರೆ.

- ಮಾರ್ಕಂಡೇಯ ನಗರದಲ್ಲಿ ಶಾಲೆಯಿಂದ ಹೊರಗಿರುವ 332 ಮಕ್ಕಳಲ್ಲಿ ಶೇ. 30 ಮಕ್ಕಳು ವಿವಿಧ ರೀತಿಯ ದುಡಿಮೆಯಲ್ಲಿ ತೊಡಗಿದ್ದಾರೆ.

---

[23] 2001ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಾಲಕಾರ್ಮಿಕ ಘಟಕವನ್ನು ವೈಯಕ್ತಿಕವಾಗಿ ಭೇಟಿ ಮಾಡಲಾಯಿತು. ಅವರು ಯಾವುದೇ ಪ್ರಕಟಿತ ದಾಖಲೆ ಅಥವಾ ಮಾಹಿತಿ ನೀಡಲಿಲ್ಲ. ಈ ವರದಿಯಲ್ಲಿ ಪ್ರಕಟಿಸಲಾಗಿರುವ ಅಂಕಿಸಂಖ್ಯೆ ಬಾಲಕಾರ್ಮಿಕ ಘಟಕದ ಅಧಿಕಾರಿಗಳು 31 ಮಾರ್ಚ್ 2001ರಂದು ನೀಡಿರುವುದು.

ಗಂಡು ಹುಡುಗರು ಮೆಕಾನಿಕ್‌ಗಳಾಗಿ, ವೆಲ್ಡಿಂಗ್ ಕೆಲಸ, ಕೂಲಿ, ಟೈಲರಿಂಗ್, ವಾಹನಗಳ ಶುದ್ಧೀಕರಣ ಮತ್ತು ಹೊತ್ತು ಮಾರುವವರಾಗಿ ಕೆಲಸ ಮಾಡುತ್ತಿದ್ದಾರೆ. ಹುಡುಗಿಯರು *ಅಗರಬತ್ತಿ*, *ಬೀಡಿ* ಮಾಡುವುದು, ಮನೆಗೆಲಸ ಮತ್ತು ಬಣ್ಣದ ಪೆನ್ಸಿಲ್ ಕಾರ್ಖಾನೆಯಲ್ಲಿ ಹಾಗೂ ಮದುವೆ ಮನೆಗಳಲ್ಲಿ ಪಾತ್ರೆತೊಳೆಯುವುದು, ಕಸಗುಡಿಸುವುದು ಮಾಡುತ್ತಿದ್ದಾರೆ.

- ಲಿಂಗರಾಜಪುರಂನಲ್ಲಿ ಶೇ. 15.5 ಮಕ್ಕಳು ದುಡಿಯುತ್ತಿದ್ದಾರೆ. ಗಂಡು ಮಕ್ಕಳು ಕಟ್ಟಡ ಕೂಲಿಕಾರ್ಮಿಕರಾಗಿ, ಗೆರಾಜ್ ಮೆಕಾನಿಕ್‌ಗಳಾಗಿ, ಮುದ್ರಣದಲ್ಲಿ ಹಾಗೂ ಚಿಂದಿ ಆಯುವವರಾಗಿದ್ದಾರೆ. ಹುಡುಗಿಯರು *ಅಗರಬತ್ತಿ* ಉಜ್ಜುವುದು, ಮನೆಗೆಲಸ ಹಾಗೂ ಕಟ್ಟಡ ಕೂಲಿ ಕಾರ್ಮಿಕರಾಗಿದ್ದಾರೆ.

- ರಾಮಕೃಷ್ಣ ಸೇವಾ ನಗರದಲ್ಲಿ ಶೇ. 21 ಮಕ್ಕಳು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಟ್ಟಡ ನಿರ್ಮಾಣ ಕೂಲಿಗಳಾಗಿ ದುಡಿಯುವುದಲ್ಲದೆ, ಗೆರಾಜ್‌ಗಳಲ್ಲಿ ಹಾಗೂ ಪೆಟ್ರೋಲ್ ಬಂಕ್‌ಗಳಲ್ಲಿ ಮೆಕಾನಿಕ್‌ಗಳಾಗಿ, ಹಣ್ಣು, ತರಕಾರಿ ಮಾರುವುದು ಹಾಗೂ ಹೋಟೆಲ್‌ಗಳಲ್ಲಿ ಸರಬರಾಜು ಮಾಡುವವರಾಗಿದ್ದಾರೆ.

- ರಾಜಗೋಪಾಲನಗರದಲ್ಲಿ ಭೇಟಿಮಾಡಿದ 475 ಮಕ್ಕಳಲ್ಲಿ ಶೇ. 48 ಮಕ್ಕಳು ದುಡಿಮೆಯಲ್ಲಿದ್ದಾರೆ. ಬಹುತೇಕ ಗಂಡು ಮಕ್ಕಳು ಕಟ್ಟಡ ಕೂಲಿಕಾರ್ಮಿಕರಾಗಿ ದುಡಿದರೆ ಹುಡುಗಿಯರು ಮನೆಗೆಲಸಕ್ಕೆ ಹೋಗುತ್ತಾರೆ.

ಈ ರೀತಿಯ ಅಂಕಿಅಂಶಗಳು ಅತ್ಯಧಿಕವಾಗಿ ಮಕ್ಕಳು ದುಡಿಮೆಯಲ್ಲಿ ಇದ್ದಾರೆ ಎಂದು ಹೇಳಿದರೂ, ಸರಕಾರದ ಅಧಿಕೃತ ಒಪ್ಪಿಗೆ ಮಾತ್ರ ಸಿಗುವುದಿಲ್ಲ.[24] ನಗರದ ಅರ್ಥ ವ್ಯವಸ್ಥೆಯಲ್ಲಿ ವ್ಯಾಪಕವಾಗಿ ಪಸರಿಸಿರುವ ಹಾಗೂ ಬಳಸಲ್ಪಡುತ್ತಿರುವ ಬಾಲಕಾರ್ಮಿಕ ಪದ್ಧತಿ ನಗರದ ಬೆಳವಣಿಗೆ, ಶಿಕ್ಷಣದ ವಂಚನೆ ಹಾಗೂ ಬಾಲಕಾರ್ಮಿಕ ಪದ್ಧತಿಗಿರುವ ನಂಟಿನತ್ತ ಗಮನ ಸೆಳೆಯುವುದು. ಬಾಲಕಾರ್ಮಿಕ ಪದ್ಧತಿಯ ಮೇಲೆ ನಿಯಂತ್ರಣವಿಲ್ಲದ ಕಾರಣ, ಮಕ್ಕಳು ಅದರಲ್ಲೂ

[24] ಬಾಲಕಾರ್ಮಿಕ ಘಟಕ, ಮಾರ್ಚ್ 31,2001

8-14 ವರ್ಷದೊಳಗಿನ ಮಕ್ಕಳು ಹೋಟೆಲ್, ಅಂಗಡಿ ಮುಂಗಟ್ಟು, ಗ್ಯಾರೇಜ್ ಮತ್ತು ಕಾಫಿ ಟೀ ಅಂಗಡಿಗಳಲ್ಲಿ ದುಡಿಯುವುದು ಸಾಮಾನ್ಯವಾಗಿದೆ[25]. ಬೆಂಗಳೂರು ನಗರದಲ್ಲಿ ದುಡಿಯುವ ಮಕ್ಕಳನ್ನು ಕುರಿತು ನಡೆದ ಅಧ್ಯಯನದಂತೆ ಬಹುತೇಕ ಇಂತಹ ಮಕ್ಕಳು 12-14 ವರ್ಷದವರಾಗಿದ್ದಾರೆ.[26] ಈ ವಯಸ್ಸಿನ ಮಕ್ಕಳು ಅದರಲ್ಲೂ ಗಂಡ ಮಕ್ಕಳು ಅತ್ಯಂತ ವಿಧೇಯರೂ ಹಾಗೂ ಇಂತಹ ಉದ್ದಿಮೆಗಳಲ್ಲಿ ಬಹಳ ಉಪಯೋಗಕ್ಕೆ ಬರುವವರು ಎಂದೂ ಹೇಳಲಾಗುವುದು. ಇದಕ್ಕಿಂತಲೂ ಹೆಚ್ಚಾಗಿ, ಅವರಿಗೆ ಕೊಡುವ ಕೂಲಿ ಅತ್ಯಲ್ಪ. ಆದರೆ ಇದೇ ಮಕ್ಕಳು ಬೆಳೆದಂತೆ ಅವರು ಅವಿಧೇಯರಾಗುತ್ತಾರೆ ಹೀಗಾಗಿ ಕೆಲಸಕ್ಕೆ ಅನರ್ಹರೆಂದು ಪರಿಗಣಿಸಲಾಗುತ್ತದೆ. ಹೀಗಾಗಿ 14 ವರ್ಷ ದಾಟಿದ ಮಕ್ಕಳನ್ನು ಕೆಲಸದಿಂದ ಓಡಿಸುತ್ತಾರೆ. ಅಶಿಕ್ಷಿತರು, ಯಾವುದೇ ತರಬೇತಿ ಇಲ್ಲದ ಇಂತಹವರಿಗೆ ಉದ್ಯೋಗದ ಮಾರುಕಟ್ಟೆಯಲ್ಲಿ ಯಾವುದೇ ಬೆಲೆ ಇಲ್ಲದೆ, ಇಂತಹ ಹುಡುಗರೇ ಬಡಪೀಡಿತ ಪ್ರದೇಶಗಳಲ್ಲಿ "ಅಡ್ಡಾಡು" ವುದನ್ನು ನೋಡಬಹುದು.

## ಬಡ ಪ್ರದೇಶಗಳು ಮತ್ತು ಶೈಕ್ಷಣಿಕ ಅವಕಾಶಗಳು

ನಗರಗಳ ಬಡ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸಿ ನಡೆಸಲು ಇರುವ ಸಮಸ್ಯೆಗಳಿಗೆ ಹಲವಾರು ಕಾರಣಗಳಿವೆ. ಅದರಲ್ಲೊಂದು, ಸ್ಲಂಗಳು ಅಥವಾ ಬಡ ಪ್ರದೇಶಗಳು ಕಾನೂನು ಬಾಹಿರ, ಹಾಗೂ ಅವು ತಾತ್ಕಾಲಿಕ ವಸತಿಗಳು. ಹೀಗಾಗಿ, ಈ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸಲು ಯಾವುದೇ ಪ್ರಯತ್ನಗಳು ಅಷ್ಟಾಗಿ ಆಗಿಲ್ಲ. ಇದರ ಪರಿಣಾಮ ಬಹುತೇಕ ಇಂತಹ ಪ್ರದೇಶಗಳಲ್ಲಿ ಸರಕಾರೀ ಅಥವಾ ಕಾರ್ಪೋರೇಶನ್ ಶಾಲೆಗಳಿಲ್ಲ. ಇಷ್ಟಾಗಿಯೂ ಅಲ್ಲೇನಾದರೂ ಶಾಲೆಯಿದ್ದರೆ ಅವುಗಳ ಗುಣಮಟ್ಟ ತೀರಾ ಕಳಪೆ ಮತ್ತು ಆ ಪ್ರದೇಶದ ಎಲ್ಲ ಮಕ್ಕಳಿಗೆ ಶಾಲೆ ತಲುಪುವುದಿಲ್ಲ ಮತ್ತು ಶಿಕ್ಷಕರ ಹಾಗೂ ಮಕ್ಕಳ ಗೈರು ಹಾಜರಿ ಅತ್ಯಧಿಕ. ಇದೆಲ್ಲದರ ಜೊತೆ, ಹಲವಾರು ವ್ಯತ್ಯಯಗಳಿಗೆ ಇಂತಹ

[25] ಗೆರಾಜ್, ವರ್ಕ್‌ಶಾಪ್, ಟೈರ್ ರಿಟ್ರೆಡಿಂಗ್, ಕಟ್ಟಡ ನಿರ್ಮಾಣ, ಅಗರಬತ್ತಿ ಮತ್ತು ಬೀಡಿ ಸುತ್ತುವುದು, ಚಿಂದಿ ಆಯುವುದು, ಮಡಿಕೆ ಕುಡಿಕೆ ಮಾಡುವುದು, ಕಲ್ಲು ಒಡೆಯುವುದು ಮತ್ತು ಲೈಂಗಿಕ ಕೆಲಸ ಇವುಗಳನ್ನು ಅಪಾಯಕಾರಿ ಕೆಲಸಗಳೆಂದು ಕಾರ್ಮಿಕ ಇಲಾಖೆ ಗುರುತಿಸಿದೆ. ಅಂಗಡಿ ಮುಂಗಟ್ಟು, ಹೋಟೆಲ್ ಮತ್ತು ವಾಣಿಜ್ಯ ಕೇಂದ್ರಗಳನ್ನು ಅಪಾಯಕಾರಿಯಲ್ಲದ ಕೆಲಸಗಳ ಕೇಂದ್ರಗಳೆಂದು ಗುರುತಿಸಲಾಗಿದ್ದರೂ ಈ ಕ್ಷೇತ್ರಗಳಲ್ಲೇ ಅಪ್ರಾಪ್ತ ವಯಸ್ಕ ಮಕ್ಕಳು ಹೆಚ್ಚಾಗಿ ದುಡಿಯುವುದು.

[26] ಎಸ್. ಜಿ. ಸುರೇಶ್ ಕುಮಾರ್ ಮತ್ತು ಎಂ.ವಿ. ಶ್ರೀನಿವಾಸಗೌಡ, "Child labour in Karnataka Needs a holistic approach" – ಲಿಟಲ್ ಹ್ಯಾಂಡ್ಸ್ ಇನ್ ಚೈನ್ಸ್ : ಚೈಲ್ಡ್ ಲೇಬರ್ ಇನ್ ಇಂಡಿಯಾ ಪುಸ್ತಕದಲ್ಲಿ. ಸಂಪಾದಕರು, ಪಿ. ಜಗದೀಶ್ ಗಾಂಧಿ ಮತ್ತು ಸುಶೀಲಾ ಸುಬ್ರಮಣ್ಯಂ, ಬೆಂಗಳೂರು, ಸೌತ್ ಎಕೊನಾಮಿಸ್ಟ್ 2001).

ಶಾಲೆಗಳು ಬಲಿಯಾಗುತ್ತಲೇ ಇರುವುದು. ಇಡೀ ಒಂದು ತಿಂಗಳು ಶಿಕ್ಷಕರು ಗೈರು ಹಾಜರಾದರೂ ಹೇಳುವವರು ಕೇಳುವವರು ಯಾರೂ ಇರುವುದಿಲ್ಲ. ಇನ್ನೊಂದು ತಿಂಗಳು ಮಧ್ಯಾಹ್ನದ ಊಟ ಬರುವುದಿಲ್ಲ, ಮತ್ತೆ ಕೆಲವು ತಿಂಗಳು ನಂತರ ಸ್ಲಂನಲ್ಲಿ ಏನೋ ದೊಂಬಿ, ಶಾಲೆ ಮುಚ್ಚಿರುವುದು. ಮಳೆ, ನೆರೆ ಬಂದರೆ ಶಾಲೆಗೆ ರಜೆ ಅಥವಾ ಮಕ್ಕಳೆಲ್ಲಾ ಬೇರೆ ಜಾಗಕ್ಕೆ ವಲಸೆ ಹೋಗಿರುವರು. ಇಂತಹ ಅತೀಕಳಪೆ ಹಾಗೂ ಕೆಲಸ ಮಾಡದ ಶಾಲೆಗಳಿಂದಾಗಿ, ಬಡತನ ಪ್ರದೇಶಗಳಲ್ಲಿ ಜನರ ಸ್ಥಿತಿ ಮೂಲೆ ಗುಂಪಾಗಿದೆ ಹಾಗೂ ಅವರ ಆಸಕ್ತಿ ಕುಂಠಿತವಾಗಿದೆ ಎಂದರೆ ಅಚ್ಚರಿಯೇನಲ್ಲ.

ಗ್ರಾಮೀಣ ಪ್ರದೇಶಗಳಲ್ಲಿರುವಂತಹ ಜನರ ಸಮುದಾಯ ಭಾವನೆ ಅಥವಾ ನಿರ್ದಿಷ್ಟ ಪ್ರದೇಶ, ಸಮುದಾಯಕ್ಕೆ ಸೇರಿದವರೆಂಬ ಭಾವ ನಗರಗಳ ಬಡತನ ಪ್ರದೇಶಗಳಲ್ಲಿ ಇರುವುದಿಲ್ಲ. ಇಲ್ಲಿರುವ ಬಹುತೇಕರು ದೀರ್ಘಕಾಲದಿಂದ ಅಲ್ಲಿ ನೆಲಸಿದ್ದರೂ, ಆಯಾ ಸ್ಲಂಗಳಿಂದ ಆದಷ್ಟು ಬೇಗನೆ ದೂರ ಹೋಗುವ ಮನಸ್ಸಿನಲ್ಲೇ ಇರುತ್ತಾರೆ. ಸರ್ಕಾರೇತರ ಹಾಗೂ ಸ್ಥಳೀಯ ಗುಂಪುಗಳ ಸಮುದಾಯ ಸಂಘಟನೆಯ ಪರಿಣಾಮವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಆಸಕ್ತ ಗುಂಪುಗಳು ರಚನೆಯಾಗಿದ್ದರೂ, ಅಲ್ಲಿನ ಜನರಿಗೆ ದೊರಕಲೇ ಬೇಕಾದ ಸೇವೆಗಳು, ಸೌಲಭ್ಯಗಳಿಗಾಗಿ ಅಧಿಕಾರಯುತವಾಗಿ ಕೇಳುವ ಜನರು ಸಾಕಷ್ಟು ಸಂಖ್ಯೆಯಲ್ಲಿಲ್ಲ.

ಬಹುತೇಕ ಸ್ಲಂಗಳು ದೊಡ್ಡ ವಾರ್ಡ್‌ಗಳ ಭಾಗಗಳಾಗಿದ್ದು ತಮ್ಮ ಗುಣಲಕ್ಷಣಗಳಲ್ಲಿ ವಿಭಿನ್ನವಾಗಿವೆ. ಜೊತೆಗೆ, ಸ್ಲಂ ನಿವಾಸಿಗಳು ಕೇವಲ ರಾಜಕೀಯ ಪಕ್ಷಗಳ ಮತ ಬ್ಯಾಂಕ್ ಸದಸ್ಯರೇ ಹೊರತು, ಅವರಿಗೆ ಯಾವುದೇ ರಾಜಕೀಯ ಮತ್ತು ಅಧಿಕಾರದ ಶಕ್ತಿ ಇಲ್ಲ. ಇದರಿಂದಾಗಿ ಅವರು ತಮ್ಮ ಹಕ್ಕಗಳನ್ನು ಚಲಾಯಿಸಲಾಗಲೀ, ಶಾಲಾ ಶಿಕ್ಷಕರ ಹೊಣೆಗಾರಿಕೆಯುನ್ನು ಪ್ರಶ್ನಿಸಲಾಗಲೀ ಆಗಿಲ್ಲ. ಅನೇಕ ಪ್ರಕರಣಗಳಲ್ಲಿ ಸ್ಲಂ ಸಮುದಾಯುದ "ನಾಯಕರನ್ನೂ" ಒಳಗೊಂಡಂತೆ ಎಲ್ಲರಿಗೂ, ಶಿಕ್ಷಕರ ಗೈರು ಹಾಜರಿಯ ಬಗ್ಗೆ ಪ್ರಶ್ನಿಸುವುದಾಗಲೀ ಅಥವಾ ಶಾಲಾ ಸಂಬಂಧಿತ ಯಾವುದೇ ವಿಚಾರದ ಬಗ್ಗೆ ಮಾತನಾಡಲಾಗಲೀ ಅಥವಾ ತಮ್ಮ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಕೇಳಲು ಹಿಂಜರಿಕೆ ಮತ್ತು ಭಯ.

## ಪ್ರಕರಣಗಳು

ನಗರದ ಬೆಳವಣಿಗೆಯ ಬಗ್ಗೆ ವಿಶಾಲ ತಳಹದಿಯಲ್ಲಿ ಇಷ್ಟೆಲ್ಲಾ ಹೇಳಿದ ಮೇಲೆ, ಇಂತಹ ಪ್ರದೇಶದಲ್ಲಿ ನಿಜವಾಗಿಯೂ ಇರುವ ಶಾಲೆಯ ಕಾರ್ಯವೈಖರಿಯನ್ನು ಹತ್ತಿರದಿಂದ ನೋಡಿ, ನಗರಗಳಲ್ಲಿ ಎಷ್ಟರಮಟ್ಟಿಗೆ ಮತ್ತು ಯಾಕೆ ಶಿಕ್ಷಣ ವಂಚನೆ ನಡೆದಿದೆ ಎಂದು ತಿಳಿಯುವುದು ಬಹುಮುಖ್ಯ. ಈ ಅಧ್ಯಯನ[27] ದಿಂದ ಹೊರಬಂದ ವಿಚಾರಗಳು ನಗರದ ಬಡ ಪ್ರದೇಶಗಳಲ್ಲಿ ಶಾಲೆಗಳು ಹೇಗಿವೆ ಎನ್ನುವುದನ್ನು ಕುರಿತು ನಿಜವಾದ ಪರಿಚಯ ನೀಡುತ್ತದೆ.

### *ವಾಹನ ನಗರದ ಪರಿಸ್ಥಿತಿ – ಒಂದು ಪರಿಚಯ*

ಬೆಂಗಳೂರು ನಗರದ ಅತ್ಯಧಿಕ ಸಂಖ್ಯೆಯ ಸ್ಲಂಗಳನ್ನು ಹೊಂದಿರುವ ಅಧಿಕ ವರಮಾನವಿರುವವರ ವಾರ್ಡ್‌ನಲ್ಲಿರುವ ವಾಹನ ನಗರ[28] ಕೂಲಿಕಾರ್ಮಿಕರೇ ಅತ್ಯಧಿಕ ಸಂಖ್ಯೆಯಲ್ಲಿರುವ ಅತ್ಯಂತ ಕಡಿಮೆ ವರಮಾನವಿರುವವರ ನಿವಾಸಸ್ಥಾನ. ಎರಡು ಗುಡ್ಡಗಳ ನಡುವೆ 1974ರಲ್ಲಿ ಸ್ಥಾಪಿತವಾದ ಈ ಸ್ಲಂನಲ್ಲಿ ಕೆಲವು ಒಂದೇ ಕೋಣೆಯ ಕಾಂಕ್ರೀಟ್ ಮನೆಗಳು ಹಾಗೂ ಸುಮಾರು 1500 ಗುಡಿಸಲುಗಳಿವೆ. ಅದರಲ್ಲಿ 76 ಮುಸಲ್ಮಾನ; 800 ಪರಿಶಿಷ್ಟ ಜಾತಿ ಮತ್ತು ಪಂಗಡ; 200 ಗೌಡರು; 150 ಕ್ರಿಶ್ಚಿಯನ್ನರು; 270 ನಾಯ್ಡುಗಳು ಮತ್ತು ಶೆಟ್ಟರು ಹಾಗೂ ನಾಲ್ಕು ಬ್ರಾಹ್ಮಣ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಶೇ. 53ರಷ್ಟು ನಿವಾಸಿಗಳು ಪರಿಶಿಷ್ಟ ಜಾತಿಗೆ ಸೇರಿದವರು. ಕೆಲವು ಗುಡಿಸಲುಗಳು ಹಾಗೂ ಮನೆಗಳು ಬಾಡಿಗೆಗಿದ್ದು, ಬಹುತೇಕ ಮನೆಗಳಲ್ಲಿ ಅವುಗಳ ಮಾಲೀಕರೇ ವಾಸಿಸುತ್ತಿದ್ದಾರೆ.

ಇಲ್ಲಿನ ನಿವಾಸಿಗಳು ಅನೇಕ ಸೇವೆಗಳು ಹಾಗೂ ಚೂರು ಪಾರು ಕೆಲಸಗಳಲ್ಲಿ ನಿರತರಾಗಿದ್ದಾರೆ. ಅನೇಕ ಗಂಡಸರು ಕಟ್ಟಡ ನಿರ್ಮಾಣ ಕೆಲಸದಲ್ಲಿದ್ದಾರೆ (35.42%) ಕುಶಲಕರ್ಮಿಗಳು, ಕೌಶಲ್ಯರಹಿತ ಕೆಲಸದವರು, ಮಿಕ್ಕಂತೆ ಎಲ್ಲರೂ

[27] ಈ ಸಂಶೋಧನೆಯನ್ನು 1999ರ ಸೆಪ್ಟಂಬರ್‌ನಿಂದ 2001ರ ಮಧ್ಯ ಭಾಗದವರೆಗೆ ಬಡತನ ಪೀಡಿತ ಪ್ರದೇಶಗಳಲ್ಲಿ ನಡೆಸಲಾಯಿತು. ಮನೆಮನೆಗೆ ಭೇಟಿನೀಡಿ ಮಾಹಿತಿ ಸಂಗ್ರಹ, ಶಾಲೆಗೆ ಹೋಗುವ ಮತ್ತು ಶಾಲೆಯ ಹೊರಗಿರುವ ಶೇ. 15 ಮಕ್ಕಳೊಡನೆ ವಿವರವಾದ ಚರ್ಚೆ, ಶಾಲಾ ತರಗತಿಗಳ ಕಾರ್ಯವೈಖರಿ ಗಮನಿಸುವುದು ಮತ್ತು ಅಧ್ಯಾಪಕ ವರ್ಗದೊಡನೆ, ಪೋಷಕರು ಹಾಗೂ ಸಮುದಾಯದ ಸದಸ್ಯರೊಡನೆ ಚರ್ಚೆ, ಸಂದರ್ಶನಗಳನ್ನು ನಡೆಸಲಾಯಿತು. ಆ ಜನವಸತಿಗೆ ಕಾಲಕಾಲಕ್ಕೆ ಭೇಟಿ ಮಾಡಿ ಮಕ್ಕಳು ಅಧ್ಯಾಪಕ ವರ್ಗದೊಡನೆ ಚರ್ಚೆ ಮಾಡಿ ಆ ಸಮುದಾಯದಲ್ಲಿರುವ ಒಂದೇ ಶಾಲೆಯ ಮೇಲೆ ಎಂತಹ ಒತ್ತಡಗಳು ಬೀಳುತ್ತಿವೆ ಮತ್ತು ಅಲ್ಲಿ ಆಗಿರುವ ಮುಂದುವರಿದ ಬದಲಾವಣೆಗಳು ಎಂತಹದು ಎಂಬುದು ಅರಿವಾಯಿತು.

[28] ಕೃತಕನಾಮ

ಚೂರು ಪಾರು ಕೆಲಸದಲ್ಲಿ - ಹಣ್ಣು, ತರಕಾರಿ, ನಕಲಿ ಒಡವೆ ಇತ್ಯಾದಿ ಮಾರಾಟದಲ್ಲಿದ್ದಾರೆ. ಬೆರಳೆಣಿಕೆಯಷ್ಟು ಜನ ಹಳೇ ಕಾಗದ, ಬಾಟಲು, ಪುನರ್ಬಳಕೆ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಟೈರು ಹಾಗೂ ಪಂಕ್ಚರ್ ಅಂಗಡಿ ಮತ್ತು ಬಟ್ಟೆ ಹೊಲೆಯುವ ಕೆಲಸದಲ್ಲಿದ್ದಾರೆ. ಉಳಿದವರು ಮಾರುಕಟ್ಟೆಯಲ್ಲಿ ಕೂಲಿಗಳಾಗಿ ಅಥವಾ ವೆಲ್ಡರ್‌ಗಳು, ಮೆಕಾನಿಕ್‌ಗಳಾಗಿದ್ದಾರೆ. ಇತ್ತೀಚೆಗೆ ಕಟ್ಟಡ ನಿರ್ಮಾಣ ಉದ್ದಿಮೆಯಲ್ಲಿ ಕುಸಿತ ಉಂಟಾದ ಕಾರಣ, ಅನೇಕರು ಹಂಗಾಮಿ ಕೂಲಿಯಾಳುಗಳಾಗಿದ್ದಾರೆ ಅಥವಾ ಕೆಲಸವಿಲ್ಲದೆ ಕುಳಿತ್ತಿದ್ದಾರೆ. ಸಾಕಷ್ಟು ಸಂಖ್ಯೆಯಲ್ಲಿ ಹೆಂಗಸರು, (ಶೇ.58.33) ಮನೆಗೆಲಸಕ್ಕೆ ಸಹಾಯಕರಾಗಿ ಹೋಗುತ್ತಾರೆ ಅಥವಾ ತುಂಡು ಗುತ್ತಿಗೆ ಆಧಾರದಲ್ಲಿ ಮನೆಯಲ್ಲೆ ಅಗರಬತ್ತಿ ತಯಾರಿಸುತ್ತಾರೆ. ಇಲ್ಲಿರುವ ಬಹುತೇಕ ಕುಟುಂಬಗಳ ಜನ ಕರ್ನಾಟಕ, ತಮಿಳುನಾಡು ಅಥವಾ ಆಂಧ್ರಪ್ರದೇಶದ ವಿವಿಧ ಜಿಲ್ಲೆಗಳಿಂದ ವಲಸೆ ಬಂದವರು. ಹಬ್ಬಗಳು ಅಥವಾ ಕಟಾವಿನ ಕಾಲದಲ್ಲಿ ಅನೇಕರು ತಮ್ಮ ಊರಿಗೆ ಹೋಗಿಬರುತ್ತಾರೆ. ಗಂಡಸರು, ಅದರಲ್ಲೂ ಮಕ್ಕಳ ತಂದೆಯರ ಸಾಕ್ಷರತೆ ಮಟ್ಟ ಶೇ.27. ಶೇ. 30 ನಿರಕ್ಷರಿಗಳು ಮತ್ತು ಶೇ. 35 ಭಾಗ ಗಂಡಸರಿಗೆ ಸಹಿ ಮಾಡಲು ಬರುವುದು. ಇದಕ್ಕೆ ವ್ಯತಿರಿಕ್ತವಾಗಿ ಹೆಂಗಸರ ಸಾಕ್ಷರತೆ ಪ್ರಮಾಣ ಹೆಚ್ಚಿದೆ: ಶೇ. 32 ಸಾಕ್ಷರರು, ಶೇ. 29 ನಿರಕ್ಷರಿಗಳು, ಹಾಗೂ ಶೇ. 37 ಹೆಂಗಸರು ಸಹಿ ಮಾಡಬಲ್ಲರು. ಶೇ. 65 ವಯಸ್ಕರು ವಸ್ತುಶಃ ನಿರಕ್ಷರಿಗಳು.[29]

### ಕುಟುಂಬಗಳ ಸಂರಚನೆ, ಸಂಘಟನೆ ಮತ್ತು ತಿಳಿವಳಿಕೆ

ಬಹುತೇಕ ಕುಟುಂಬಗಳು ವಿಭಕ್ತವಾದರೂ (ಶೇ. 72.92) ಆವುಗಳ ಸದಸ್ಯರ ಸಂಖ್ಯೆಯಿಂದಾಗಿ - ಸರಾಸರಿ 6.6. - ಕುಟುಂಬಗಳು ದೊಡ್ಡದಾಗಿದೆ. ವಲಸೆ ಬಂದಿರುವವರೇ ಇರುವ ಕಾರಣ ಹಳ್ಳಿಗಳಿಂದ ಬಂದ ಬಂಧುಗಳು ಇವರ ಜೊತೆ ಇರುವುದು ಸಾಮಾನ್ಯ. 114 ಕುಟುಂಬಗಳು (ಶೇ.10.96) ಒಬ್ಬರೇ ಪೋಷಕರಿರುವ ಕುಟುಂಬಗಳು, ಅಂದರೆ ಸಾಮಾನ್ಯವಾಗಿ ತಾಯಿ ಮತ್ತು ಮಕ್ಕಳಿರುವ ಕುಟುಂಬಗಳು. ಗಂಡ ಸತ್ತವರು ಅಥವಾ ವಿವಾಹ ವಿಚ್ಛೇದನ ಪಡೆದ ಮಹಿಳೆಯರಲ್ಲದೆ. ಗಂಡಂದಿರಿಂದ ತೊರೆಯಲ್ಪಟ್ಟು, ಮಕ್ಕಳೊಡನೆ ಹೇಗೋ ಬದುಕುತ್ತಿರುವ ಸಾಕಷ್ಟು ಸಂಖ್ಯೆಯ ಯುವತಿಯರೂ ಇದ್ದಾರೆ.

[29] ಸಂದರ್ಶನ ಮಾಡಿದ ಶೇ.8 ಜನ ತಮ್ಮ ಸಾಕ್ಷರತೆಯ ಬಗ್ಗೆ ಬಾಯೇ ಬಿಡಲಿಲ್ಲ.

ನಗರದ ಬಡಜನರ ಕೌಟುಂಬಿಕ ಜೀವನ ಮತ್ತು ಸಂಬಂಧಗಳು ಒತ್ತಡಗಳ ನಡುವೆಯೇ ಇರುವುದು, ಮೇಲಿಂದ ಮೇಲೆ ಉಂಟಾಗುವ ನಿರುದ್ಯೋಗ, ತೀರಾ ಕಳಪೆಯಾದ ಮನೆಗಳು, ಮತ್ತು ಮರೆಯಾಗಿರುವ ಸಾಮಾಜಿಕ ಬೆಂಬಲವೇ ಮೊದಲಾದ ಕಾರಣಗಳಿಂದಾಗಿ ಮಕ್ಕಳು ಮತ್ತು ಯುವಕರು ಗರಿಷ್ಠ ಪ್ರಮಾಣದ ಒತ್ತಡ ಅನುಭವಿಸುತ್ತಿದ್ದಾರೆ. ಬಹುತೇಕ ಪೋಷಕರು ಮನೆಯ ಆಚೆ ಇಡೀ ದಿನ ದುಡಿಮೆಯಲ್ಲೇ ಇರುವುದರಿಂದ ಮಕ್ಕಳ ಲಾಲನೆ ಪಾಲನೆ ಅಥವಾ ಉಸ್ತುವಾರಿ ಮಾಡಲಾಗುವುದೇ ಇಲ್ಲ. ಹೇಳುವವರು ಕೇಳುವವರಿಲ್ಲದ ಪರಿಸ್ಥಿತಿಗೆ ಬಿದ್ದ ಹದಿವಯಸ್ಕರು ವಿಚ್ಛಿದ್ರಕಾರಿ ಶಕ್ತಿಗಳಿಗೆ, ಜೂಜು, ಕುಡಿತ, ಮಾದಕ ವಸ್ತುಗಳಿಗೆ ಬಲು ಬೇಗ ಬಲಿಯಾಗುತ್ತಾರೆ.

## ಸಮುದಾಯ ರಾಜಕೀಯ / ಆರ್ಥಿಕ / ಸಾಮಾಜಿಕ ವ್ಯವಸ್ಥೆ ಮತ್ತು ಅವುಗಳ ಪರಿಮಿತಿಗಳು

ಎಲ್ಲ ಬಡ ಪ್ರದೇಶಗಳಂತೆಯೇ, ರಾಜಕೀಯ ಪಕ್ಷಗಳು ಮತ್ತವುಗಳ ಏಜೆಂಟರು ವಾಹನನಗರವನ್ನೂ ಮತ ಬ್ಯಾಂಕ್ ಎಂದೇ ಪರಿಗಣಿಸುವರು. ಚುನಾವಣೆಗಳಿಗೆ ಮುನ್ನ ರಾಜಕೀಯ ಪಕ್ಷಗಳಿಗೆ ಜನರನ್ನು ಸೇರಿಸಿಕೊಳ್ಳುವುದು ಇಲ್ಲಿಯೂ ಸರ್ವೆ ಸಾಮಾನ್ಯ. ಈ ವಾರ್ಡಿನ ಕಾರ್ಪೋರೇಟರ್ ಹತ್ತಿರದ ಉತ್ತಮ ಪ್ರದೇಶದಲ್ಲಿ ವಾಸಿಸುತ್ತಿದ್ದು ಆಗಾಗ ಈ ಸ್ಲಂಗೂ ಬರುತ್ತಿರುತ್ತಾರೆ. ಇತ್ತೀಚೆಗೆ ನಡೆದ ಚುನಾವಣೆಗೆ ಮೊದಲು ಕುಡಿಯುವ ನೀರಿನ ಟ್ಯಾಂಕ್ ಹಾಗೂ ಕೆಲವು ನಾಗರೀಕ ಸೌಲಭ್ಯಗಳನ್ನು ಇಲ್ಲಿಗೆ ಒದಗಿಸುವಲ್ಲಿ ಅವರ ಪಾತ್ರವಿದೆ. ಆದಾಗ್ಯೂ ಇಲ್ಲಿನ ಶಾಲೆಯತ್ತ ಅವರೇನೂ ಗಮನ ಹರಿಸಿಲ್ಲ ಮತ್ತು ಶಾಲೆಯ ಅಭಿವೃದ್ಧಿಗಾಗಿ ಅವರೇನೂ ಮಾಡಿಲ್ಲ.

ಸಮುದಾಯ ಆಧಾರಿತ ಸಂಘಟನೆಯ ಇರುವಿಕೆಯಾಗಲೀ ಜನರಿಗೆ ಅದರ ಬೆಂಬಲವಾಗಲೀ ಅಷ್ಟೇನೂ ಇಲ್ಲ. ಕಾರಣ, ಇಲ್ಲಿರುವವರೆಲ್ಲಾ ರಾಜ್ಯದ ಹಾಗೂ ರಾಷ್ಟ್ರದ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ಸಮಯದಲ್ಲಿ ಬಂದು ನೆಲಸಿದವರು ಹಾಗೂ ಆರ್ಥಿಕವಾಗಿ ಬೇರೆ ಬೇರೆ ಸ್ಥಿತಿಯಲ್ಲಿರುವವರು. ಎಲ್ಲರೂ ಬಡವರು ಜೊತೆಯಾಗಿರೋಣ ಎನ್ನುವ ಭಾವನೆಯ ಬದಲು, ಅಲ್ಲಿ ಸದಾ ಪರಸ್ಪರರೊಡನೆ ಜಾಗ, ಮೂಲ ಸೌಲಭ್ಯಗಳು, ಉದ್ಯೋಗಕ್ಕಾಗಿ ಸ್ಪರ್ಧೆಯೇ ಇರುವುದು. ತುರ್ತು ಸಂದರ್ಭಗಳು ಅಥವಾ ದಿನನಿತ್ಯದ ಸಾಮಾಜಿಕ ಚಟುವಟಿಕೆಗಳಲ್ಲಿ ಬಹುತೇಕರಿಗೆ ಬೆಂಬಲ ದೊರೆತರೂ, ದೀರ್ಘಕಾಲೀನ

ಸಾಮಾಜಿಕ ಹಾಗೂ ಸಂಘಟಿತ ಬೆಂಬಲ, ಯೋಜನೆ, ತಿಳಿವಳಿಕೆ ಇಲ್ಲವೇ ಇಲ್ಲ. ಈ ಸ್ಲಂ ಸ್ಥಾಪಿತವಾಗಿ 20 ವರ್ಷಗಳು ಆಗಿದ್ದರೂ, ಸುಮಾರು 7,500 ಜನ ನಿವಾಸಿಗಳಿದ್ದರೂ ಅವರನ್ನೆಲ್ಲಾ ಪ್ರತಿನಿಧಿಸುವ ಒಂದು ಸಂಘಟನೆ ಇಲ್ಲಿಲ್ಲ. ಬೇರೆ ಬೇರೆ ಜಾತಿ, ಧರ್ಮ, ಸಾಂಸ್ಕೃತಿಕ ಗುಂಪುಗಳನ್ನು ಪ್ರತಿನಿಧಿಸುವ, ಅವರವರಿಗೇ ಸೇವೆಗಳನ್ನು ನೀಡುವ ಹಲವಾರು ಸಂಘಟನೆ, ಸಂಸ್ಥೆಗಳು ಅಲ್ಲಿವೆ. ಸ್ಲಂನಲ್ಲಿರುವ ಒಂದು ಮಸೀದಿ ನಡೆಸುವ ಮದರಸಾ ಔಪಚಾರಿಕ ಶಿಕ್ಷಣವನ್ನು ನೀಡುವುದಿಲ್ಲ. ಒಂದು ಕ್ರಿಶ್ಚಿಯನ್ ಮಿಷನರಿ ಹಾಗೂ ಒಂದು ಸರ್ಕಾರೇತರ ಸಂಸ್ಥೆ, ಮನೆಗೆಲಸಕ್ಕೆ ಹೋಗುವ ಹೆಣ್ಣು ಮಕ್ಕಳಿಗೆ ರಾತ್ರಿಶಾಲೆಗಳನ್ನು ನಡೆಸುತ್ತಿದೆ. ಮನೆಯಲ್ಲಿ ಏನಾದರೂ ತುರ್ತು ಆದಾಗ, ಮಕ್ಕಳ ಶಾಲಾ ಸಮವಸ್ತ್ರ, ಅಥವಾ ಶುಲ್ಕದ ಹಣದ ಸಹಾಯಕ್ಕಾಗಿ ಮಾತ್ರಾ ಮಿಷನರಿಗಳ ಹತ್ತಿರ ಹೋಗುವುದನ್ನು ಪೋಷಕರು ಅಭ್ಯಾಸ ಮಾಡಿಕೊಂಡಿದ್ದಾರೆ. ಸುಮಾರು ಶೇ. 94 ತಂದೆಯರು ಹಾಗೂ ಶೇ. 86 ತಾಯಿಯರು ಯಾವುದೇ ಸಂಸ್ಥೆಗೆ ಸದಸ್ಯರಾಗಿಲ್ಲ. ತಮ್ಮ ಸ್ಲಂನಲ್ಲೇ ಇರುವ ಸಂಸ್ಥೆಯ ಬಗ್ಗೆ ಬಹುತೇಕ ಪೋಷಕರಿಗೆ ತಿಳಿದೇ ಇಲ್ಲ. ತಾವು ಸದಸ್ಯರಾಗಿರುವ ಸಂಸ್ಥೆ ಸಭೆಗಳನ್ನು ನಡೆಸುವುದೇ ಇಲ್ಲ, ನಡೆಸಿದರೂ ಏನೂ ಅಂತಹ ಮುಖ್ಯ ವಿಚಾರಗಳು ಚರ್ಚೆಗೆ ಬರುವುದೇ ಇಲ್ಲ ಎಂದು ನೇರವಾಗಿಯೇ ಕೆಲವರು ಹೇಳುತ್ತಾರೆ. ತಮ್ಮ ಶಿಕ್ಷಣ, ಸಮುದಾಯದ ಸ್ಥಿತಿ, ಮಕ್ಕಳ ಶಿಕ್ಷಣದ ಹಕ್ಕುಗಳ ಬಗ್ಗೆ ಯಾವುದೇ ಚರ್ಚೆ ಇಲ್ಲದ ಕಾರಣ ಅವರಿಗೆ ಈ ವಿಚಾರಗಳ ಬಗ್ಗೆ ಅರಿವೇ ಇಲ್ಲ. ಸುಮಾರು ಶೇ. 14 ಹೆಂಗಸರು ಮಹಿಳಾ ಸಂಘಗಳ ಸದಸ್ಯರಾಗಿದ್ದು, ಶಿಕ್ಷಣ, ನಾಗರೀಕ ಸೌಲಭ್ಯಗಳ ಬಗ್ಗೆ ಇತರರಿಗಿಂತಾ ಹೆಚ್ಚು ಹಾಗೂ ನಿಖರವಾಗಿ ತಿಳಿವಳಿಕೆ ಹೊಂದಿದ್ದಾರೆ.

ಬೋರ್ಡ ಇರುವುದಕ್ಕಷ್ಟೇ ಸೀಮಿತವಾಗಿರುವ 'ಅಂಬೇಡ್ಕರ್ ಸಂಘ' ಒಂದಿರುವುದು ಕಾಣುವುದು. ಸಂಘ ಸ್ಥಾಪನೆಯಾದಾಗ ಶುಲ್ಕ ಸಂಗ್ರಹಿಸಿ ಸದಸ್ಯತ್ವ ಅಭಿಯಾನ ನಡೆಸಿದ್ದರೂ, ಈಗ ಯಾವುದೇ ಕಾರ್ಯಕ್ರಮಗಳೂ ಇಲ್ಲ ಮತ್ತು ಹೊಸ ಸದಸ್ಯರ ನೇಮಕಾತಿಯೂ ಇಲ್ಲವಾಗಿದೆ. ಹೀಗಿದ್ದರೂ, ಸಂಘವನ್ನು ಆರಂಭಿಸಿದ, ಕಾರ್ಪೆಂಟರ್ ಒಬ್ಬರು ಈಗಲೂ ಆ ಸ್ಲಂಗೆ *ಸ್ವಯಂ ಘೋಷಿತ* ನಾಯಕ ಹಾಗೂ ಪ್ರತಿನಿಧಿಯಾಗಿಬಿಟ್ಟಿದ್ದಾರೆ. ಈ *ಸ್ವಯಂಘೋಷಿತ* ನಾಯಕತ್ವದಿಂದಾಗಿ, ರಾಜಕೀಯ ನಾಯಕರು ಹಾಗೂ ಅವರ ಪ್ರತಿನಿಧಿಗಳೊಡನೆ ಇವರು ಮಧ್ಯವರ್ತಿಯಂತೆ ವರ್ತಿಸಿ, ಆ ಸ್ಲಂಗೆ ಬಂದಿರುವ ಎಲ್ಲ ನಾಗರೀಕ ಸೌಲಭ್ಯಗಳು–ನೀರು, ವಿದ್ಯುತ್, ಶೌಚಾಲಯ ವ್ಯವಸ್ಥೆ, ರಸ್ತೆ ದುರಸ್ಥಿ–ಎಲ್ಲವೂ ತನ್ನ 'ಸಂಬಂಧ'ಗಳ ಫಲ ಎಂದೇ ಅವರು ಹೇಳುತ್ತಾರೆ. ರಾಜಕೀಯ ಮಧ್ಯವರ್ತಿಯೊಡನೆಯ ಇವರ

ಸಂಬಂಧದಿಂದಾಗಿ ಸ್ಥಳೀಯ ಕಾರ್ಖಾನೆಯ ಮಾಲೀಕರೊಡನೆ ಮಾತನಾಡಿ ಇಲ್ಲಿನ ಸರ್ಕಾರಿ ಶಾಲೆಯ 120 ಮಕ್ಕಳಿಗೆ ಎರಡು ವರ್ಷಗಳ ಕಾಲ ಮಧ್ಯಾಹ್ನದ ಊಟ ಕೊಡಿಸಲು ಕಾರಣವಾಗಿತ್ತು. ಆದರೆ, 2001ರ ಜೂನ್‌ನಲ್ಲಿ ಮಧ್ಯಾಹ್ನದೂಟದ ವ್ಯವಸ್ಥೆ ಯಾವುದೇ ಸೂಚನೆ, ಕಾರಣವಿಲ್ಲದೆ ನಿಂತುಹೋಯಿತು. ಅಕ್ಟೋಬರ್ 2001ರಲ್ಲಿ ನಗರದ ಕಾರ್ಪೋರೇಷನ್ ಚುನಾವಣೆಗಳು ಘೋಷಿತವಾದಾಗ, ಆ ಸಮುದಾಯದ ಜನರಿಗೆ ಮಧ್ಯಾಹ್ನದೂಟ ಬೇಕೆಂದರೆ, ಒಂದು ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಸೇರಿ ಆ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂಬ ಸಂದೇಶ ಬಂದಿತ್ತು. ಚುನಾವಣೆ ನಡೆದು ಎರಡು ತಿಂಗಳ ನಂತರ, ಮಧ್ಯಾಹ್ನದ ಊಟದ ವ್ಯವಸ್ಥೆಯಿಲ್ಲದೆ ಶಾಲೆ ಹಾಗೇ ನಡೆದಿದೆ.

## ಶಾಲೆಗಳು ಮತ್ತು ಶಿಕ್ಷಣ

NIAS ಆಗಸ್ಟ್ 2001ರಲ್ಲಿ ವಾಹನ ನಗರದ 1,500 ಕುಟುಂಬಗಳಲ್ಲಿ ಸರ್ವೇಕ್ಷಣೆ ನಡೆಸಿದಾಗ 1,040 ಕುಟುಂಬಗಳಲ್ಲಿ ಶಾಲೆಗೆ ಹೋಗುವ ವಯೋಮಾನದ 6-14 ವರ್ಷದೊಳಗಿನ ಮಕ್ಕಳು ಕಂಡು ಬಂದಿದ್ದರು. ಈ ವಯೋಮಾನದ 2,106 ಮಕ್ಕಳನ್ನು ಈ ಸರ್ವೇಕ್ಷಣೆ ಗುರುತಿಸಿತು. ಇದರಲ್ಲಿ ಶೇ 69.9 (1,474) ಮಕ್ಕಳು ಶಾಲೆಗೆ ದಾಖಲಾಗಿದ್ದಾರೆ. ವಾಹನ ನಗರದಲ್ಲಿರುವ ಮಕ್ಕಳಲ್ಲಿ 632, ಅಂದರೆ ಶೇ.30 ರಷ್ಟು ಮಕ್ಕಳು ಶಾಲೆಯ ಹೊರಗಿದ್ದಾರೆ. ಇದರಲ್ಲಿ ಶೇ.30 (190) ಮಕ್ಕಳು ಕೂಲಿಗಾಗಿ ದುಡಿಮೆಯಲ್ಲಿದ್ದರೆ, ಉಳಿದವರು (442) ಶಾಲೆಯಲ್ಲೂ ಇಲ್ಲ, ದುಡಿಮೆಯಲ್ಲೂ ಇಲ್ಲ.

ಶಾಲೆಗೆ ಹೋಗುವ ಬಹುತೇಕ ಮಕ್ಕಳಲ್ಲಿ ಶೇ.81, ಸ್ಲಂನಲ್ಲೇ ಇರುವ ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಅದೇ ವಾರ್ಡ್‌ನಲ್ಲಿರುವ ಎರಡು ಸರ್ಕಾರಿ ಶಾಲೆಗಳಿಗೆ ಹಾಜರಾಗುತ್ತಾರೆ. ಸರ್ಕಾರಿ ಶಾಲೆಗಳು ಉಚಿತ ಎಂದಾದರೂ, ಈ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಪೋಷಕರಿಗೆ ಹೆಚ್ಚಿನ ಖರ್ಚುವೆಚ್ಚ ಇದ್ದೇ ಇದೆ. ನಾವು ಸಂಗ್ರಹಿಸಿದ ಮಾಹಿತಿ ಪ್ರಕಾರ, ಸ್ಥಳೀಯ ಸರ್ಕಾರೀ ಕಿರಿಯ ಪ್ರಾಥಮಿಕ ಶಾಲೆ ಅಥವಾ ಹತ್ತಿರದ ಸರ್ಕಾರಿ ಶಾಲೆಗೆ ಮಕ್ಕಳನ್ನು ಕಳುಹಿಸಲು ಹಾಗೂ ಇತರ ಖರ್ಚುವೆಚ್ಚ ಸೇರಿ ಶೇ.60.42 ಪೋಷಕರು ಪ್ರತಿವರ್ಷ ಸರಾಸರಿ ರೂ.300/- ಖರ್ಚು ಮಾಡುತ್ತಾರೆ. ಸ್ಥಳೀಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಪೋಷಕರ ಮೊದಲ ಆಯ್ಕೆಯೇನಲ್ಲ. ಆ ಸ್ಲಂನಲ್ಲಿನ ಕೇವಲ 163 ಮಕ್ಕಳು ಮಾತ್ರ ಅಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಉಳಿದವರು

ಹೊರಗಿರುವ ಶಾಲೆಗೆ ಹೋಗುತ್ತಾರೆ. ಸ್ಲಂನಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಗೇ ಮಕ್ಕಳನ್ನು ಕಳುಹಿಸಲು ಪೋಷಕರ ಆರ್ಥಿಕ ಅಸಾಮರ್ಥ್ಯ ಅಥವಾ ಮಾಹಿತಿಯ ಕೊರತೆಯಷ್ಟೆ.

ಇಲ್ಲಿನ ಶೇ.17 ಮಕ್ಕಳು ಅನುದಾನಿತ ಶಾಲೆಗಳಿಗೆ (ಸರ್ಕಾರೀ ಸಹಾಯ ಪಡೆಯುವ ಖಾಸಗಿ ಶಾಲೆಗಳು) ಹೋಗುತ್ತಿದ್ದಾರೆ. ಕೇವಲ ಶೇ. 2 ರಷ್ಟು ಮಕ್ಕಳು ಸಂಪೂರ್ಣ ಖಾಸಗಿ ಶಾಲೆಗಳಿಗೆ ಹೋಗುತ್ತಾರೆ.[30] ಮರಗೆಲಸ, ನುರಿತ ಮೆಕಾನಿಕ್‌ಗಳು, ಡ್ರೈವರ್, ಮೊದಲಾದ ನಿಶ್ಚಿತ ಹಾಗೂ ಹೆಚ್ಚಿನ ವರಮಾನ ತರುವ ಕೆಲಸಗಳನ್ನು ಮಾಡುವವರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗಿಂತ ಹೆಚ್ಚಿನ ಶುಲ್ಕ ಹಾಗೂ ಇತರ ಶುಲ್ಕಗಳನ್ನು ಕೇಳುವ ಅನುದಾನಿತ ಹಾಗೂ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಸರಕಾರಿ ಶಾಲೆಗೆ ಮಕ್ಕಳನ್ನು ಕಳುಹಿಸಲು ಪೋಷಕರಿಗೆ ಸರಾಸರಿ ರೂ.500/- ಖರ್ಚು ಬಂದರೆ, ಖಾಸಗಿ ಶಾಲೆಗೆ ಕಳುಹಿಸಲು ಸರಾಸರಿ ರೂ.1,500/- ಖರ್ಚು ಬರುವುದು. ಶೇ.15 ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಮಿಷನರಿಗಳ ಸಹಾಯ ಪಡೆದಿದ್ದರೆ, ಶೇ 28 ಜನ ಇದೇ ಕಾರಣಕ್ಕೆ ಸಾಲಸೋಲ ಮಾಡಿದ್ದಾರೆ. ಮಕ್ಕಳನ್ನು ಶಾಲೆಗೆ ಕಳುಹಿಸಲೋಸುಗ ಅನೇಕ ಮಹಿಳೆಯರು ಸ್ಥಳೀಯ ಲೇವಾದೇವಿಗಾರರಿಂದಲೋ ಅಥವಾ ಸ್ಲಂಗೆ ಬರುವ ಲೇವಾದೇವಿಗಾರರಿಂದ ಅಥವಾ ಅವರ "ಏಜೆಂಟ"ರಿಂದ ವಾರ್ಷಿಕ ಶೇ.40-50 ಬಡ್ಡಿಗೆ ಸಾಲ ತೆಗೆದುಕೊಂಡಿದ್ದಾರೆ. ಈ ಪೋಷಕರು, ಇದರಲ್ಲಿ ಒಂಟಿತಾಯಂದಿರೂ ಸೇರಿ, ಮಕ್ಕಳಿಗೆ ಶಿಕ್ಷಣ ಕೊಡಿಸುವುದು. ಸದ್ಯದ ಬಡತನದಿಂದ ಬಿಡುಗಡೆ ಹೊಂದಲು ಮತ್ತು ಮಕ್ಕಳಿಗೆ ಉದ್ಯೋಗ ದೊರಕಿಸಲು ಇದೊಂದು ದಾರಿ ಎಂದೇ ಭಾವಿಸುವರು.

ಆದರೆ, ಅಷ್ಟೊಂದು ಶುಲ್ಕ ಕೊಟ್ಟು ಅನುದಾನಿತ ಹಾಗೂ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಿದರೂ, ಆ ಶಾಲೆಯ ಕಾರ್ಯವಿಧಾನ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಅವರ ರೀತಿಯ ಬಗ್ಗೆ ಸಾಕಷ್ಟು ಪೋಷಕರಿಗೆ ಅಸಮಾಧಾನವಿದೆ. ಅಲ್ಲಿ ಮಕ್ಕಳಿಗೆ ಸಾಕಷ್ಟು ಶಿಕ್ಷೆ ಕೊಡುತ್ತಾರೆ, ಮೇಲಿಂದ ಮೇಲೆ ಅದೂ ಇದೂ ಶುಲ್ಕ, ಶಾಲೆಯವರೇ ಮಾರುವ ಪುಸ್ತಕಗಳು ಮತ್ತು ಸಮವಸ್ತ್ರ ಕೊಳ್ಳಬೇಕೆಂಬ ಒತ್ತಾಯದ ಬಗ್ಗೆ ಅನೇಕ ಪೋಷಕರು ದೂರುತ್ತಾರೆ.

---

[30] ಬಹುತೇಕ ಮಕ್ಕಳು ಹೋಗುವ ಈ ಮೂರು ಖಾಸಗಿ ಹಾಗೂ ಅನುದಾನಿತ ಶಾಲೆಗಳಿಗೆ ಹೋಗಿ ಮಕ್ಕಳನ್ನು ಅಧ್ಯಾಪಕರನ್ನು ಸಂದರ್ಶಿಸಲು ಹಾಗೂ ತರಗತಿಗಳನ್ನು ಗಮನಿಸಲು ನಮಗೆ ಆ ಶಾಲೆಗಳ ಆಡಳಿತ ವರ್ಗ ಅನುಮತಿ ನೀಡಲಿಲ್ಲ.

ಅಂತಹ ನಿಯಮಗಳು ಅವರ ಆರ್ಥಿಕ ಸಾಮರ್ಥ್ಯ ಮತ್ತು ಹಿತಾಸಕ್ತಿಗಳನ್ನು ಮೀರುವುದೆಂದೂ ಅವರು ಹೇಳುತ್ತಾರೆ. ಪೋಷಕ – ಅಧ್ಯಾಪಕರ ಸಭೆಗಳಿಗೆ ಹೋಗದಿದ್ದರೆ, ಉತ್ತಮವಾದ ಬಟ್ಟೆ ಧರಿಸಿ ಹೋಗದಿದ್ದರೆ ಅಥವಾ ಮಕ್ಕಳ ಶಾಲಾ ಶುಲ್ಕ ಸಕಾಲದಲ್ಲಿ ಕಟ್ಟದಿದ್ದರೆ, ಆ ಶಾಲೆಯ ಶಿಕ್ಷಕ ವರ್ಗ ಪೋಷಕರನ್ನು ಬೈಯ್ಯುವ, ಹೀಯಾಳಿಸುವ ಅಥವಾ ಕೆಟ್ಟದಾಗಿ ನಡೆಸಿಕೊಳ್ಳುವ ಬಗ್ಗೆಯೂ ಪೋಷಕರು ಹೇಳಿದ್ದಾರೆ.

## ಸರ್ಕಾರೀ ಕಿರಿಯ ಪ್ರಾಥಮಿಕ ಶಾಲೆಯ ಸ್ಥಿತಿಗತಿ

ಈ ಸ್ಥಳದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಸದ್ಯ ಕೇವಲ 80 ಮಕ್ಕಳಿಗೆ ಮಾತ್ರಾ ಸಾಕಾಗಬಹುದಾದ ಮೂರು ಪ್ರತ್ಯೇಕವಾದ ಕೋಣೆಗಳಲ್ಲಿ ನಡೆದಿದೆ. ಆದರೆ, ಇದರಲ್ಲೇ 120 ಮಕ್ಕಳು ಕಿಕ್ಕಿರಿದಿದ್ದಾರೆ (ಶಾಲಾ ದಾಖಲಾತಿಯಲ್ಲಿ 163 ಮಕ್ಕಳು ಎಂದಿದೆ). ಶಾಲೆಗೆ ಈ ಕೋಣೆಗಳನ್ನು ವಿವಿಧ ಸಂಸ್ಥೆಗಳು ದಾನಮಾಡಿವೆ. ಶಾಲೆಯ ಈ ಕಟ್ಟಡದ ನಿರ್ವಹಣೆಗೆ ಸರ್ಕಾರದಿಂದ ಯಾವುದೇ ಸಹಾಯಧನವಿಲ್ಲ. ಸರ್ಕಾರದ ಸಹಾಯವೆಂದರೆ ನಾಲ್ಕು ಶಿಕ್ಷಕರ ನೇಮಕವಷ್ಟೆ. ಶಾಲೆಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಇಲ್ಲ. ಒಂದು ಕಿರಿದಾದ ಗಲ್ಲಿಯಲ್ಲಿ ಶಾಲೆ ಇರುಕಿಕೊಂಡಿದ್ದು ಶಾಲೆಗೆ ಆಟದ ಮೈದಾನವೆಂಬುದೇ ಇಲ್ಲ. ಶಾಲೆಯ ಶಿಕ್ಷಕಿ ಜಯಾ ಹೇಳುವಂತೆ ಸುತ್ತಮುತ್ತಲಲ್ಲಿ ಮಕ್ಕಳನ್ನು ಆಡಲು ಬಿಡುವುದಂತೂ ಆಗದ ಮಾತು. "ರಸ್ತೆಯಲ್ಲಿ ಮಕ್ಕಳಿಗೆ ಆಟೋಟಗಳನ್ನು ನಡೆಸಲು ಯತ್ನಿಸಿದೆವು. ಆದರೆ, ಮಕ್ಕಳ ಕೂಗಾಟ ತಮ್ಮ ಮಧ್ಯಾಹ್ನದ ನಿದ್ದೆಗೆ ತೊಂದರೆ ಎಂಬುದು ಅಲ್ಲಿನ ಜನರ ದೂರು. ಮಕ್ಕಳ ದಿನಚರಿ ಪ್ರಕಾರ ಆಟಕ್ಕೆಂದು ಅವಧಿಯುಂಟು. ಆದರೆ ಇಲ್ಲಿ ಆಟದ ಮೈದಾನವೇ ಇಲ್ಲದ ಕಾರಣ, ಮಕ್ಕಳನ್ನು ತರಗತಿಯಲ್ಲೇ ಕೂಡಿಕೊಂಡಿರಬೇಕು". ಮಕ್ಕಳು ತರಗತಿಯಲ್ಲೇಕೆ ತೀರಾ ಗಲಾಟೆ ಮಾಡುವರು, ಶಾಂತ ಚಿತ್ತರಾಗಿರುವುದಿಲ್ಲ ಎಂಬುದಕ್ಕೆ ಕಾರಣ, ಬಹುಶಃ ಅವರಿಗೆ ವ್ಯಾಯಾಮ, ಆಟ ಆಡಲು ಜಾಗದ ಕೊರತೆಯಿಂದಾಗಿರಬಹುದು.

## ಶಾಲೆಯ ಕಾರ್ಯವಿಧಾನ

ಶಾಲೆಯ ಕಾರ್ಯಕ್ರಮಗಳಿಗೆ ಸದಾ ಏನಾದರೊಂದು ಅಡಚಣೆ ಇದ್ದೇ ಇದ್ದು ಸಾಮಾನ್ಯವಾಗಿ ಶಾಲೆ ಮುಚ್ಚಿರುವುದು. ಹಬ್ಬ, ಜಾತ್ರೆ ಎಂದು ಮಕ್ಕಳು,

ಪೋಷಕರು ಅಲ್ಲಿ ಇಲ್ಲಿ ಹೋಗುವುದಷ್ಟೆ ಅಲ್ಲ, ನಗರದಲ್ಲಿ ಏನೇ ಗಲಭೆ ಗೊಂದಲವಾದರೂ ಶಾಲೆ ಖಂಡಿತಾ ಮುಚ್ಚಿರುವುದು. ರಾಜ್‌ಕುಮಾರ್ ಅಪಹರಣ ಪ್ರಕರಣವಾದಾಗ (2000) ಶಾಲೆ ಸುಮಾರು ಹದಿನೈದು ದಿನಗಳ ಕಾಲ ಮುಚ್ಚಿತ್ತು. ಆ ನಂತರ ಅಧಿಕೃತವಾಗಿ ಶಾಲೆ ಮತ್ತೆ ತೆರೆದಾಗಲೂ, ಅನೇಕ ಮಕ್ಕಳು ಗೈರು ಹಾಜರು. ಕಾರಣ, ಮಕ್ಕಳನ್ನು ರಕ್ಷಿಸುವ ದೃಷ್ಟಿಯಿಂದಾಗಿ ದೂರಕ್ಕೆ ಅಥವಾ ಸ್ವಗ್ರಾಮಗಳಿಗೆ ಅವರ ಪೋಷಕರು ಕಳುಹಿಸಿದ್ದರು. ಅಧ್ಯಾಪಕ ವರ್ಗದವರು ಬೇರೆ ಯಾವುದೇ ಕಾರ್ಯನಿಮಿತ್ತ ಇದ್ದಾಗ - ಜನಗಣತಿ, ಚುನಾವಣಾ ಪ್ರಕ್ರಿಯೆ ಅಥವಾ ತರಬೇತಿಗಳಿಗೆ ಹೋದಾಗ ಶಾಲೆ ಬಂದ್. ಪಲ್ಸ್ ಪೋಲಿಯೋ, ವಿದ್ಯಾರ್ಥಿಗಳಿಗಾಗಿ ಅಕ್ಕಿ ಪಡೆಯುವುದು ಮತ್ತು ಹಂಚುವುದು ಮೊದಲಾದ ಶಾಲಾ ಸಂಬಂಧಿತ ಕೆಲಸಗಳು ಬಂದಾಗಲೂ ಶಾಲೆ ಮುಚ್ಚಿರುವುದು. ಶಿಕ್ಷಕವರ್ಗದವರು ಗೈರು ಹಾಜರಾದಾಗಲೂ ಶಾಲೆ ಬಂದ್. ಹೀಗೆ ಮೇಲಿಂದ ಮೇಲೆ ಶಾಲಾ ಚಟುವಟಿಕೆಗಳಿಗೆ ಏನಾದರೊಂದು ತೊಂದರೆ ತಾಪತ್ರಯ ಇರುವುದರಿಂದ ಜೊತೆಗೆ, ಶಾಲೆಯಲ್ಲಿ ಯಾವುದೇ ಶಿಸ್ತು ಇಲ್ಲದ ಕಾರಣ, ಸರ್ಕಾರಿ ಶಾಲೆ ಏನೂ ಪ್ರಯೋಜನವಿಲ್ಲ ಎಂಬ ಭಾವನೆ ಪೋಷಕರಲ್ಲಿ ಬಲವಾಗಿ ಮೂಡಿದ್ದು ತಮ್ಮ ಮಕ್ಕಳನ್ನು ಬೇರೆ ಶಾಲೆಗಳಿಗೆ ಸೇರಿಸಲು ಪ್ರಯತ್ನಿಸುವರು.

ಆ ಶಾಲೆಯು ಕೆಲಸ ಮಾಡುವ ರೀತಿಯನ್ನು ಗಮನಿಸಿದರೆ ಮಕ್ಕಳನ್ನು 4ನೇ ತರಗತಿಯವರೆಗೂ ಉಳಿಸಿಕೊಳ್ಳುವ ಸಾಧ್ಯತೆಗಳು ಕಡಿಮೆ ಎನಿಸುವುದು. ಶಾಲೆಯಿಂದಲೇ ತಿರಸ್ಕರಿಸಲ್ಪಡುವ ಹಾಗೂ ಶಾಲೆ ಬಿಡುವ ಮಕ್ಕಳ ಶೇಕಡಾವಾರು ಅತ್ಯಧಿಕ. 1994-2001ರ ವರೆಗೆ ಸಂಗ್ರಹಿಸಲಾದ ಮಾಹಿತಿ ಈ ಮುಂದಿನ ಸ್ಥಿತಿ ತೋರುತ್ತದೆ.

**ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದಾಖಲಾತಿ ಮಾಹಿತಿ 1994-2001**

| ವರ್ಷ | ತರಗತಿ 1 | ತರಗತಿ 2 | ತರಗತಿ 3 | ತರಗತಿ 4 | ಒಟ್ಟು |
|---|---|---|---|---|---|
| 1994-95 | 69 | 19 | 4 | 5 | 97 |
| 1995-96 | 55 | 26 | 16 | 5 | 102 |
| 1996-97 | 56 | 20 | 14 | 14 | 104 |
| 1997-98 | 58 | 29 | 12 | 13 | 112 |
| 1998-99 | 42 | 24 | 20 | 9 | 95 |
| 1999-2000 | 67 | 40 | 14 | 19 | 140 |
| 2000-2001 | 73 | 33 | 33 | 24 | 163 |

ಮಕ್ಕಳು ಶಾಲೆ ಬಿಡುವ ಶೇಕಡಾವಾರು ಅತ್ಯಧಿಕ ಎಂಬುದು ಈ ಮಾಹಿತಿಯಿಂದ ತಿಳಿಯುತ್ತದೆ. 1994-2001ರೊಳಗೆ 4ನೇ ತರಗತಿ ತಲುಪುವುದರೊಳಗೆ ಶೇ.77 ಮಕ್ಕಳು ಶಾಲೆಯಿಂದ ಹೊರಬಿದ್ದಿದ್ದಾರೆ.

––1994-95ರಲ್ಲಿ 1ನೇ ತರಗತಿಗೆ ಸೇರಿದ 69 ಮಕ್ಕಳು 4ನೇ ತರಗತಿ ತಲುಪುವುದರೊಳಗೆ ಶೇ.82 ಮಕ್ಕಳು ಶಾಲೆ ಬಿಟ್ಟಿದ್ದಾರೆ.

––1995-96ರಲ್ಲಿ 55 ಮಕ್ಕಳು 1ನೇ ತರಗತಿಗೆ ಸೇರಿದ್ದಾರೆ. 1998-99ರಲ್ಲಿ ಅಂದರೆ ಅವರು 4ನೇ ತರಗತಿ ಸೇರುವುದರೊಳಗೆ ಶೇ.84 ಮಕ್ಕಳು ಶಾಲೆ ಬಿಟ್ಟಿದ್ದಾರೆ.

––1996-97ರಲ್ಲಿ 1ನೇ ತರಗತಿಗೆ ಸೇರಿದ 56 ಮಕ್ಕಳಲ್ಲಿ, 4ನೇ ತರಗತಿ ತಲುಪುವುದರೊಳಗೆ ಶೇ.67 ಮಕ್ಕಳು ಶಾಲೆ ಬಿಟ್ಟಿದ್ದಾರೆ.

––1997-98ರಲ್ಲಿ 1ನೇ ತರಗತಿಗೆ 58 ಮಕ್ಕಳು ಸೇರಿದ್ದು, ಅವರು 3ನೇ ತರಗತಿ ಸೇರುವುದರೊಳಗೆ ಶೇ.76 ಮಕ್ಕಳು ಶಾಲೆ ಬಿಟ್ಟಿದ್ದಾರೆ.

ಈ ಶಾಲೆಯಿಂದ ಮಕ್ಕಳು ಅಷ್ಟೊಂದು ಭಾರೀ ಸಂಖ್ಯೆಯಲ್ಲಿ ಯಾಕೆ ಬಿಡುತ್ತಾರೆ, ಈ ಸಮುದಾಯದ ಬದುಕಿನಲ್ಲಿ ಶಾಲೆಯೇಕೆ ಯಾವ ಪ್ರಾಮುಖ್ಯತೆಯನ್ನೂ ಪಡೆದಿಲ್ಲ ಎಂಬುದು ತಿಳಿಯುವುದು ಆ ಶಾಲೆ ಎಂತಹ ಸನ್ನಿವೇಶದಲ್ಲಿ ನಡೆದಿದೆ ಎಂದು ಕಂಡುಕೊಂಡಾಗ.

## ಸರಕಾರ ಮತ್ತು ಆಡಳಿತ ವಿಚಾರಗಳು

ತೀರಾ ಇತ್ತೀಚಿನವರೆಗೂ ಶಾಲೆಗಿದ್ದ ಸರಕಾರದ ಸಹಾಯ ತೀರಾ ಕಡಿಮೆ ಮತ್ತು ನೆಪಮಾತ್ರಕ್ಕೆ ಎಂಬಂತೆ. 4ನೇ ತರಗತಿಯವರೆಗೆ ಎಲ್ಲ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ರಾಜ್ಯ ಸರಕಾರ ಉಚಿತ ಸಮವಸ್ತ್ರ ಮತ್ತು ಪಠ್ಯ ಪುಸ್ತಕಗಳನ್ನು ನೀಡುತ್ತಿದೆ. ಶೇ.80ಕ್ಕೂ ಹೆಚ್ಚು ಹಾಜರಾತಿ ಹೊಂದಿರುವ ಮಕ್ಕಳಿಗೆ 3ಕೆ.ಜಿ. ಅಕ್ಕಿ ನೀಡಲಾಗುತ್ತದೆ. ಆದರೂ, ಶಾಲೆಗೆ ಮಕ್ಕಳನ್ನು ಆಕರ್ಶಿಸಲು ಸಮವಸ್ತ್ರ ಮತ್ತು ಕೈಚೀಲಕ್ಕಿಂತ ಹೆಚ್ಚಾಗಿ ಮಧ್ಯಾಹ್ನದ ಊಟ ಹೆಚ್ಚು ಪ್ರಭಾವಶಾಲಿ ಹಾಗೂ ತೀರಾ ಇತ್ತೀಚಿನ ವರೆಗೆ ಶಾಲೆಯ ಹಾಜರಾತಿಯನ್ನು ಸ್ವಲ್ಪವಾದರೂ ಹೆಚ್ಚು ಮಾಡಲು ಇದೆ ಕಾರಣವಾಗಿತ್ತು. ಶಾಲೆಯ ಎಲ್ಲಾ ಮಕ್ಕಳಿಗೆ ಮಧ್ಯಾಹ್ನದೂಟವನ್ನು ಸ್ಥಳೀಯ ಖಾಸಗಿ ಕಂಪನಿಯೊಂದು ನೀಡುತ್ತಿದ್ದಾಗಿ, ಅದು ಮಕ್ಕಳ ಹಾಜರಾತಿಯ ಮೇಲೆ ಒಳ್ಳೆಯ ಪ್ರಭಾವ ಬೀರಿತ್ತು.

ಬಹುತೇಕ ಮಕ್ಕಳು ಶಾಲೆಯ ಪೂರ್ವಾರ್ಧ ಬರುವುದು ಮಧ್ಯಾಹ್ನದೂಟಕ್ಕಾಗಿಯೇ. ಮಧ್ಯಾಹ್ನದೂಟ ಒಂದು ಮುಖ್ಯ ಪ್ರೋತ್ಸಾಹಕ. ಜೊತೆಗೆ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಹಾಗೂ ಸಾಕಷ್ಟು ಮಧ್ಯಾಹ್ನದೂಟ ಒದಗಿಸಲಾಗದ ಸಮುದಾಯದ ಜನರ ಒಂದು ಮುಖ್ಯ ಸಮಸ್ಯೆಯನ್ನು ಅದು ಬಗೆಹರಿಸುತ್ತದೆ ಎಂದು ಶಿಕ್ಷಕ ವರ್ಗದವರು ಹೇಳುತ್ತಾರೆ. ಆದರೆ ಜೂನ್ 2001ರಲ್ಲಿ ಈ ಮಧ್ಯಾಹ್ನದೂಟದ ವ್ಯವಸ್ಥೆ ದಿಢೀರ್ ಎಂದು ನಿಂತು ಹೋದ ಕಾರಣ, ಶಾಲಾ ಮಕ್ಕಳ ಹಾಜರಾತಿ ಪ್ರಮಾಣವೂ ಗಣನೀಯವಾಗಿ ಇಳಿಮುಖವಾಗಿದೆ. ನವೆಂಬರ್ 2001ರ ಚುನಾವಣಾ ವೇಳೆಯಲ್ಲಿ ರಾಜಕೀಯ ಪಕ್ಷಗಳ ಏಜೆಂಟರುಗಳು ಮಧ್ಯಾಹ್ನದೂಟದ ವ್ಯವಸ್ಥೆಯನ್ನು ಪುನಃ ಆರಂಭಿಸುವ ಆಶ್ವಾಸನೆ ನೀಡಿದ್ದರು.

"ಸ್ಕೂಲ್ ಇನ್ಸ್‌ಪೆಕ್ಟರ್" ಹುದ್ದೆಯ ರದ್ದತಿಯಿಂದಾಗಿ, 1999 ಹಾಗೂ 2001ರೊಳಗೆ ಶಾಲೆಯ ತನಿಖೆ ಅಥವಾ ಭೇಟಿ ಆಗಿಯೇ ಇಲ್ಲ. ಬಳಸೀ ಬಳಸೀ ಮಂಕಾಗಿರುವ ಕಪ್ಪುಹಲಗೆ, ಸೋರುವ ಸೂರು, ಮತ್ತು ಒಂದು ಹಾಗೂ ಎರಡನೇ ತರಗತಿಯಲ್ಲಿ ಇಲ್ಲವೇ ಇಲ್ಲದ ಕಲಿಯುವ ಕಲಿಸುವ ಸಾಮಗ್ರಿ/ವಿಧಾನ, ಇತ್ಯಾದಿ ಯಾರ ಗಮನಕ್ಕೂ ಬಾರದೆ ಹೋಯಿತು. ಶಾಲಾ ಇನ್ಸ್‌ಪೆಕ್ಟರ್ ಸ್ಥಾನದಲ್ಲಿ "ಶಾಲಾ ಸಂಯೋಜಕರ" ಹುದ್ದೆಯ ಸೃಷ್ಟಿಯಿಂದಾಗಿ, ಶಾಲೆಯ ಸ್ಥಿತಿಗತಿ, ಶಾಲಾ ಹಾಜರಾತಿ ಕುರಿತು ಶಾಲಾ ಸಂಯೋಜಕರಿಂದ ಮಾಸಿಕ ಉಸ್ತುವಾರಿ ನಡೆದಿದೆ. ಆದರೆ, ಕಲಿಸುವ ವಿಧಾನ ಹಾಗೂ ಮಕ್ಕಳ ಕಲಿಕೆಯ ಮಟ್ಟದ ಬಗ್ಗೆ ಯಾವುದೇ ಗಮನ ನೀಡಿಲ್ಲ.

## ಸಮುದಾಯ–ಶಾಲೆ ಸಂಬಂಧ

2001ರ ಮಧ್ಯದಲ್ಲಿ ಶಾಲಾ ಅಭಿವೃಧ್ಧಿ ಮತ್ತು ಉಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.) ಯ ಸ್ಥಾಪನೆಯಾಗುವತನಕ, ಬಹುತೇಕ ನಗರದ ಎಲ್ಲ ಶಾಲೆಗಳಲ್ಲಿ ಇದ್ದಂತೆ ಶಾಲಾ ಅಭಿವೃದ್ಧಿ ಸಮಿತಿ (ಎಸ್.ಬಿ.ಸಿ.) ಈ ಶಾಲೆಯಲ್ಲಿ ಇರಬೇಕಿತ್ತು. ಆದರೆ ಎಸ್.ಬಿ.ಸಿ.ಯನ್ನು ಇಲ್ಲಿ ರಚಿಸಿರಲೇ ಇಲ್ಲ. ಶಾಲೆ, ಶಿಕ್ಷಣದ ಬಗ್ಗೆ ಆಸಕ್ತಿ, ನಿಷ್ಟೆ ಇರುವ ಪೋಷಕರಿಗೂ ಸಹ ಎಸ್.ಬಿ.ಸಿ ಬಗ್ಗೆ ತಿಳಿದಿಲ್ಲ. ಪೋಷಕರೊಂದಿಗೆ ಯಾವುದೇ ಸಭೆ ಕರೆಯಲಾಗಿಲ್ಲ, ಶಾಲಾ ಶಿಕ್ಷಕರು ಸಮುದಾಯದ ನಾಯಕರೊಡನೆ ಎಂದಿಗೂ ಔಪಚಾರಿಕ ಸಭೆ ನಡೆಸಿಯೇ ಇಲ್ಲ. ಸ್ಥಳೀಯ ಕಾರ್ಪೊರೇಟರ್ ತೀರಾ ಇತ್ತೀಚಿನವರೆಗೆ ಶಾಲೆಗೆ ಭೇಟಿಯೇ ಕೊಟ್ಟಿಲ್ಲ ಮತ್ತು ಶಾಲೆಯ ಅಭಿವೃದ್ಧಿಗಾಗಿ ಯಾವುದೇ ಗಮನ ನೀಡಿಲ್ಲ. ಶಾಲಾ ನೀತಿ

ನಿಯಮಗಳಿಗೆ ಪರಿಚಯವಿರುವವರು ಹಾಗೂ ಸ್ವಲ್ಪ ಜೋರಾಗಿ/ಬಹಿರಂಗವಾಗಿ ಮಾತನಾಡುವ ಕೆಲ ಪೋಷಕರು ತಮ್ಮ ಮಕ್ಕಳನ್ನು ಸ್ಲಂನ ಆಚೆ ಇರುವ ಅನುದಾನಿತ ಅಥವಾ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ.

ನಮ್ಮ ಸರ್ವೇಕ್ಷಣೆಯಲ್ಲಿ ದೊರಕಿದ ಮಾಹಿತಿಯಂತೆ, ಮಕ್ಕಳ ತಂದೆಯರಿಗಿಂತಾ (ಶೇ.22.92) ತಾಯಂದಿರು (ಶೇ.83.3) ಶಾಲೆಗಳಿಗೆ ಭೇಟಿಕೊಟ್ಟಿದ್ದಾರೆ. ಆದರೆ, ತಮ್ಮ ಮಕ್ಕಳ ಶಿಕ್ಷಣ ಕುರಿತು ಶಿಕ್ಷಕ ವರ್ಗದೊಡನೆ ಚರ್ಚಿಸಲು ಅವರು ಬರುವುದು ತೀರಾ ವಿರಳ. ಅವರು ಬರುವುದೆಲ್ಲವೂ ಮಕ್ಕಳಿಗೆ ಏನಾದರೂ ವಿಷಯ ತಿಳಿಸಲು ಅಥವಾ ಮನೆಯ ಬೀಗದ ಕೀಲಿಯನ್ನೋ, ಪುಟ್ಟ ತಂಗಿ/ ತಮ್ಮಂದಿರನ್ನು ಅವರ ಬಳಿ ಬಿಟ್ಟು ಹೋಗಲು. ಹಗಲು ಹೊತ್ತು ತಂದೆಯರು ಮನೆಯ ಬಳಿ ಇರುವುದಿಲ್ಲ. ಹೀಗಾಗಿ ಅವರು ಶಾಲೆಗೆ ಬರುವುದಿಲ್ಲ ಎಂದೂ ಹೇಳುವುದಿದೆ. ಸಾಮಾನ್ಯವಾಗಿ ಮಕ್ಕಳ ಶಿಕ್ಷಣದ ಜವಾಬ್ದಾರಿ ಏನೇ ಇದ್ದರೂ ಅದು ಯಾವಾಗಲೂ ತಾಯಂದಿರದೇ ಎಂಬಂತಿದೆ. ಬಹುತೇಕ ಕುಟುಂಬಗಳಲ್ಲಿ ಮಕ್ಕಳ ಶಾಲೆಯ ಉಸ್ತುವಾರಿ ಹಾಗೂ ಬೇಕಾದ ಶಾಲಾ ಶುಲ್ಕವನ್ನು ಒದಗಿಸುವ ಜವಾಬ್ದಾರಿ ತಾಯಂದಿರ ಮೇಲೆ ಇದೆ. ಇಷ್ಟೆಲ್ಲಾ ಇದ್ದರೂ, ಶಾಲೆಯ ಸ್ಥಿತಿಗತಿಯನ್ನು ಉತ್ತಮ ಪಡಿಸಲು ಸಮುದಾಯದ ಅಧಿಕಾರ ವ್ಯವಸ್ಥೆಯಲ್ಲಿ ಈ ಹೆಂಗಸರು ಯಾವುದೇ ಪ್ರಮುಖ ಪಾತ್ರ ವಹಿಸುತ್ತಿಲ್ಲ.

ಜಯಾ ಎನ್ನುವ ಒಬ್ಬ ಅಧ್ಯಾಪಕಿಯ ಪ್ರಕಾರ, ಶಿಕ್ಷಕವರ್ಗ ಹಾಗೂ ಸಮುದಾಯದ ನಡುವಿನ ಸಂಬಂಧ ಗಟ್ಟಿಯಾಗದಿರಲು ಕಾರಣ, ಬಹುತೇಕ ಪೋಷಕರು ದಿನಕೂಲಿ ನೌಕರರು ಮತ್ತು ಅವರಿಗೆ ಅಧ್ಯಾಪಕರನ್ನು ಕಂಡು ಮಕ್ಕಳ ಬಗ್ಗೆ ವಿಚಾರಿಸುವಷ್ಟು ಪುರುಸೊತ್ತಿಲ್ಲ. ಹೀಗಾಗಿ, ತಮ್ಮನ್ನು ಬಂದು ಭೇಟಿ ಆಗಲೇಬೇಕೆಂದು ಪೋಷಕರ ಮೇಲೆ ಅಧ್ಯಾಪಕರು ಯಾವುದೇ ಒತ್ತಡ ಹಾಕುವುದಿಲ್ಲ. ಯಾಕೆಂದರೆ ಕೆಲಸಕ್ಕೆ ನಿಧಾನವಾಗಿ ಹೋದರೆ ದಿನದ ಕೂಲಿ ಹೋಗುತ್ತದೆಂದು ಅವರಿಗೆ ಗೊತ್ತು.

ಇತ್ತೀಚೆಗೆ, ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ನಿರ್ಮಿಸಲು ಮಾಡಿದ ಯತ್ನ ಅಲ್ಪ ಯಶಸ್ಸು ಕಂಡಿತು. ಶಾಲಾಭಿವೃದ್ಧಿ ಸಮಿತಿಗೆ ಬದಲು ಈ ಎಸ್.ಡಿ.ಎಂ.ಸಿ. ಯಲ್ಲಿ ಆ ಶಾಲೆಗೆ ಹೋಗುವ ಮಕ್ಕಳ ಪೋಷಕರು ಸದಸ್ಯರಾಗಿರುತ್ತಾರೆ. 2001ರ ಸೆಪ್ಟಂಬರ್ 28 ರಿಂದ ನಡೆದ ಮೊದಲ ಎಸ್.ಡಿ.ಎಂ.ಸಿ. ಸಭೆಯಲ್ಲಿ, ಮಕ್ಕಳಿಗೆ ಆಡಲು ಮೈದಾನ, ಶಾಲೆಯಬಳಿ

ಕುಡಿಯುವ ನೀರಿನ ವ್ಯವಸ್ಥೆ ಮತ್ತು ಮಧ್ಯಾಹ್ನದೂಟವನ್ನು ಮತ್ತೆ ಆರಂಭಿಸಲು ಕೋರಿದರು. ಶಾಲೆ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಅಸಮಾಧಾನವನ್ನು ಖಾಸಗಿಯಾಗಿ ವ್ಯಕ್ತ ಪಡಿಸಿದರೂ, ಎಸ್.ಡಿ.ಎಂ.ಸಿ. ಸಭೆಯಲ್ಲಿ ಈ ಬಗ್ಗೆ ಯಾರೂ ಪ್ರಸ್ತಾಪಿಸಿಲ್ಲ.

## ತರಗತಿಯಲ್ಲಿ ಚಟುವಟಿಕೆಗಳು

ಮೊದಲನೆಯದಾಗಿ ತರಗತಿಯಲ್ಲಿ ಸ್ಥಳ ಸಾಕಾಗದು. ಇದರ ಮೇಲೆ ತರಗತಿ ನಿರ್ವಹಣೆ ಸಮರ್ಪಕವಾಗಿಲ್ಲ. ಹೀಗಾಗಿ ತರಗತಿಗಳಲ್ಲಿ ಗಲಾಟೆ ಗೌಜ ಇದ್ದದ್ದೇ. ಅದರಲ್ಲೂ 40 ಮಕ್ಕಳಿಗಿಂತಾ ಹೆಚ್ಚಿರುವ ಒಂದು ಮತ್ತು ಎರಡನೇ ತರಗತಿಯಲ್ಲಂತೂ ವಿಪರೀತ ಗಲಾಟೆ ಮತ್ತು ಅವರನ್ನು ನಿಯಂತ್ರಿಸಲಾಗುವುದೇ ಇಲ್ಲ. ತರಗತಿ ನಡೆದಿರುವಂತೆಯೇ ಮಕ್ಕಳು ಒಳಗೆ ಹೊರಗೆ ಓಡುತ್ತಲೇ ಇರುತ್ತಾರೆ. ಆ ಅಬ್ಬರದ ಗದ್ದಲದ ನಡುವೆ ಅಧ್ಯಾಪಕಿ ಹೇಳುವ ಪಾಠ ಕಿವಿಗೆ ಬೀಳುವುದಿಲ್ಲ. ಈ ಸ್ಥಳದಲ್ಲಿ *ಅಂಗನವಾಡಿ* ಇಲ್ಲದ ಕಾರಣ ಅನೇಕ ವಿಧ್ಯಾರ್ಥಿಗಳು ಕೆಲವೇ ತಿಂಗಳುಗಳ ಪುಟ್ಟ ಪುಟ್ಟ ತಂಗಿ/ತಮ್ಮಂದಿರನ್ನೂ ತಮ್ಮೊಡನೆ ಶಾಲೆಗೆ ಹೊತ್ತು ತರುತ್ತಾರೆ. ಈ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ಅವರಿಗೆ ತರಗತಿಯ ಪಾಠಗಳಿಗೆ ಗಮನ ಕೊಡುವುದಕ್ಕೆ ಆಗುವುದೇ ಇಲ್ಲ. ಜೊತೆಗೆ, ಪುಟ್ಟ ಮಕ್ಕಳಿಗೆ ಒಂದುಕಡೆ ಇರಲಾಗದೆ ಒಳಗೆ ಹೊರಗೆ ಓಡುತ್ತಲೇ ಇರುತ್ತಾರೆ.

3 ಮತ್ತು 4ನೇ ತರಗತಿಯಲ್ಲಿ ಕೆಲವೇ ಮಕ್ಕಳಿದ್ದು, ಜಯಾ ಮತ್ತು ಲಕ್ಷ್ಮಿ ಪಾಠ ಮಾಡುವಾಗ ಆದಷ್ಟು ಶಿಸ್ತು ಪಾಲಿಸಿ ಅವರ ಮಾತನ್ನು ಕೇಳಿ ಕಲಿಯುತ್ತಾರೆ. ಈ ಇಬ್ಬರೂ ಅಧ್ಯಾಪಕಿಯರು ಕಪ್ಪುಹಲಗೆಯನ್ನಲ್ಲದೆ ವಿವಿಧ ಚಾರ್ಟ್‌ಗಳು ಹಾಗೂ ಬೋಧನಾ ವಿಧಾನ ಮತ್ತು ಸಾಮಗ್ರಿಗಳನ್ನು ಬಳಸಿ ಪಾಠ ಮಾಡುತ್ತಾರೆ. ಮಕ್ಕಳು ಎಷ್ಟು ಕಲಿತಿದ್ದಾರೆ, ತಿಳಿದಿದ್ದಾರೆ ಎಂದು ಕಂಡುಕೊಳ್ಳಲು ಮಧ್ಯೆ ಮಧ್ಯೆ ಪ್ರಶ್ನೆಗಳನ್ನು ಕೇಳುತ್ತಾರೆ. ಸುತ್ತಮುತ್ತಲ ಪರಿಸರದಲ್ಲಿರುವುದನ್ನು ಬಳಸಿಕೊಂಡು ಜಯಾ ಮತ್ತು ಲಕ್ಷ್ಮಿ ವಿಚಾರಗಳನ್ನು ವಿವರಿಸಿ ಪಾಠ ಮಾಡುತ್ತಾರೆ.

ಇಷ್ಟೆಲ್ಲದರ ಜೊತೆ, ತರಗತಿಯ ಮಕ್ಕಳ ವಿವಿಧ ಬೇಡಿಕೆಗಳಿಗೆ ಸ್ಪಂದಿಸಿ ಪಾಠ ಮಾಡುವುದು ಆಯಾ ಅಧ್ಯಾಪಕಿಯ ವೈಯಕ್ತಿಕ ಸಾಮರ್ಥ್ಯವನ್ನು ಅನುಸರಿಸಿದೆ.

ಮೂರು ತಿಂಗಳುಗಳ ಕಾಲ ಸತತವಾಗಿ ನಡೆದ ಸರಕಾರೀ ಕಿರಿಯ ಪ್ರಾಥಮಿಕ ಶಾಲೆಯ ತರಗತಿಗಳ ಗಮನಿಸುವಿಕೆಯಿಂದ ಈ ಮುಂದಿನ ವಿಚಾರಗಳು ಹೊರಹೊಮ್ಮಿದೆ.

* ಗಣಿತವೊಂದನ್ನು ಬಿಟ್ಟು ಮಿಕ್ಕೆಲ್ಲ ವಿಚಾರಗಳನ್ನು ಕಂಠಪಾಠದ ಮೂಲಕವೇ ಕಲಿಸುವುದು. ಬಹಳಷ್ಟು ಪ್ರಸಂಗಗಳಲ್ಲಿ ವಿಷಯಗಳು, ವಿಚಾರಗಳನ್ನು ಬಿಡಿಸಿ ವಿವರಿಸುವುದೇ ಇಲ್ಲ. ಮಕ್ಕಳ ಅಲ್ಲಿನ ಬದುಕನ್ನೇ ಅಧರಿಸಿ ಕೆಲವೇ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳಲಾಗುವುದು.

* "ಸೀಮೆಸುಣ್ಣದಲ್ಲಿ ಬರೆಯುವುದು ಮತ್ತು ಮಾತನಾಡುವುದು" ಪಾಠ ಮಾಡುವ ಉಳಿದೆಲ್ಲಾ ವಿಧಾನಗಳಿಗಿಂತ ಮುಂದಿದೆ, ಬೋರ್ಡ್ ಮೇಲೆ ಬರೆದಿರುವುದನ್ನು ಅಥವಾ ಪಠ್ಯಪುಸ್ತಕದಿಂದ ಪ್ರತಿ ಮಾಡಲು ವಿಧ್ಯಾರ್ಥಿಗಳಿಗೆ ಸಾಮಾನ್ಯವಾಗಿ ಹೇಳಿ ಬಿಡುತ್ತಾರೆ.

* ಮಕ್ಕಳ ಬಗ್ಗೆ ಸ್ವಲ್ಪವೂ ಗಮನ ನೀಡುವುದಿಲ್ಲ. ನಿಧಾನಗತಿಯಲ್ಲಿ ಕಲಿಯುವ ಅಥವಾ ವಿಚಾರ ವಿಷಯಗಳನ್ನು ಗ್ರಹಿಸಲಾಗದ ಹಾಗೂ ದೀರ್ಘಕಾಲ ಹಾಜರಾಗದ ಮಕ್ಕಳ ವಿಚಾರದಲ್ಲಂತೂ ಇದು ಸರ್ವೇಸಾಮಾನ್ಯ.

* ಒಂದು ಮತ್ತು ಎರಡನೇ ತರಗತಿಯ ಮಕ್ಕಳ ಪುಸ್ತಕಗಳನ್ನು ನೋಡುವಾಗ ಶಿಕ್ಷಕಿಯರು ತೀರಾ ಯಾಂತ್ರಿಕವಾಗಿ ಗುರುತು ಹಾಕುತ್ತಾರೆ. ಪುಸ್ತಕಗಳಲ್ಲಿ ಮಕ್ಕಳು ಮಾಡಿರುವ ತಪ್ಪುಗಳನ್ನು ಅಧ್ಯಾಪಕಿಯರು ಸಾಮಾನ್ಯವಾಗಿ ಸರಿಪಡಿಸುವುದೇ ಇಲ್ಲ.

* ತರಗತಿಯ ಅವಧಿಯಲ್ಲಿ ಮಕ್ಕಳು ಅಷ್ಟೇನೂ ಪ್ರಶ್ನೆಗಳನ್ನು ಕೇಳುವುದಿಲ್ಲ. ಶಿಕ್ಷಕಿ ಏನು ಹೇಳುತ್ತಾರೋ ಅದನ್ನು ಮೌನವಾಗಿ ಕೇಳುವುದು ಮತ್ತು ಕಪ್ಪು ಹಲಗೆಯ ಮೇಲೆ ಬರೆದ ಉತ್ತರಗಳನ್ನು ಪ್ರತಿ ಮಾಡುವುದಷ್ಟೆ ಅವರ ಕೆಲಸ.

## ನಿಯಂತ್ರಿಸುವ ವಿಧಾನಗಳು

ಮಕ್ಕಳನ್ನು ನಿಯಂತ್ರಿಸಲು ಶಿಕ್ಷಕರು ಹಲವಾರು ವಿಧಾನಗಳನ್ನು ಬಳಸುತ್ತಾರೆ. ಮಕ್ಕಳನ್ನು ಸುಮ್ಮನೆ ಕುಳಿತುಕೊಳ್ಳುವಂತೆ ಮಾಡಲು ಸಾಮಾನ್ಯವಾಗಿ ಬಳಸುವ ವಿಧಾನ ಹೆದರಿಸುವುದು ಮತ್ತು ಹೊಡೆತ. "ನಮ್ಮ ತರಗತಿಗಳಲ್ಲಿ ತುಂಬಾ ಮಕ್ಕಳಿದ್ದಾರೆ. ಅವರನ್ನು ಸುಮ್ಮನೆ ಕೂರಿಸುವುದು ಅತ್ಯಂತ ಕಷ್ಟ. ಅವರು ಸುಮ್ಮನೆ ಕುಳಿತು ನಮ್ಮ ಮಾತು ಕೇಳಬೇಕೆಂದರೆ ಹೊಡೆಯಲೇಬೇಕು" ಎಂದು ಲಕ್ಷ್ಮಿ ಒಪ್ಪಿಕೊಳ್ಳುತ್ತಾರೆ. ಅಧ್ಯಾಪಕಿಯರು ತರಗತಿಯ ಆಚೆ ಹೋದಾಗ ತರಗತಿಯನ್ನು "ನೋಡಿಕೊಳ್ಳಲು" ಮಾನೀಟರ್ ಅನ್ನು ನೇಮಿಸಿರುತ್ತಾರೆ. ಆದರೂ ಮಕ್ಕಳು ಅಲ್ಲಿ ಇಲ್ಲಿ ಓಡಾಡುತ್ತಾ ಇರುವುದರಿಂದ ತರಗತಿಗಳಲ್ಲಿ ಸದಾ ಗದ್ದಲವೇ ಇರುವುದು. ವಿದ್ಯಾರ್ಥಿಗಳಿಗೆ ಹೊಡೆತ ಬಡೆತ ಎಷ್ಟು ಸಾಮಾನ್ಯವೆಂದರೆ, ಶಾಲೆ ಬಿಡಲು ಇದೇ ಕಾರಣವೆಂದು ಎಷ್ಟೋ ಮಕ್ಕಳು ಹೇಳಿದ್ದಾರೆ.

ಮಕ್ಕಳಲ್ಲಿ ಶಿಸ್ತು ತರಲು ಹೊಡೆಯುವುದು ಅತ್ಯಾವಶ್ಯಕ ಎಂದು ಹೇಳುವವರ ನಡುವೆಯೂ, ಮಕ್ಕಳ ಸ್ವಭಾವದ ಬಗ್ಗೆ ಅರ್ಥ ಮಾಡಿಕೊಂಡು ತಾಳ್ಮೆಯಿಂದಿರುವವರೂ ಇದ್ದಾರೆ. ಆರು ವರ್ಷಗಳ ಅಧ್ಯಾಪಕ ವೃತ್ತಿ ಮಾಡಿರುವ ಲಕ್ಷ್ಮಿ ಹೇಳುವುದು ಮಕ್ಕಳಿಗೆ ಪಾಠ ಹೇಳಿ ಕೊಡಲು ಪ್ರೀತಿ ಮತ್ತು ಶಿಸ್ತು ಎರಡರ ಸರಿಯಾದ ಬಳಕೆ ಬೇಕು ಎಂದು. "ನೀವು ಯಾವಾಗಲೂ ಹೊಡೆಯುತ್ತಿದ್ದರೆ ಮಕ್ಕಳು ಶಾಲೆಗೆ ಬರುವುದೇ ಇಲ್ಲ. ನೀವವರಿಗೆ ಶಿಕ್ಷೆಕೊಡದಿದ್ದರೆ ಅವರು ಕಲಿಯುವುದೇ ಇಲ್ಲ. ಇವುಗಳ ಸಮಪ್ರಮಾಣ ಕಂಡುಕೊಳ್ಳುವುದು ಕಷ್ಟ". ಸಾಮಾನ್ಯವಾಗಿ ಮಕ್ಕಳ ಸ್ಥಿತಿಗತಿಯ ಬಗ್ಗೆ ಕರುಣೆ ಇರುವ ಆಕೆ ಹೇಳುವುದು, "ಅನೇಕ ಮಕ್ಕಳು ಏನೂ ತಿನ್ನದೇ ಶಾಲೆಗೆ ಬರುತ್ತಾರೆ. ಮಕ್ಕಳು ತಮ್ಮ ಪಾಠದ ಮನೆಗೆಲಸ ಮಾಡಿಲ್ಲದಿದ್ದರೆ, ಅಥವಾ ಹೇಳಿದ್ದನ್ನು ಕೇಳಲಾಗದ ಸ್ಥಿತಿಯಲ್ಲಿದ್ದಾಗ ನಾವು ಅವರಿಗೆ ಹೊಡೆಯುವುದಾದರೂ ಹೇಗೆ?"

## ಶಿಕ್ಷಕರು ಮತ್ತು ಶಿಕ್ಷಣದ ಮೇಲೆ ಅವರ ಪ್ರಭಾವ

ಶಾಲೆಗಳ ಸ್ಥಿತಿ ಮತ್ತು ಕ್ರಿಯಾಶೀಲತೆಗೆ ಶಿಕ್ಷಕರ ಪಾತ್ರ ಬಹುಮುಖ್ಯ. ಶಿಕ್ಷಕ ವರ್ಗದ ಧೋರಣೆ ಶಾಲೆಯ ಮೇಲೆ ಧನಾತ್ಮಕ ಅಥವಾ ಋಣಾತ್ಮಕ ಪ್ರಭಾವಬೀರುವುದು. ಮಕ್ಕಳು ಯಾರೂ ಇಷ್ಟಪಡದ, ತಮ್ಮ ಶಿಕ್ಷಕಿಯ ಪಾತ್ರವನ್ನು ಸರಿಯಾಗಿ ನಿಭಾಯಿಸದ ಒಬ್ಬ ಶಿಕ್ಷಕಿ ತಮ್ಮ ಬಗ್ಗೆಯೇ ಹೀಗೆ ಹೇಳಿಕೊಂಡಿದ್ದಾರೆ, "ಸ್ಲಂ ಶಾಲೆಗೆ ನನ್ನನ್ನು ನೇಮಿಸಿದ್ದು ಇಷ್ಟವಾಗಲಿಲ್ಲ. ಆದರೆ ಈಗ ಹೇಗೋ

ಹೊಂದಿಕೊಂಡಿದ್ದೀನಿ. ಇಲ್ಲಿನ ಮಕ್ಕಳಿಗೆ ಶಿಸ್ತೆಂದರೇನೆಂಬದೇ ತಿಳಿದಿಲ್ಲ. ಅವರಿಗೆ ಹೊಡೆಯಲೇಬೇಕು. ಹೊಡೆತವಿಲ್ಲದೆ ಅವರಿಗೇನೂ ಅರ್ಥವಾಗುವುದಿಲ್ಲ ಮತ್ತು ತರಗತಿಯಲ್ಲಿ ಸರಿಯಾಗಿರುವುದಿಲ್ಲ'. ಈ ಮಕ್ಕಳು ಸರಿಯಿಲ್ಲ, ನನ್ನನ್ನು ಇಲ್ಲಿ ನೇಮಿಸಿರುವುದೇ ಒಂದು ಶಿಕ್ಷೆ, ಎಂಬ ಮನೋಭಾವನೆಗಳೇ ಅಲ್ಲಿನ ಮಕ್ಕಳಿಗೆ ಏನೂ ಕಲಿಸದಿರಲು, ಶಾಲೆಯ ಉನ್ನತಿಗಾಗಿ ಏನೂ ಮಾಡದಿರುವ ಆ ಅಧ್ಯಾಪಕಿಯ ಸ್ಥಿತಿಯಾಗಿದೆ.

ಈ ಮಕ್ಕಳು ಬದುಕಿರುವ ರೀತಿ, ಅವರಿರುವ ಸ್ಥಿತಿಯ ಬಗ್ಗೆ ಇಬ್ಬರು ಅಧ್ಯಾಪಕಿಯರಿಗೆ ಭಾರೀ ಬೇಸರವಿದೆ. ಸಧ್ಯ, ತಮಗೆ ಒಂದು ಉದ್ಯೋಗವಾದರೂ ಇದೆಯಲ್ಲ ಎಂಬ ಭಾವನೆ ಅವರಿಗಿದೆ. ಒಬ್ಬಾಕೆ ಹೇಳುವಂತೆ, "ಈ ಮಕ್ಕಳಿರುವುದರಿಂದ ತಾನೆ ನನಗೊಂದು ಉದ್ಯೋಗ, ಸಂಬಳ ಎಂದಿರುವುದು. ಈ ಮಕ್ಕಳಿಗೆ ಪಾಠ ಮಾಡುವುದು ನನ್ನ ಉದ್ಯೋಗ ಮತ್ತು ಜವಾಬ್ದಾರಿ. ಮೊದಮೊದಲು ಇಲ್ಲಿಗೆ ಬರಲು ನನಗೆ ಇಷ್ಟವಿರಲಿಲ್ಲ, ಆದರೆ ಕಾಲ ಕಳೆದಂತೆ ಮಕ್ಕಳಿಗೆ ನಾನೆಂದರೆ ಬಹಳ ಅಚ್ಚು ಮೆಚ್ಚು". ಈಕೆಗೆ ಮತ್ತು ಇದೇ ರೀತಿಯ ಭಾವನೆಗಳಿಗೆ ಸಹಮತ ನೀಡುವ ಈಕೆಯ ಗೆಳತಿ, ಇನ್ನೊಬ್ಬ ಅಧ್ಯಾಪಕಿಗೆ ಈ ಸಮುದಾಯ, ಇಲ್ಲಿನ ಶಾಲೆ, ಮಕ್ಕಳ ಬಗ್ಗೆ ಕಾಳಜಿಯಿದೆ. ಇಲ್ಲಿನ ಶಾಲೆ, ಮಕ್ಕಳು ಹಾಗೂ ಸಮುದಾಯ ಕುರಿತು ಹಾಗೂ ತಮ್ಮ ಕರ್ತವ್ಯದ ಬಗ್ಗೆ ಅವರು ಜಾಗೃತರಾಗಿದ್ದಾರೆ. ಅವರಿಬ್ಬರು ಶಾಲೆಗೆ ಸರಿಯಾಗಿ ಬರುವರಲ್ಲದೆ, ಮಕ್ಕಳೊಂದಿಗೆ ವ್ಯವಹರಿಸುವಾಗ, ಅವರೊಡನೆ ನಡೆದುಕೊಳ್ಳುವಾಗ ಮಕ್ಕಳ ಬಗ್ಗೆ ಕಾಳಜಿ ಹೊಂದಿರುತ್ತಾರೆ.

ಅಲ್ಲಿನ ಮಕ್ಕಳು, ಕುಟುಂಬಗಳು ಹಾಗೂ ಸಮುದಾಯದ ಬಗ್ಗೆ ಕರುಣೆ ಮತ್ತು ಸಹಾಯ ಮಾಡಬೇಕೆಂಬ ಭಾವನೆಯಿದ್ದರೂ, ಮಕ್ಕಳು ಶಾಲೆಗೆ ಬಂದು ಕಲಿಯುವಂತಹ ಪ್ರಯತ್ನವನ್ನು ತಾವೇ ತಾವಾಗಿ ಯಾವುದೇ ಅಧ್ಯಾಪಕರು ಎಂದೂ ಮಾಡುವುದಿಲ್ಲ. ಮಕ್ಕಳ ಈ ದುಸ್ಥಿತಿಗೆ ಬಡತನ ಮುಖ್ಯ ಕಾರಣ ಎಂದೇ ಭಾವಿಸುವ ಶಿಕ್ಷಕವರ್ಗ, ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವ ಯಾವುದೇ ಕ್ರಮ ಕೈಗೊಳ್ಳುವಲ್ಲಿ ಅಥವಾ ಮಕ್ಕಳನ್ನು ಶಾಲೆಯಿಂದ ಹಿಂತೆಗೆದುಕೊಳ್ಳಬೇಡಿ ಎಂದು ಪೋಷಕರಿಗೆ ಹೇಳುವ ವಿಧಾನಗಳನ್ನು ಕಂಡುಕೊಂಡಿಲ್ಲ. ಮಕ್ಕಳು ಪರಿಸ್ಥಿತಿಯ ಕೈಗೊಂಬೆಗಳು, ಈ ಪರಿಸ್ಥಿತಿ ಬದಲಿಸಲು ಶಿಕ್ಷಕರಾಗಿ ತಮಗೇನೂ ಮಾಡಲು ಸಾಧ್ಯವಿಲ್ಲ ಎಂದೇ ಭಾವಿಸುವರು. ಮಕ್ಕಳ ಸ್ಥಿತಿಗತಿಯ ಬಗ್ಗೆ ಅನುಕಂಪ ತೋರುವ ಈ ಅಧ್ಯಾಪಕರು, ಮಕ್ಕಳು ಶಾಲೆ ಬಿಟ್ಟರೆ, ಅಥವಾ ಮನೆ ಕೆಲಸಗಳನ್ನು ಮಾಡಲು ಮಗುವೊಂದು ಹಿಂದೆ ಉಳಿದರೆ

ಅಥವಾ ಶಾಲೆಬಿಟ್ಟು ಕೆಲಸಕ್ಕೆ ಸೇರಿದರೆ, ತಾವಾಗೇ ಏನೂ ವಿಶೇಷ ಕ್ರಮ ಕೈಗೊಳ್ಳುವುದಿಲ್ಲ.

ಮಕ್ಕಳು ಶಾಲೆ ಬಿಡುವ ಪ್ರಮಾಣ ಅತ್ಯಧಿಕವಾಗಿರುವುದು ಅನಿವಾರ್ಯ ಎಂದೇ ಹೇಳುವ ಅಧ್ಯಾಪಕರು, ಶಾಲೆಯನ್ನು ಸರಿಯಾಗಿ ನಡೆಸದಿರುವುದು ಹಾಗೂ ತಾವು ಏನೂ ಪಾಠ ಮಾಡದಿರುವುದು, ಇದಕ್ಕೆ ಕಾರಣ ಎಂದು ಒಪ್ಪುವುದಿಲ್ಲ. ಶಾಲೆ ಬಿಟ್ಟಿರುವ ಬಹುತೇಕ ಮಕ್ಕಳು ಹೇಳಿರುವುದು, ಶಾಲೆ ಅಷ್ಟೇನೂ ಆಸಕ್ತಿದಾಯಕವಾಗಿರಲಿಲ್ಲ ಮತ್ತು ಅಲ್ಲಿರಲು ತಮಗೇನೂ ಪ್ರೋತ್ಸಾಹವಿರಲಿಲ್ಲ ಎಂದಿದ್ದಾರೆ. ಶಾಲೆ ಬಿಟ್ಟ ದೊಡ್ಡ ಹುಡುಗರು ಹೇಳುವುದು, ತಾವು ಶಾಲೆ ಬಿಟ್ಟಾಗ ತಮ್ಮನ್ನು ಶಾಲೆಗೆ ಹಿಂದಿರುಗಿಸುವಂತಹ ಯಾವುದೇ ಪ್ರಯತ್ನ ಹಿಂದೆ ಯಾರೂ ಮಾಡಿರಲಿಲ್ಲ ಎಂದಿದ್ದಾರೆ.

ಈ ಪ್ರದೇಶದ ಮಕ್ಕಳು ಮತ್ತು ಅವರ ಸಮಸ್ಯೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳದಿರಲು ಈ ಎಲ್ಲ ಕಾರಣಗಳೊಡನೆ, ರಾಜ್ಯದ ಆಡಳಿತ ವರ್ಗ, ಸರ್ಕಾರದ ನೀತಿ ನಿಯಮ ಮತ್ತು ಕಾರ್ಯಕ್ರಮಗಳು ಶಿಕ್ಷಕ ವರ್ಗವನ್ನು ತೀರಾ ಮೂಲೆಗುಂಪು ಮಾಡಿರುವುದೂ ಸೇರಿದೆ. ಶಿಕ್ಷಕರ ಕೌಶಲ್ಯ ಹೆಚ್ಚಿಸುವ ಮತ್ತು ಅವರಿಗೆ ಬೆಂಬಲ ನೀಡುವ ಉದ್ದೇಶದಿಂದ ಆದ ಇತ್ತೀಚಿನ ಎರಡು ಕಾರ್ಯಕ್ರಮಗಳು ಶಿಕ್ಷಕ ವರ್ಗದವರ ಪಾತ್ರ ಮತ್ತು ಕೊಡುಗೆಗಳನ್ನೇ ಅಳಸಿಹಾಕುವ ಸಾಧ್ಯತೆಯುಂಟು ಮಾಡಿದೆ. ಹೊಸ ತರಬೇತಿ ಕಾರ್ಯಕ್ರಮಗಳು ಆಸಕ್ತಿದಾಯಕವಾಗಿದೆ ಎನ್ನುವ ಶಿಕ್ಷಕರು, ಕೆಲವು ನಿರ್ದಿಷ್ಟ ವಿಧಾನಗಳನ್ನು ಬಳಸಲೇಬೇಕೆನ್ನುವ ಒತ್ತಾಯದಿಂದ ಬೇಸರಗೊಂಡಿದ್ದಾರೆ. ಒಬ್ಬ ಟೀಚರ್ ಹೇಳುವಂತೆ, "ಪಾಠ ಮಾಡಲು ನನಗೀಗ ಹೆದರಿಕೆ. ನನಗೆ ಸರಿಹೊಂದುವ ಕೆಲವು ವಿಧಾನಗಳು ಇವೆ. ನಾನು ಕಲಿತ ವಿಧಾನದಲ್ಲಿ ಕಲಿಸಲು ನನಗಿಷ್ಟ. ಆದರೀಗ ಹಾಡು ಮತ್ತು ಚಟುವಟಿಕೆಗಳಿಗೆ ಹೆಚ್ಚು ಒತ್ತು. ನನಗದರಲ್ಲಿ ಪ್ರೌಢಿಮೆ ಇಲ್ಲ. ಹೀಗಾಗಿ ನನ್ನ ಆತ್ಮಸ್ಥೈರ್ಯವೇ ಕುಂದುತ್ತಿದೆ". ಈ ಹೊಸ ವಿಧಾನ ಕೆಲವೇ ಕೆಲವು ವಿಷಯಗಳಿಗೆ ಸೂಕ್ತ ಎಂಬುದು ಮತ್ತೊಬ್ಬ ಅಧ್ಯಾಪಕಿಯ ಅಂಬೋಣ. ಇಂತಹ ಅಭಿಪ್ರಾಯಗಳನ್ನು ಕೇಳಿದರೆ, ಈ ಹೊಸ ತರಬೇತಿ ಕಾರ್ಯಕ್ರಮವನ್ನು ಶಿಕ್ಷಕ ವರ್ಗದವರು ಸಂಪೂರ್ಣವಾಗಿ ಅಂತರ್ಯ- ಗೊಳಿಸಿಕೊಂಡಿಲ್ಲ ಎಂಬುದು ಕಂಡು ಬರುವುದು. ಇವೆಲ್ಲಕ್ಕಿಂತ ಹೆಚ್ಚಾಗಿ, ಇಂತಹ ಕಾರ್ಯಕ್ರಮಗಳು ಶಿಕ್ಷಕರಿಗೆ ತಮ್ಮ ಪ್ರತಿಭೆ, ತಿಳಿವಳಿಕೆ ಅಥವಾ ಕೌಶಲ್ಯಗಳನ್ನು ಬಳಸಿಕೊಳ್ಳಲು ಪ್ರೋತ್ಸಾಹ ನೀಡಿಲ್ಲ.

ಶಿಕ್ಷಕರನ್ನು ಮೂಲೆ ಗುಂಪಾಗಿಸಿರುವ ಇನ್ನೊಂದು ಕಾರ್ಯಕ್ರಮ ಸಮುದಾಯದಿಂದ ಶಾಲಾ ದತ್ತು ಯೋಜನೆ.[31] ವಾಹನ ನಗರದಲ್ಲಿರುವ ಸರ್ಕಾರೀ ಕಿರಿಯ ಪ್ರಾಥಮಿಕ ಶಾಲೆಯುನ್ನು ಆ ವಾರ್ಡ್‌ನಲ್ಲಿರುವ ಖಾಸಗೀ ಶಾಲೆಂಯೊಂದು "ದತ್ತು" ತೆಗೆದುಕೊಂಡು ಅಲ್ಲಿ ಒಂದು ಕೋಣೆಯನ್ನು ಕಟ್ಟಿಸಿಕೊಟ್ಟಿದೆ. ಜೊತೆಗೆ, ಪ್ರತಿ ತಿಂಗಳಿಗೊಮ್ಮೆ ಖಾಸಗಿ ಶಾಲೆಯ ಅಧ್ಯಾಪಕಿಯೊಬ್ಬರು ಸರ್ಕಾರಿ ಶಾಲೆಗೆ ಭೇಟಿ ನೀಡುತ್ತಾರೆ. ಆಕೆ, ಶಾಲೆಯ ವಿಧ್ಯಾರ್ಥಿಗಳ ಹಾಜರಾತಿ ಹಾಗೂ ಶಾಲೆಯ ತರಗತಿಗಳ ಸ್ಥಿತಿಗತಿಗಳತ್ತಲೂ ಗಮನಹರಿಸುವರು (ಇನ್ಸ್‌ಪೆಕ್ಷನ್). ಇಂತಹ ಇನ್ಸ್‌ಪೆಕ್ಷನ್‌ಗಳ ಸಮಯದಲ್ಲಿ ಸರ್ಕಾರೀ ಶಾಲೆಯ ಶಿಕ್ಷಕ ವರ್ಗ ಸಹಕಾರ ನೀಡುತ್ತಿದೆ. ಆದರೆ ತಮ್ಮ ಶಾಲೆಯ ನಿರ್ವಹಣೆಗೆ ಖಾಸಗಿ ಶಾಲೆಯುವರು ನೀಡುವ ಸಹಾಯವೇ ಮೊದಲಾದುವುಗಳಿಗೆ ಅತೀವವಾಗಿ ಅವಲಂಬಿಸುತ್ತಿದ್ದಾರೆ. ಶಿಕ್ಷಕ ವರ್ಗದವರ ಸ್ಥೈರ್ಯ, ಜವಾಬ್ದಾರಿ ಬಳಸಿ ಶಾಲೆಯ ಆಡಳಿತ ನಿರ್ವಹಣೆಗೆ ಅವರನ್ನು ಹೊಣೆಗಾರರನ್ನಾಗಿಸುವ ಬದಲು, ಈ ಹೊಸ ಯೋಜನೆ, ಶಿಕ್ಷಕರ ಜವಾಬ್ದಾರಿ ಮತ್ತು ಸ್ಥೈರ್ಯವನ್ನೇ ಅಳಸಿಹಾಕಿದೆ.

## ಶಾಲೆಯ ಹೊರಗಿರುವ ಮಕ್ಕಳ ಜಗತ್ತು

ಚಿಕ್ಕ ಹೆಣ್ಣು ಮಕ್ಕಳು ನೆಲ ಗುಡಿಸಿ ಒರೆಸುತ್ತಾರೆ, ಮನೆಯೆದುರು ಕುಳಿತು ಪಾತ್ರೆ ತೊಳೆದು, ಬಟ್ಟೆ ಒಗೆಯುವರು, ಸಾರ್ವಜನಿಕ ನಲ್ಲಿಯಿಂದ ನೀರು ತರುವರು, ಅಡುಗೆ ಪದಾರ್ಥಗಳ ಶುದ್ಧೀಕರಣ ಮತ್ತು ಅಡುಗೆ ಮಾಡುವುದು, ಪುಟ್ಟ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ಅಲ್ಲಿ ಇಲ್ಲಿ ಅಲೆದಾಡುವ ಹುಡುಗರು, ಚಿಕ್ಕ ಪುಟ್ಟ ಅಂಗಡಿ ನೋಡಿಕೊಳ್ಳುವುದು, ಗ್ಯಾರೇಜು ಹೋಟೆಲ್‌ಗಳಲ್ಲಿ ಕೆಲಸ ಮಾಡಲು ಓಡುವುದರಲ್ಲೇ ಬಿದ್ದಿದ್ದಾರೆ. ಬೆಂಗಳೂರಿನ ಯಾವುದೇ ಸ್ಲಂಗೆ ಹೋದರೂ ಜನರ ಕಣ್ಣಿಗೆ ಬೀಳುವುದು ಇದೇ ದೃಶ್ಯ. NIAS ನಡೆಸಿದ ಮನೆ ಮನೆ ಸಮೀಕ್ಷೆಯಂತೆ ವಾಹನ ನಗರವೊಂದರಲ್ಲೇ 2,106 ಮಕ್ಕಳಲ್ಲಿ ಶೇ.30 ಅಂದರೆ 636 ಶಾಲೆಗೆ ಹೋಗುವ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಮಕ್ಕಳನ್ನು ಕೇಂದ್ರೀಕರಿಸಿ ನಡೆಸಿದ ಸಂದರ್ಶನದ

---

[31] ಸರಕಾರೀ ಶಾಲೆಗಳಿಗೆ ಸಮುದಾಯದ ಕೊಡುಗೆ ಬರಲೆಂಬ ಉದ್ದೇಶದಿಂದ ಕರ್ನಾಟಕ ಸರ್ಕಾರವು ಸಮುದಾಯದತ್ತ ಶಾಲೆ ಕಾರ್ಯಕ್ರಮವನ್ನು ಆರಂಭಿಸಿದೆ. ವ್ಯಕ್ತಿಗಳು, ಉದ್ದಿಮೆಗಳು, ಸಂಸ್ಥೆಗಳು ಅಥವಾ ಖಾಸಗೀ ಶಾಲೆಗಳೂ ಸಹ ಸರ್ಕಾರೀ ಶಾಲೆಗಳನ್ನು "ದತ್ತು" ತೆಗೆದುಕೊಂಡು, ಅವುಗಳ ಮೂಲಭೂತ ಸೌಕರ್ಯಗಳು ಮತ್ತು ಕಲಿಸುವ, ಕಲಿಯುವ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ಪ್ರಯತ್ನಪಡಬೇಕೆಂದು ಪ್ರೋತ್ಸಾಹಿಸಲಾಗಿದೆ.

ಮಾಹಿತಿ ಶಾಲೆಯಿಂದ ಹೊರಗಿರುವ ಮಕ್ಕಳ ಸ್ಥಿತಿಯ ಚಿತ್ರಣವನ್ನು ಈ ಮುಂದಿನಂತೆ ನೀಡಿದೆ.

## ಶಾಲೆಗೆ ದಾಖಲೇ ಆಗದವರು

ಶಾಲೆಗೇ ದಾಖಲೆ ಆಗದ ಮಕ್ಕಳ ಸಂಖ್ಯೆ ವಾಹನ ನಗರದಲ್ಲಿ ಕಡಿಮೆಯೇ ಇದೆ. ಈ ಅಧ್ಯಯನಕ್ಕಾಗಿ ಸಂದರ್ಶಿಸಿದ ಶಾಲೆಯಿಂದ ಹೊರಗಿರುವ 63 ಮಕ್ಕಳಲ್ಲಿ[32] ಶೇ. 14 ಮಕ್ಕಳು ಎಂದೂ ಶಾಲೆಗೆ ದಾಖಲಾಗಿಲ್ಲ. ಶೇ. 2 ಶಾಲೆಗೆ ದಾಖಲಾಗಿದ್ದರೂ ಶಾಲೆಗೆ ಹಾಜರಾಗುತ್ತಿಲ್ಲ.

ಇದಕ್ಕೆ ಮುಖ್ಯ ಕಾರಣ, ಶಿಕ್ಷಣ ಬೇಕು ಎಂಬ ಬೇಡಿಕೆ ಅಥವಾ ಒತ್ತಾಯ ಎಲ್ಲೆಡೆ ಇದೆ ಮತ್ತು ಸಾಕಷ್ಟು ಪೋಷಕರು ಮಕ್ಕಳನ್ನು ಶಾಲೆಗೆ ಸೇರಿಸುವ ಪ್ರಯತ್ನ ಮಾಡುತ್ತಾರೆ. ಇವೆಲ್ಲದರ ಜೊತೆಗೆ, ಶಿಕ್ಷಣ ಇಲಾಖೆಯ ವತಿಯಿಂದ ನಡೆದಿರುವ ಶಾಲಾ ದಾಖಲಾತಿ ಆಂದೋಲನ ಹಾಗೂ ದಾಖಲಾತಿಗಳಿಗೆ ನೀಡಿರುವ ಒತ್ತಾಸೆಗಳೂ ಸಹ ದಾಖಲಾತಿಯ ಸಂಖ್ಯೆ ಹೆಚ್ಚಾಗಲೂ ಕಾರಣವಾಗಿದೆ.

ಮಕ್ಕಳು ಶಾಲೆಗೆ ದಾಖಲಾಗದೇ ಇರಲು ಮುಖ್ಯ ಕಾರಣ ಕುಟುಂಬಗಳ ಅತಿ ಬಡತನ ಮತ್ತು ಮೇಲಿಂದ ಮೇಲಾಗುವ ಸ್ಥಳಾಂತರಗಳು ಹಾಗೂ ಕುಟುಂಬದಲ್ಲಿರುವ ಸಮಸ್ಯೆಗಳು. ತಮ್ಮ ಕುಟುಂಬದವರಿಗೆ ಮಕ್ಕಳನ್ನು ಶಾಲೆಗೆ ಕಳಿಸಲು ಸಾಧ್ಯವಿಲ್ಲ ಎಂದು ಸಂದರ್ಶಿಸಲ್ಪಟ್ಟ ಮಕ್ಕಳಲ್ಲಿ ಶೇ. 33 ಮಕ್ಕಳು ಹೇಳಿದ್ದಾರೆ. ಇವರೆಲ್ಲರೂ ಸಾಮಾನ್ಯವಾಗಿ ನಿಶ್ಚಿತವಾದ ಹಾಗೂ ನಿಯಮಿತವಾದ ಆದಾಯವಿಲ್ಲದ ಕುಟುಂಬಗಳಿಂದ ಬಂದವರು. ಈ ಮಕ್ಕಳ ತಂದೆಯರಲ್ಲಿ ಶೇ.30 ಜನ ಚಿಕ್ಕಪುಟ್ಟ ಅಂಗಡಿ ನಡೆಸುವರು, ಶೇ.25 ಜನ ಕಟ್ಟಡ ನಿರ್ಮಾಣ ಕೆಲಸ ಮಾಡುವರು, ಶೇ.17 ಜನರು ಕೌಶಲ್ಯರಹಿತ ಕೆಲಗಾರರು ಅಗಿದ್ದಾರೆ. ಬಹುತೇಕ ಕುಟುಂಬಗಳ ಗಂಡಸರು ಸ್ವಯಂ ಉದ್ಯೋಗದಲ್ಲಿ ಇಲ್ಲದ ಕಾರಣ, ಕೆಲಸವಿಲ್ಲದೆ ಇರುವ ಸಾಧ್ಯತೆಗಳೇ ಹೆಚ್ಚು. ಇದರಿಂದಾಗಿ, ಕುಟುಂಬದ ಗಂಡಸರ ಸಂಪಾದನೆ ಮಾತ್ರ ನೆಚ್ಚಿಕೊಂಡಿರುವ ಕುಟುಂಬಗಳು ಶಾಲೆಗೆ ಹೋಗುವ ಮಕ್ಕಳನ್ನು ಬಲವಂತವಾಗಿ ಕೆಲಸಕ್ಕೆ ಕಳುಹಿಸುತ್ತಾರೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸದಿದ್ದರೂ,

---

[32] ಶಾಲೆಯ ಹೊರಗಿರುವ 632 ಮಕ್ಕಳಲ್ಲಿ ವಿವಿಧ ಲಿಂಗ, ವಯಸ್ಸು (6-14 ವರ್ಷ) ಕೌಟುಂಬಿಕ ಹಿನ್ನೆಲೆಯ ಶೇ. 10ರಷ್ಟು ಮಕ್ಕಳನ್ನು ವಿವರವಾದ ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು.

ಶಾಲಾ ಸಂಬಂಧಿತ ಖರ್ಚುಗಳು, ಆಯಾ ಕುಟುಂಬಗಳ ಸಾಕಷ್ಟು ಆದಾಯವನ್ನು ಕಬಳಿಸುತ್ತಿವೆ.

ಋತುಮಾನಗಳಿಗೆ ಅನುಗುಣವಾಗಿ ಹಾಗೂ ಸದಾ ಬದಲಾಗುತ್ತಿರುವ ಉದ್ಯೋಗ ಮತ್ತು ಆದಾಯವಿರುವ ಕುಟುಂಬಗಳ ಮಕ್ಕಳಿಗೆ ಶಾಲೆಗೆ ಸೇರುವ ಸಾಧ್ಯತೆಗಳು ಬಹಳ ಕಡಿಮೆ. ಮಿಗಿಲಾಗಿ, ಶೇ.11 ಮಕ್ಕಳು ಶಾಲಾ ವರ್ಷದ ಮಧ್ಯದಲ್ಲಿ ವಲಸೆ ಬಂದಿರಬೇಕು ಅಥವಾ ಶಾಲಾ ದಾಖಲಾತಿ ಸಮಯದಲ್ಲಿ ವಲಸೆ ಹೋಗಿದ್ದಿರಬೇಕು.

## ಶಾಲೆ ಬಿಟ್ಟವರು

ನಾವು ಸಂದರ್ಶಿಸಿದ ಮಕ್ಕಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ (ಶೇ.81) ಮಕ್ಕಳು ಮಧ್ಯದಲ್ಲೇ ಶಾಲೆ ಬಿಟ್ಟವರು. ಅವರಲ್ಲಿ ಶೇ.60 ಮಕ್ಕಳು ಕೌಟುಂಬಿಕ ಕಾರಣಗಳಿಂದ ಶಾಲೆ ಬಿಟ್ಟೆವು ಎಂದರೆ, ಶೇ.30 ಮಕ್ಕಳು ಶಾಲಾ ಸಂಬಂಧಿತ ಕಾರಣಗಳಿಂದ ಶಾಲೆಯಿಂದ ದೂರವಿರುವುದಾಗಿ ಹೇಳಿದ್ದಾರೆ. ಕೌಟುಂಬಿಕ ಸಂಬಂಧಿತ ವಿಚಾರಗಳಲ್ಲಿ ಶೇ. 20 ಮಕ್ಕಳು ಆರ್ಥಿಕ ಸಮಸ್ಯೆಗಳು ಅಥವಾ ಇದ್ದಕ್ಕಿದ್ದಹಾಗೆ ಉದ್ಭವಿಸಿದ ಆರ್ಥಿಕ ತುರ್ತು ಶಾಲೆ ಬಿಡಲು ಕಾರಣವೆಂದರೆ, ಶೇ.15 ಮಕ್ಕಳು ಕುಟುಂಬವು ವಲಸೆ ಹೋದ ಕಾರಣ ಶಾಲೆ ಬಿಡಬೇಕಾಯಿತು ಎಂದರು.[33] ಹುಡುಗಿಯರಿಗಿಂತ ಶಾಲೆ ಬಿಟ್ಟವರಲ್ಲಿ ಹುಡುಗರ ಸಂಖ್ಯೆಯೇ ಹೆಚ್ಚು. ಹುಡುಗಿಯರನ್ನು ಶಾಲೆ ಬಿಡಿಸುವುದು ತಂಗಿ/ತಮ್ಮಂದಿರನ್ನು ನೋಡಿಕೊಳ್ಳಲು ಅಥವಾ ಮನೆ ನೋಡಿಕೊಳ್ಳಲು ಎಂದು ಹೇಳುವುದೇ ಹೆಚ್ಚು. ಸರಿಯಾಗಿ ಕೆಲಸ ಮಾಡದ ಸರ್ಕಾರಿ ಶಾಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಶಾಲೆಯಿಂದ ಹೊರದಬ್ಬುತ್ತವೆ ಎಂಬುದು, ಶೇ 73 ಶಾಲೆಯಿಂದ ಹೊರಗಿರುವ ಮಕ್ಕಳು ಸರ್ಕಾರಿ ಶಾಲೆಗಳಿಗೆ ಹೋಗುತ್ತಿದ್ದರು ಎಂಬುದರಿಂದ ವ್ಯಕ್ತವಾಗುತ್ತದೆ. ಶಾಲೆಯಿಂದ ಹೊರಬಿದ್ದವರಲ್ಲಿ ಶೇ.10 ಮಕ್ಕಳು ಸರ್ಕಾರಿ ಅನುದಾನಿತ ಶಾಲೆಗಳಿಗೂ ಮತ್ತು ಶೇ. 2 ಮಕ್ಕಳು ಖಾಸಗೀ ಶಾಲೆಗಳಿಗೂ ಹೋಗುತ್ತಿದ್ದರು. ಶಾಲಾ ಸಂಬಂಧಿತ ಕಾರಣಗಳನ್ನು ಹೇಳಿದ ಮಕ್ಕಳಲ್ಲಿ ಶೇ.15 ಮಕ್ಕಳು ಶಾಲೆ ತಮಗೆ ಬೇಸರ ಹುಟ್ಟಿಸಿತೆಂದು ಹೇಳಿದರೆ, ಶೇ.5 ಮಕ್ಕಳು ಅಧ್ಯಾಪಕರು ತಮ್ಮನ್ನು ಕೆಟ್ಟದಾಗಿ ನೋಡಿಕೊಳ್ಳುತ್ತಿದ್ದರು ಎಂದಿದ್ದಾರೆ. ಶೇ. 10 ಮಕ್ಕಳು ಹೇಳಿದ್ದು

[33] ಇತರ ಕೌಟುಂಬಿಕ ಸಂಬಂಧಿತ ಕಾರಣಗಳೆಂದರೆ, ಕುಟುಂಬದ ಜವಾಬ್ದಾರಿ ಹೊರಲು ಅಥವಾ ಕುಟುಂಬದ ವಯಸ್ಕರ ಅನಾರೋಗ್ಯವೂ ಸೇರಿದೆ.

ಶಾಲೆ ಬಹಳ ದೂರ ಎಂದು. ಶಾಲೆ ದೂರ ಎಂದು ಹೇಳುವ ಮಕ್ಕಳು ಮತ್ತು ಪೋಷಕರು, ಮುಖ್ಯವಾಗಿ ಆ ಸ್ಲಂನಿಂದ ಹೊರಗಿರುವ ಶಾಲೆಗಳನ್ನು ಉದ್ದೇಶಿಸಿ ಹೇಳಿದ್ದು. ಅಂತಹ ಪ್ರಕರಣಗಳಲ್ಲಿ, ಶಾಲೆ ಅವರಿಗೆ ದೂರ ಎಂಬುದು ಮುಖ್ಯ ವಿಷಯವಲ್ಲ. ಬದಲಿಗೆ, ಶಾಲೆಗೆ ಹೋಗಲು ಮುಖ್ಯ ರಸ್ತೆಗಳನ್ನು ಪುಟ್ಟಮಕ್ಕಳು ದಾಟಬೇಕು ಮತ್ತು ಅದರಿಂದ ಉಂಟಾಗಬಹುದಾದ ಅಪಾಯಗಳಿಗೆ ಹೆದರಿ ಮಕ್ಕಳನ್ನು ಆ ಶಾಲೆಗಳಿಂದ ಹಿಂದೆಗೆದುಕೊಂಡಿದ್ದಾರೆ. ಶಾಲೆ ಬಿಡಲು ಇನ್ನುಳಿದ ಕಾರಣಗಳು ಕುಟುಂಬಗಳು ವಲಸೆ ಹೋದದ್ದು ಮತ್ತು ಭಾಷಾ ಸಮಸ್ಯೆಗಳು.

## ಹೆಣ್ಣು ಮಕ್ಕಳು

ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಶಿಕ್ಷಣದ ಅವಕಾಶಗಳಲ್ಲಿ ಎದ್ದುಕಾಣುವ ಅಂಶವೆಂದರೆ, ಗಂಡು ಹುಡುಗರು ಶಾಲೆ ಬಿಡಲು ತಾವೇ ನಿರ್ಧರಿಸಿದರೆ, ಹೆಣ್ಣು ಮಕ್ಕಳನ್ನು ಕುಟುಂಬದವರೇ ಶಾಲೆಯಿಂದ ಹಿಂದೆಗೆದುಕೊಳ್ಳುತ್ತಾರೆ. ನಾವು ಸಂದರ್ಶಿಸಿದ ಮಕ್ಕಳಲ್ಲಿ ಶೇ. 50 ಭಾಗ ಹೆಣ್ಣು ಮಕ್ಕಳು. ಬಹುತೇಕ ಹೆಣ್ಣು ಮಕ್ಕಳನ್ನು ಶಾಲೆಯಿಂದ ಹಿಂತೆಗೆದುಕೊಂಡದ್ದು ಅವರು ಗೃಹಕೃತ್ಯಗಳಿಗೆ - ನೀರು ತರಲು, ಬಟ್ಟೆ ಒಗೆಯಲು, ಪುಟ್ಟ ಮಕ್ಕಳನ್ನು ನೋಡಿಕೊಳ್ಳಲು - ಸಹಾಯ ಮಾಡಲಿ ಎಂದು. ನಾವು ಸಂದರ್ಶಿಸಿದ ಎಲ್ಲ ಮಕ್ಕಳಲ್ಲಿ, ಕೌಟುಂಬಿಕ ಜವಾಬ್ದಾರಿಗಳನ್ನು ನೋಡಿಕೊಳ್ಳಲೆಂದೇ ನಮ್ಮನ್ನು ಶಾಲೆಯಿಂದ ಬಿಡಿಸಲಾಯಿತು ಎಂದು ಹೆಣ್ಣು ಮಕ್ಕಳು ಮಾತ್ರ ಹೇಳಿದ್ದಾರೆ. ಹೆಣ್ಣು ಮಕ್ಕಳನ್ನು ಗೃಹ ಉದ್ದಿಮೆಗಳಲ್ಲಿ, ಅದರಲ್ಲೂ ತುಂಡು ಗುತ್ತಿಗೆ ಕೆಲಸಗಳು - ಅಗರಬತ್ತಿ ಉಜ್ಜುವುದು, ಬೀಡಿ ಮಾಡುವುದು ಮತ್ತು ಬಟ್ಟೆ ಹೊಲೆಯುವ ಕೆಲಸಗಳಲ್ಲಿ ಬಹುಬೇಗ ತೊಡಗಿಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು, ಗಂಡು ಮಕ್ಕಳಂತೆ ಅಲ್ಲಿ ಇಲ್ಲಿ ಅಲೆದಾಡುವುದಾಗಲೀ, ಆಡುವುದು ಅಥವಾ ಏನೋ ಒಂದು ಕೂಲಿ ಕೆಲಸದಲ್ಲಿ ತೊಡಗುವುದಿಲ್ಲ. ಶೇ. 40 ತಾಯಂದಿರು ಮನೆಗೆಲಸ ಮಾಡುವವರು ಮತ್ತು ಶೇ.11 ತಾಯಂದಿರು ಗೃಹ ಉದ್ದಿಮೆಗಳಲ್ಲಿ ತೊಡಗಿರುವುದರಿಂದ, ಅನೇಕ ಹೆಣ್ಣು ಮಕ್ಕಳು ಕೆಲಸಕ್ಕೆ ಅವರ ತಾಯಂದಿರೊಡನೆ ಹೋಗುವರು. ಹೀಗೆ, "ಜೊತೆಯಾಗಿ" ಹೋಗಿ, ತಾಯಂದಿರಿಗೆ ಸಹಾಯ ಮಾಡುವ ಮಕ್ಕಳಿಗೆ ಏನೂ ಕೂಲಿ ಕೊಡದ ಕಾರಣ, ಆದರೆ ಕೆಲಸದಲ್ಲಿ ತರಬೇತಿ ಹೊಂದುತ್ತಿರುವವರಂತೆ ಆಗಿ ಅವರು ಕೆಲಸಕ್ಕೆ ತೊಡಗಿಕೊಳ್ಳಲು ಸಿದ್ಧರಾಗಿರುವಂತೆ ಆಗುತ್ತದೆ.

## ಪೋಷಕರ ಧೋರಣೆ ಮತ್ತು ಮಕ್ಕಳ ಶೈಕ್ಷಣಿಕ ಅವಕಾಶಗಳು

ಬಹುಪಾಲು ಮಕ್ಕಳು ಶಾಲೆಯಿಂದ ಹೊರಗಿರಲು ಮುಖ್ಯವಾಗಿ ಕೌಟುಂಬಿಕ ಕಷ್ಟ ನಷ್ಟಗಳು ಹಾಗೂ ಕೆಲಸ ಮಾಡದ ಶಾಲೆಗಳು ಕಾರಣ ಎಂದು ಹೇಳಬಹುದಾದರೂ, ಕೆಲವು ಮಕ್ಕಳು ಶಿಕ್ಷಣ ವಂಚಿತರಾಗಲು ಪೋಷಕರ ಧೋರಣೆಯೂ ಕಾರಣವಾಗಿದೆ. ಶಾಲೆಗೆ ಹೋಗುವ ಮತ್ತು ಶಾಲೆಯಿಂದ ಹೊರಗಿರುವ ಮಕ್ಕಳು ಮತ್ತವರ ಪೋಷಕರ ಉದ್ಯೋಗ/ವೃತ್ತಿ ಮತ್ತು ಆದಾಯವನ್ನು ಹೋಲಿಸಿ ನೋಡಿದಾಗ, ನಿಶ್ಚಿತ ವರಮಾನವೊಂದೇ ಇದಕ್ಕೆ ಕಾರಣವಲ್ಲವೆಂಬುದು ತಿಳಿಯುವುದು. ಶಾಲೆಗೆ ಹೋಗುವ ಮಕ್ಕಳ ಸಾಕಷ್ಟು ಸಂಖ್ಯೆಯ ಪೋಷಕರು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ಕೂಲಿಗಳು ಅಥವಾ ತಲೆಹೊರೆ ಹೊತ್ತು ಏನಾದರೂ ಮಾರುವವರಾಗಿದ್ದಾರೆ. ಹೀಗಿದ್ದಾಗ್ಯೂ, ಶಾಲೆಗೆ ಹೋಗುತ್ತಿರುವ ಮಕ್ಕಳ ಪೋಷಕರು ತಮಗೆ ಕಡಿಮೆ ಆದಾಯವಿದ್ದರೂ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ಕಟಿಬದ್ಧರಾಗಿದ್ದಾರೆ. ಒಂಟಿ ತಾಯಂದಿರು, ವಿಧವೆಯರು ಮತ್ತು ಗಂಡಂದಿರಿಂದ ದೂರಾದವರು ಮತ್ತು ಬೇರೆಯಾದವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಸಾಕಷ್ಟು ಆಸಕ್ತಿಯುಳ್ಳವರಾಗಿದ್ದಾರೆ. ಇಂತಹವರು ಮಕ್ಕಳಿಗಾಗಿ ಸ್ವಲ್ಪ ಹೆಚ್ಚಿಗೆ ಕೆಲಸ ಮಾಡುತ್ತಾರೆ, ಸಾಲ ಪಡೆಯುತ್ತಾರೆ, ಶಾಲೆಯ ಪ್ರಾಮುಖ್ಯತೆಯ ಬಗ್ಗೆ ತಮ್ಮ ಮಕ್ಕಳಿಗೆ ಮನನ ಮಾಡಿಸುತ್ತಾರೆ. ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಇಂತಹವರಿಗಿರುವ ಆಸಕ್ತಿ ನೋಡಿದರೆ, ಇದಕ್ಕೆ ಫಲ ಸಿಕ್ಕೇ ಸಿಗುವುದೆನಿಸುವುದು.

ಆದರೂ, ಶಾಲೆಯಿಂದ ಹೊರಗಿರುವ ಮಕ್ಕಳ ಅನೇಕ ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಏನೂ ಆಸಕ್ತಿ ಇಲ್ಲ. ಶಾಲೆಗೆ ಹೋಗುವುದೆಂದರೆ ಸಮಯ ದಂಡ ಮಾಡಿದಂತೆ ಎಂದು ಭಾವಿಸುವ ಇವರಲ್ಲಿ ಅನೇಕರು, ಅದರ ಬದಲು ಏನಾದರೂ ಕೆಲಸ – ಕಾರ್ಪೆಂಟರ್, ಮೆಕಾನಿಕ್ ಅಥವಾ ಟೈಲರ್ – ಕಲಿಯುವುದೊಳಿತು ಎಂದು ಭಾವಿಸುವರು. ಇಂತಹವರ ಸಂಖ್ಯೆಯೇನೂ ಅಷ್ಟೊಂದಿಲ್ಲವಾದರೂ, ಇಂತಹವರು ಶಿಕ್ಷಣದ ಬದಲು ಕೆಲಸ ಅಥವಾ ತರಬೇತಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ. "ಶಾಲೆಗೆ ಹೋಗಿ ಏನು ಪ್ರಯೋಜನ? ಅವನು ಬೇಗ ಕೆಲಸ ಆರಂಭಿಸಿದರೆ ಆ ಕೆಲಸ ಚೆನ್ನಾಗಿ ಕಲಿಯಬಲ್ಲ" ನಾಗಮುತ್ತುವಿನ ಅಪ್ಪ ರಾಮಸ್ವಾಮಿ ಹೇಳಿದ್ದು ಹೀಗೆ. ಈಗ ಹತ್ತು ವರ್ಷವಾಗಿರುವ ನಾಗಮುತ್ತು ಇತ್ತ ಶಾಲೆಯಲ್ಲೂ ಇಲ್ಲ, ಅತ್ತ ಕೆಲಸದಲ್ಲೂ ಇಲ್ಲ. ಹನ್ನೆರಡು ವರ್ಷದ ಸತ್ಯವಾಣಿಯ ತಾಯಿ ಕಮಲಮ್ಮ ಹೇಳುವುದು, "ನನಗೆ ಹಣಬೇಕು. ಹೀಗಾಗಿ ಅವಳು ಕೆಲಸ ಮಾಡಲೇ ಬೇಕು.

ಹೊಟ್ಟೆಗಾಗಿ ನಮಗೆ ಹಣಬೇಕು. ಅವಳು ಶಾಲೆಗೆ ಹೋದರೆ, ನಾವು ಹೇಗೆ ಬದುಕುವುದು?"

ಪೋಷಕರ ಉದ್ಯೋಗ ಅಥವಾ ಆದಾಯಕ್ಕಿಂತಾ, ಅವರ ಅಭಿರುಚಿ ಹಾಗೂ ತಿಳಿವಳಿಕೆ ಮಕ್ಕಳ ಶೈಕ್ಷಣಿಕ ಅವಕಾಶಗಳ ಮೇಲೆ ಪ್ರಭಾವ ಬೀರುವುದು. ಯಾವ ಪೋಷಕರು ಶಿಕ್ಷಣ ಬಹಳ ಮುಖ್ಯವಾದುದು ಎಂದು ಪರಿಗಣಿಸುವರೋ, ಅವರು ಶಿಕ್ಷಣಕ್ಕಿರುವ ಬೆಲೆಯನ್ನೆಂದೂ ಕಡೆಗಣಿಸಿಲ್ಲ, ಮತ್ತು ಅವರ ಮಕ್ಕಳು ಶಾಲೆಯಲ್ಲಿ ಮುಂದುವರಿಯಲು ನೋಡಿಕೊಳ್ಳುವರು. ಶಿಕ್ಷಣ ಎಂಬುದು ಈಗಿನ ಬದುಕಿನಿಂದ ಬಿಡುಗಡೆಗೆ ದಾರಿ ಹಾಗೂ ತಮ್ಮ ಮಕ್ಕಳ ಬದುಕು ಹಸನಾಗಲು ಶಿಕ್ಷಣವೇ ಮೂಲ ಎಂದೂ ಈ ಪೋಷಕರು ನಿರ್ಧರಿಸಿರುವರು.

## ಅಕ್ಷರಸ್ಥ ಪೋಷಕರು, ಅನಕ್ಷರಸ್ಥ ಮಕ್ಕಳು

ನಗರಗಳ ಕೊಳೆಗೇರಿಗಳಿಗೆ ವಲಸೆ ಬರುವುದು ಎಂಬುದು ಎಂತಹ ಅಡ್ಡ ಪರಿಣಾಮ ಬೀರಬಹುದು ಎಂಬುದಕ್ಕೆ, ಹೊಸದಾಗಿ ವಲಸೆ ಬಂದ ಕುಶಲಕರ್ಮಿಗಳು ಹಾಗೂ ಸೇವಾ ವರ್ಗದವರು (ಕುಂಬಾರರು, ನೇಕಾರರು ಹಾಗೂ ಕಮ್ಮಾರರು) ಉದಾಹರಣೆಯಾಗಬಲ್ಲರು. ಇವರಲ್ಲಿ ಬಹುತೇಕರು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಉದ್ಯೋಗ, ಬದುಕು ಕಳೆದುಕೊಂಡು ನಗರದ ಅನೌಪಚಾರಿಕ ಆರ್ಥಿಕ ಪರಿಸ್ಥಿತಿಯಲ್ಲಿ ಹಾಗೂ ಅರೆಕಾಲಿಕ ಕೂಲಿಗಳಾಗಿ ಸೇರಿದ್ದಾರೆ. ಈ ಅನೇಕ ಯುವಕರು ಶಿಕ್ಷಿತರು, ಅಷ್ಟೇ ಅಲ್ಲ ಪ್ರೌಢಶಾಲೆಯವರೆಗೂ ಓದಿದ್ದರೂ ಈಗ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ, ಚಿಕ್ಕ ಮಕ್ಕಳು ಅಶಿಕ್ಷಿತರಾಗಿರುವ ಕುಟುಂಬಗಳು ಇಲ್ಲಿವೆ. ಭಾಷಾ ಸಮಸ್ಯೆ, ಶಾಲೆಗಳ ಬಗ್ಗೆ ಮಾಹಿತಿ ಇಲ್ಲದಿರುವುದು, ಶಿಕ್ಷಣದ ಬಗ್ಗೆ ತಿರಸ್ಕಾರ, ಶಾಲೆಯ ಬಗ್ಗೆ ಮಕ್ಕಳಿಗಿರುವ ಅನಾಸಕ್ತಿಯೇ ಮೊದಲಾದವುಗಳು ಇದಕ್ಕೆ ಕಾರಣ. ಹತ್ತು ವರ್ಷದ ಸುಂದರಿಗೆ ಶಾಲೆಗೆ ಹೋಗಲಿಷ್ಟ. ಆದರೆ, ಭಾಷಾತೊಡಕು. ಅಷ್ಟೇ ಅಲ್ಲ ಅವಳ ಪೋಷಕರ ಆರ್ಥಿಕ ಅಸ್ಥಿರತೆಯೂ ಅವಳು ಶಾಲೆಗೆ ಹೋಗದಿರಲು ಕಾರಣವಾಗಿದೆ. ಐದನೇ ತರಗತಿಯವರೆಗೆ ಓದಿರುವ ಅವರ ತಂದೆ ತಮಿಳಿನಲ್ಲಿ ಹೇಳುತ್ತಾರೆ, "ಅವಳಿಗೆ ಕನ್ನಡ ಅರ್ಥವಾಗಲ್ಲ. ಹೀಗಾಗಿ ಅವಳಿಗೆ ಕಲಿಸುವವರಾರು. ಶಾಲೆಯಲ್ಲಿ ಟೀಚರ್ ಹೇಳಿಕೊಡುವುದು ಅವಳಿಗರ್ಥವಾಗಲು ತೀರಾಕಷ್ಟ. ಅವಳು ಮನೆಯಲ್ಲಿದ್ದರೆ ಮಿಕ್ಕ ಮಕ್ಕಳನ್ನು ನೋಡಿಕೊಳ್ಳಬಹುದು. ನಾನು ತರಕಾರಿ ಮಾರುತ್ತೇನೆ. ನಾನು

ಸಂಪಾದಿಸುವುದು ಒಂದು ದಿನಕ್ಕೆ ಸಾಕು. ಅವಳನ್ನು ಶಾಲೆಗೆ ಕಳಿಸಲು ನನ್ನಿಂದಾಗದು!"

ಕೆಲವು ಪ್ರಕರಣಗಳಲ್ಲಿ, ಶಾಲೆಗೆ ಹೋಗುವ ಬದಲು, ಏನಾದರೂ ಕೆಲಸ ಮಾಡಿ ಕುಟುಂಬದ ಆದಾಯಕ್ಕೆ ನೆರವಾಗುವ ಮನಸ್ಸನ್ನು ಕೆಲವು ಮಕ್ಕಳು ತೋರಿದ್ದಾರೆ. "ಶಾಲೆಗೆ ಹೋಗಲು ನನಗೆ ಮನಸ್ಸಿಲ್ಲ. ಯಾಕೆಂದರೆ ನಾನು ಮನೆಕೆಲಸ ಮಾಡಬೇಕು. ಗೆಳೆಯರೊಂದಿಗೆ ಬಯಲಿನಲ್ಲಿ ಆಡುವುದು ನನಗಿಷ್ಟ. ಮನೆಹತ್ತಿರ ಎಲ್ಲಾ ಸೇರಿ ಗೋಲಿ ಆಡ್ತೀವಿ. ಕೆಲವು ಸರ್ತಿ ಅಪ್ಪನ ಜೊತೆ ತರಕಾರಿ ಮಾರಲು ಹೋಗ್ತೀನಿ. ಆದರೆ ಗಾಡಿ ತಳ್ಳಿಕೊಂಡು ತುಂಬಾ ನಡೆಯಬೇಕು. ಅದಕ್ಕೆ ಅದು ನನಗಿಷ್ಟವಿಲ್ಲ" ಎನ್ನುತ್ತಾನೆ ಹನ್ನೆರಡು ವರ್ಷದ ಮಣಿಕಂಠನ್. ನೀನು ದೊಡ್ಡವನಾದ ಮೇಲೆ ಏನಾಗ್ತೀಯ ಎಂದು ಕೇಳಿದರೆ, ಅವನು ಹೇಳುವುದು, "ನಾನು ಕಟ್ಟಡ ಕೆಲಸ ಮಾಡ್ತೀನಿ. ಅಲ್ಲಿ ಕೂಲಿ ಚೆನ್ನಾಗಿ ಕೊಡ್ತಾರೆ. ಚೆನ್ನಾಗಿ ಸಂಪಾದನೆ ಮಾಡಬಹುದು". ತರಕಾರಿ ಮಾರುತ್ತಿದ್ದ ಇವನ ತಂದೆ ಅಯ್ಯನಾರ್ ಈಗ ಕಟ್ಟಡ ನಿರ್ಮಾಣ ಕೂಲಿ ಆಗಿದ್ದಾರೆ. ಅವನು ಮತ್ತವನ ಹೆಂಡತಿ ಇಬ್ಬರೂ ಎರಡನೇ ತರಗತಿ ಓದಿರುವವರು. ಅವರ ದೂರು ಹೀಗಿದೆ, "ನಾನಿವನನ್ನ ಶಾಲೆಗೆ ಕಳುಹಿಸಲು ತುಂಬಾ ಪ್ರಯತ್ನ ಪಟ್ಟೆ. ಆದರಿವನು ಹೋಗುವುದಿಲ್ಲ. ಇನ್ನವನಿಗೆ ನಾನು ಒತ್ತಾಯ ಮಾಡಕ್ಕಾಗಲ್ಲ. ಅವನೇನೂ ಕೆಲಸ ಮಾಡಲ್ಲ. ಅವನ್ನ ಟೈಲರ್ ಹತ್ರ ಕಳಿಸಿದ್ದೆ, ಅಂಗಡಿಗೆ ಹಾಕಿದ್ದೆ, ಮನೆ ಕಟ್ಟೋದಕ್ಕೆ, ಆಮೇಲೆ ಗ್ಯಾರೇಜ್ಗೂ ಕಳಿಸಿದ್ದೆ. ಇವನೆಲ್ಲೂ ನಿಲ್ಲಲ್ಲ. ಯಾವುದೇ ಕೆಲಸ ಮಾಡಲ್ಲ. ನಾನವನನ್ನ ಬಿಟ್‌ಬಿಟ್ಟಿದ್ದೀನಿ".

ಇದರ ಜೊತೆ, ಕೆಲಸ ಕೊಡಿಸದ ಅಥವಾ ಅವರ ಬದುಕನ್ನು ಬದಲಾಯಿಸದ ಈ ಶಿಕ್ಷಣದಿಂದ ಏನೂ ಪ್ರಯೋಜನ ಇಲ್ಲ ಎಂಬ ಭ್ರಮನಿರಸನದ ಮಾತನಾಡುವ ಕೆಲವು ಪೋಷಕರು ಶಿಕ್ಷಣ ಮುಂದುವರಿಸಿ ಏನೂ ಪ್ರಯೋಜನವಿಲ್ಲವೆನ್ನುವರು. "ನಾನೆರಡನೇ ತರಗತಿಯ ತನಕ ಓದಿದ್ದೇನೆ, ನನಗೆ ಒಂದು ಪ್ಯೂನ್ ಕೆಲಸವೂ ಸಿಕ್ಕಿಲ್ಲ. ನಾನೀಗ ತರಕಾರಿ ಮಾರಬೇಕು ಇಲ್ಲವೇ ಮನೆಕಟ್ಟೋ ಕೆಲಸಕ್ಕೆ ಹೋಗಬೇಕು. ನಾನು ತಮಿಳುನಾಡು ಬಿಟ್ಟು ಬಂದದ್ದು ಒಂದು "ಆಫೀಸು" ಕೆಲಸ ಸಿಗುತ್ತೇನೋ ಅಂತ. ಎಲ್ಲ ಕಡೆ ಆಚೆ ಹೋಗು ಎಂದರು. ಹೀಗಾಗಿ ನನ್ನ ಮಗ ಓದಿ ಸಮಯ ಹಾಳು ಮಾಡೋದು ನನಗಿಷ್ಟವಿಲ್ಲ. ಅವನು ಕೆಲಸ ಮಾಡಿ ಕಲಿತು ಸಾಕಷ್ಟು ಸಂಪಾದಿಸಲಿ", ಏಳುಮಲೈನ ತಂದೆ ಮಣಿ ಹೇಳುವುದು ಹೀಗೆ.

## ದುಡಿಮೆಯಲ್ಲಿ ಮಕ್ಕಳು

ವಾಹನ ನಗರದಲ್ಲಿರುವ ಮಕ್ಕಳು ಅನೇಕ ಕೆಲಸಗಳನ್ನು ಮಾಡುತ್ತಾರೆ. ಸಂಪಾದನೆಗಾಗಿ ದುಡಿಯುತ್ತಿರುವ 190 ಮಕ್ಕಳಲ್ಲಿ ಶೇ. 41 ಮಕ್ಕಳು ಗ್ಯಾರೇಜ್‌ಗಳಲ್ಲಿ ಸಹಾಯಕರಾಗಿ, ಕೂಲಿಗಳಾಗಿ ಮತ್ತು ಕಟ್ಟಡ ನಿರ್ಮಾಣದಲ್ಲಿ ಇದ್ದರೆ, ಶೇ.11 ಮಕ್ಕಳು ಅಂಗಡಿ ಮುಂಗಟ್ಟು ನೋಡಿಕೊಳ್ಳುವುದು ಮತ್ತು ಅಗರಬತ್ತಿ ಮಾಡುವುದರಲ್ಲಿದ್ದಾರೆ. ಗೃಹೋದ್ಯಮ ಹಾಗೂ ಔಪಚಾರಿಕ ಉದ್ದಿಮೆ, ಕೆಲಸಗಳಲ್ಲಿ ಹುಡುಗರ ಶೇಕಡಾವಾರು ಹೆಚ್ಚಿದೆ. ಶೇ. 21 ಮಕ್ಕಳು - ಎಲ್ಲರೂ ಹುಡುಗಿಯರು ಮನೆಗಳಲ್ಲಿ ಸೇವಕಿಯರಾಗಿದ್ದಾರೆ. ಶೇ. 27 ಮಕ್ಕಳು - ಎಲ್ಲರೂ ಹುಡುಗರು, ಕಛೇರಿ, ಅಂಗಡಿ ಹಾಗೂ ಹೋಟೆಲ್‌ಗಳಲ್ಲಿದ್ದಾರೆ.[34]

ಶೇ. 24 ಕುಟುಂಬಗಳು ಮಕ್ಕಳ ಸಂಪಾದನೆಯಿಂದ ದಿನ ನಿತ್ಯದ ಆಹಾರ ಕೊಂಡರೆ, ಶೇ.8 ಭಾಗ ಸಾಲ ತೀರಿಸಲು ಬಳಸಿರುವುದಾಗಿ ಹೇಳಿದ್ದಾರೆ. ನಾವು ಸಂದರ್ಶಿಸಿದ ಶಾಲೆಯ ಹೊರಗಿರುವ ಮಕ್ಕಳಲ್ಲಿ ಶೇ.76 ಮಕ್ಕಳು ತಾವು ತಮ್ಮ ಸೋದರ ಸೋದರಿಯರಿಗೆ ಸಹಾಯ ಮಾಡುವುದಿಲ್ಲ ಎಂದು ಹೇಳಿದರೆ, ಶೇ.8 ಮಕ್ಕಳು, ತಮ್ಮ ಒಡಹುಟ್ಟಿದವರು ಶಾಲೆಗೆ ಹೋಗಲು ತಾವು ನೆರವಾಗುತ್ತಿದ್ದೇವೆ ಎಂದಿದ್ದಾರೆ. ಬಹುತೇಕ ಮಕ್ಕಳು ಇದನ್ನು ನೇರವಾಗಿ ಹೇಳದಿದ್ದರೂ, ಅನೇಕ ದೊಡ್ಡ ಮಕ್ಕಳು ತಮ್ಮ ಕಿರಿಯ ಸೋದರ ಸೋದರಿಯರಿಗೆ ಪೋಷಕರಂತೆ ವರ್ತಿಸುವರು. ಅವರು ಶಾಲೆಗೆ ಹೋಗಿ ಕಲಿಯಲೋಸುಗ ತಮ್ಮ ಶಿಕ್ಷಣವನ್ನು ತ್ಯಾಗ ಮಾಡಿ, ಹೊರಗೆ ದುಡಿದು ಸಂಪಾದಿಸುತ್ತಿದ್ದಾರೆ. ಹೀಗೆ ದುಡಿಯುವ ಅನೇಕರ ದೊಡ್ಡ ಮಕ್ಕಳು ಹೇಳಿದ್ದು ಈ ಮಕ್ಕಳು ಶಾಲೆಗೆ ಹೋದರೆ "ಈಗಿನದಕ್ಕಿಂತಾ ಉತ್ತಮ ಜೀವನ" ಅವರಿಗಾದರೂ ಲಭಿಸಲಿ ಎಂದು.

ಈ ಪ್ರದೇಶ ಕುರಿತು ನಮ್ಮಲ್ಲಿ ಲಭ್ಯವಿರುವ ಮಾಹಿತಿಯಂತೆ ನಗರಗಳ ಬಡಕುಟುಂಗಳ ಬಾಲಕ ಬಾಲಕಿಯರು ಅತ್ಯಧಿಕ ಸಂಖ್ಯೆಯಲ್ಲಿ ಶಾಲೆ ಬಿಡುತ್ತಾರೆ ಎಂದು. ನಗರಗಳ ಅನೌಪಚಾರಿಕ ಮೂರನೇ ರಂಗದ ಆರ್ಥಿಕ ಪರಿಸ್ಥಿತಿಯಲ್ಲಿ ಮಕ್ಕಳು ಸೇರಿಹೋಗುವ ವಾಸ್ತವಕ್ಕೆ ಇದನ್ನು ಸಂಬಂಧಿಸಬಹುದು. ತಮ್ಮ ಕುಟುಂಬಗಳು ಕಷ್ಟದಲ್ಲಿದ್ದಾಗ ಕೆಲವು ಮಕ್ಕಳು ತಾವೆ ಶಾಲೆ ಬಿಡುತ್ತಾರೆ. ಅಂತಹ ಮಕ್ಕಳು ಬದಲಾದ ಪರಿಸ್ಥಿತಿಯಲ್ಲಿ ತಾವೇ ಕುಟುಂಬಕ್ಕಾಗಿ ಸಂಪಾದಿಸುವ

[34] ಉಳಿದ ಶೇ.21 ಮಕ್ಕಳು ಯಾವಾಗಲಾದರೊಮ್ಮೆ ಪಾತ್ರೆ-ಬಟ್ಟೆಲು ತೊಳೆಯುವುದು, ಮೂಟೆ ಎತ್ತಿಳಿಸುವುದು ಮೊದಲಾದುವುಗಳಲ್ಲಿ ತಮ್ಮ ಪೋಷಕರಿಗೆ ಸಹಾಯ ಮಾಡಿ ಅಲ್ಪ ಸ್ವಲ್ಪ ಹಣ ಸಂಪಾದಿಸಿರುವುದುದಾಗಿ ಹೇಳಿದ್ದಾರೆ.

ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. ಕುಟುಂಬವನ್ನು ತೊರೆದು ಹೋದ ಅಥವಾ ಏನಾದರೂ ಅವಘಡವಾಗಿ ಏನೂ ಸಂಪಾದನೆ ಮಾಡಲಾಗದ ಸ್ಥಿತಿಗೆ ತಂದೆಯರು ಬಿದ್ದಿರುವ ಅನೇಕ ಕುಟುಂಬಗಳಿವೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಒಬ್ಬ ಅಧ್ಯಾಪಕರು ಹೇಳಿದಂತೆ, ದುಡಿಮೆ ಮತ್ತು ಸಂಪಾದನೆಗೆ ನೀಡುವ ಪ್ರಾಮುಖ್ಯತೆಯಿಂದಾಗಿ ಮಕ್ಕಳು ಅತ್ಯಧಿಕ ಸಂಖ್ಯೆಯಲ್ಲಿ ಶಾಲೆ ಬಿಡುತ್ತಿದ್ದಾರೆ. "ಹುಡುಗರಿಗೆ, ಸಂಪಾದನೆ ಒಂದು ಪ್ರತಿಷ್ಠೆಯ ವಿಚಾರ. ಅವರು ಮೆಕಾನಿಕ್ ಆಗಲಿ, ಮನೆ ಕೆಲಸದವರಾಗಲಿ, ತಮ್ಮ ಜೀವನಕ್ಕಾಗಿ ತಾವು ದುಡಿಯಲು ಸಾಕಷ್ಟು ದೊಡ್ಡವರಾಗಿದ್ದೇವೆಂದು ಅವರು ಭಾವಿಸುತ್ತಾರೆ. ಓದುವ ಅವಶ್ಯಕತೆ ತಮಗಿಲ್ಲವೆಂದೇ ಅವರೇ ಭಾವಿಸುತ್ತಾರೆ".

ಹೀಗಿದ್ದರೂ, ಬಹುತೇಕ ಮಕ್ಕಳು ಪ್ರತಿ ದಿನ ದುಡಿಯುವುದಿಲ್ಲ. ಆಗಾಗ, ಕೆಲವು ಮಕ್ಕಳು ಅದರಲ್ಲೂ ಬಾಲಕರು ತಾತ್ಕಾಲಿಕ ಕೆಲಸ ಹಿಡಿದು ದಿನಕ್ಕೆ ರೂ.50-100 ಸಂಪಾದಿಸುವರು. ಅರೆಕಾಲಿಕ ಮತ್ತು ತಾತ್ಕಾಲಿಕ ಕಟ್ಟಡ ನಿರ್ಮಾಣ ಕೆಲಸದಲ್ಲಿ ದಿನಕ್ಕೆ ರೂ.100 ಸಿಗುವುದರಿಂದ ಅದು ಅತ್ಯಂತ ಲಾಭದಾಯಕವೆಂದೇ ಇವರು ಭಾವಿಸುವರು, ಆದರೆ, ಕಟ್ಟಡನಿರ್ವಾಣ ಕೆಲಸ ಬಹಳ ತ್ರಾಸದಾಯಕವಾದುದೆಂದು ಮಕ್ಕಳು ಅಭಿಪ್ರಾಯ ಪಟ್ಟಿದ್ದಾರೆ. 12 ವರ್ಷದ ಬಾಬು ಹೇಳುತ್ತಾನೆ, "ಸಿಮೆಂಟ್‌ನಿಂದಾಗಿ ನಮ್ಮ ಅಂಗಾಲು, ಕೈ ಸುಟ್ಟುಹೋಗುತ್ತದೆ. ಸಿಮೆಂಟ್ ಕಲಿಸುವುದರಿಂದಾಗಿ ಕೈಯಲ್ಲಿ ಸೀಳುಗಾಯಗಳಾಗಿ ಊಟ ಮಾಡಲೂ ಆಗದು. ರಾತ್ರಿ ನೋವಿಗೆ ನಿದ್ದೆಯೂ ಬಾರದು. ಕಟ್ಟಡದ ಮೇಲೆ-ಕೆಳಗೆ ಸದಾ ಭಾರ ಹೊತ್ತೊಯ್ಯುವುದರಿಂದ ಇಡೀ ಮೈ ನೋವು ಬರುತ್ತೆ."

**ಮನೆಗೆಲಸದಲ್ಲಿ ಬಾಲ ಕಾರ್ಮಿಕರು**

ಬೆಳಿಗ್ಗೆ 6.30ಕ್ಕೆ ಕೆಲಸಕ್ಕಾಗಿ ಮನೆ ಬಿಡುವ ರಷ್ಮಿ ಹಿಂದೆ ಬರುವುದು ರಾತ್ರಿ 10ಕ್ಕೆ. ಮನೆಗೆಲಸದ ಜೊತೆ, ಮನೆಯ ಮಗುವನ್ನು ನೋಡಿಕೊಳ್ಳುವ ಕೆಲಸಕ್ಕೆ ಅವಳನ್ನು ನೇಮಿಸಿಕೊಳ್ಳಲಾಗಿದೆ. ರಷ್ಮಿ ಇಡೀ ಏಳು ದಿನ ಕೆಲಸ ಮಾಡುತ್ತಾಳೆ - ಮನೆ ಗುಡಿಸಿ ಒರೆಸುವುದು, ಪಾತ್ರೆ ಬಟ್ಟೆ ತೊಳೆಯುವುದು, ಹಣ್ಣು ತರಕಾರಿ, ದಿನಸಿ ಅಥವಾ ಇನ್ನೇನಾದರೂ ತರಲು ಮಾರುಕಟ್ಟೆಗೆ ಹೋಗಿ ಬರುತ್ತಾಳೆ. ಮಾಲೀಕರ ಹತ್ತು ವರ್ಷದ ಮಗುವನ್ನು ನೋಡಿಕೊಳ್ಳುವುದೂ ಸಹ ಇವಳೇ. ರಷ್ಮಿಗೀಗ 12 ವರ್ಷವಷ್ಟೆ.

ತಮಿಳುನಾಡಿನಲ್ಲಿ ಭೂಮಿಕೊಳ್ಳಲು ರಷ್ಮಿ ಕೆಲಸ ಮಾಡುವ ಮನೆಮಾಲೀಕರಿಂದ ಅವಳಮ್ಮ ರೂ.6,000 ಸಾಲ ಪಡೆದಿದ್ದಾಳೆ. ಇದಕ್ಕೆ ಬದಲಾಗಿ, ಸಾಲ ತೀರುವವರೆಗೆ ರಷ್ಮಿ ಯಾವುದೇ ಸಂಬಳವಿಲ್ಲದೆ ದುಡಿಯಬೇಕು, ರಷ್ಮಿಯ ಅಮ್ಮ ಹೇಳುವಂತೆ ಕಳೆದ 3-4 ವರ್ಷದಲ್ಲಿ ಸಾಲದ ಮೊತ್ತ ಒಂದು ಸ್ವಲ್ಪವೂ ಕಡಿಮೆಯಾಗಿಲ್ಲ.

ತನ್ನ ಮಾಲೀಕರು ತನ್ನನ್ನು ಹೊಡೆಯುತ್ತಾರೆ ಎಂದು ಹೇಳುವ ರಷ್ಮಿ ಭಾನುವಾರವೂ ಕೂಡ ರಜೆ ಇಲ್ಲ ಎನ್ನುತ್ತಾಳೆ. ಮೊದಮೊದಲು ಅವಳು ಇತರ ಹುಡುಗಿಯರ ಜೊತೆ ರಾತ್ರಿ ಶಾಲೆಗೆ ಹೋಗುತ್ತಿದ್ದಳು. ಆದರೀಗ ಬದಲಾದ ಕೆಲಸದ ಸಮಯದಿಂದಾಗಿ ಅಲ್ಲಿಗೂ ಅವಳಿಗೆ ಹೋಗಲಾಗುತ್ತಿಲ್ಲ. ಓದಿ ತಾನು ಟೈಲರ್ ಆಗಬೇಕೆಂದು ಅವಳ ಬಯಕೆ. ಆದರೆ ಅಮ್ಮ ಮಾಡಿರುವ ಸಾಲ ತೀರಿಸಲು ಅವಳು ಮನೆಗೆಲಸದವಳಾಗಿ ದುಡಿಯಲೇ ಬೇಕಿದೆ.

## ಎಲ್ಲಿಯೂ ಇಲ್ಲದ ಮಕ್ಕಳು

ವಾಸ್ತವವಾಗಿ ಎಷ್ಟೋ ಮಕ್ಕಳು ಮನೆಗೆಲಸ ಅಥವಾ ಔಪಚಾರಿಕ ಉದ್ಯೋಗದಲ್ಲಿದ್ದರೂ, ಸಾಕಷ್ಟು ಸಂಖ್ಯೆಯಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳು ಕೆಲಸದಲ್ಲಿ ಇಲ್ಲ. ಇವರನ್ನು "ಎಲ್ಲಿಯೂ ಇಲ್ಲದ" ಮಕ್ಕಳೆನ್ನಬಹುದು. ಅಂದರೆ ಶಾಲೆಯಲ್ಲಾಗಲೀ ದುಡಿಮೆಯಲ್ಲಾಗಲೀ ಇಲ್ಲದ ಮಕ್ಕಳು ಎಂದು.[35] NIAS

[35] ಡಿ.ಪಿ.ಚೌದರಿ, A dynamic profile of child labour, ILO, ನವ ದೆಹಲಿ)

ನಡೆಸಿದ ಸರ್ವೇಕ್ಷಣೆಯುಲ್ಲಿ ಶೇ.21 "ಎಲ್ಲಿಯುೂ ಇಲ್ಲದ" ಮಕ್ಕಳು ಕಂಡುಬಂದಿದ್ದಾರೆ. ಅದರಂತೆಯೇ ಮಲ್ಲೇಶ್ವರಂ ಬಡಾವಣೆಯಲ್ಲಿ ಪರಸ್ಪರ ಎಂಬ ಸ್ವಯಂ ಸೇವಾ ಸಂಸ್ಥೆ 9,737 ಮಕ್ಕಳೊಡನೆ ನಡೆಸಿದ ಸಂದರ್ಶನದಲ್ಲಿ ಶಾಲೆಗೂ ಹೋಗದ ಅಥವಾ ದುಡಿಮೆಗೂ ಹೋಗದ ಶೇ. 36 ಮಕ್ಕಳು ಕಂಡುಬಂದಿದ್ದಾರೆ. "ಎಲ್ಲಿಯೂ ಇಲ್ಲದ" ಇಷ್ಟು ದೊಡ್ಡ ಸಂಖ್ಯೆಯ ಮಕ್ಕಳು ಇರುವುದೇ ಮಕ್ಕಳು ಶಾಲೆಯಿಂದ ಹೊರಗಿರುವುದಕ್ಕೆ ಬಡತನವೇ ಕಾರಣವಲ್ಲ, ಬದಲಿಗೆ ಸರಿಯಾಗಿ ಕಾರ್ಯ ನಿರ್ವಹಿಸದ ಶಾಲೆಗಳು ಎಂಬುದನ್ನು ತೋರಿಸುವುದು. ಪ್ರಾಥಮಿಕ ಶಾಲಾ ಮಟ್ಟದಲ್ಲೇ ಹೊರಬಿದ್ದ 8 ರಿಂದ 12 ವರ್ಷಗೊಳಗಿನ ಮಕ್ಕಳ ಹಲವಾರು ಗುಂಪುಗಳು ಅಥವಾ ಗ್ಯಾಂಗುಗಳು ಇದ್ದು ತಮ್ಮ ಸಮಯುವನ್ನೆಲ್ಲಾ ಏನೋ ಆಡುವುದರಲ್ಲಿ, ಇತರ ಮಕ್ಕಳಿಗೆ ತೊಂದರೆ ಕೊಡುವುದರಲ್ಲಿ ಅಥವಾ ಯಾವಾಗಲಾದರೊಮ್ಮೆ ಮನೆಗೆಲಸ ಮಾಡುವುದರಲ್ಲೇ ಕಳೆಯುತ್ತಾರೆ. ಆಗೀಗ ಇದೇ ಮಕ್ಕಳು ಕಟ್ಟಡ ನಿರ್ಮಾಣ ಕೆಲಸದಲ್ಲಿ ಅಥವಾ ಸುಮಾರು ದಿನಕ್ಕೆ ರೂ. 50 ರಷ್ಟು ಕೂಲಿ ದೊರಕಬಹುದಾದ ಯಾವುದಾದರೂ ಕೆಲಸ ಮಾಡುತ್ತಾರೆ. ಬಹುತೇಕ ಈ ಮಕ್ಕಳಿಗೆ ಮಾಡಲೇನೂ ಇಲ್ಲದ ಕಾರಣ ಆ ಪ್ರದೇಶದಲ್ಲಿ ಸುಮ್ಮನೆ ಅಲೆದಾಡುವುದರಿಂದ, ಅನೇಕ ಹುಡುಗರು ಅವರ ಕುಟುಂಬದವರಿಗೆ ಮತ್ತಿತರ ನಿವಾಸಿಗಳಿಗೆ ದೊಡ್ಡ ತಲೆನೋವಾಗಿದ್ದಾರೆ.

ಈ ಎಲ್ಲವನ್ನೂ ನೋಡಿದರೆ, ಕೆಲಸ ಮಾಡದ ಶಾಲೆ ವ್ಯವಸ್ಥೆ, ಪೋಷಕರ ನಿರಾಶೆ ಮತ್ತು ಸಾಮಾಜಿಕ ಎಡರುತೊಡರುಗಳ ನಡುವೆ ಮಕ್ಕಳು ಹೇಗೆ ಸಿಕ್ಕಿಬಿದ್ದಿದ್ದಾರೆ ಎಂಬುದು ತಿಳಿಯುವುದು.

## ನಗರದಲ್ಲಿ ಬಡತನ ಮತ್ತು ಶಿಕ್ಷಣ ವಂಚನೆ

ನಗರಗಳ ಬಡ ಪ್ರದೇಶಗಳಲ್ಲಿ ಶಿಕ್ಷಣ ವಂಚನೆ ಹೇಗಿದೆ ಮತ್ತು ಬಹುಸಂಖ್ಯಾತ ಮಕ್ಕಳ ಬದುಕಿನ ಮೇಲೆ ಅದರಿಂವಾಗುತ್ತಿರುವ ಅಡ್ಡ-ಪರಿಣಾಮಗಳೇನು ಮತ್ತು ಎಷ್ಟರ ಮಟ್ಟನದು ಎಂಬುದನ್ನು ಶೀಘ್ರವಾಗಿ ಗಮನಿಸುವ ಅವಶ್ಯಕತೆಯಿದೆ. ಬಹು ಸಾಮಾನ್ಯವಾದ ಹಾಗೂ ವಿಶಾಲವಾದ ಮಟ್ಟದಲ್ಲಿ ನಡೆಯುವ ಮಾಹಿತಿ ಸಂಗ್ರಹ, ನಿರ್ದಿಷ್ಟ ಪ್ರದೇಶಗಳನ್ನು ಕುರಿತು ನಡೆಯಬಹುದಾದ ವಿವರವಾದ ಅಧ್ಯಯನ ಮತ್ತು ಸರ್ವೇಕ್ಷಣೆಗಳು ನಗರಗಳ ಬಡ ಪ್ರದೇಶಗಳಲ್ಲಿ ಮಕ್ಕಳ ಶಿಕ್ಷಣ ವಂಚನೆ ಎಷ್ಟು ತೀವ್ರವಾಗಿ ಹೇಗೆ ಆಗುತ್ತಿದೆ ಎಂದು ತೋರಿಸುತ್ತವೆ. ಕೆಲಸ ನಿರ್ವಹಿಸದ ಶಾಲೆಗಳ ಜೊತೆ ಸದಾ ಬಾಧಿಸುವ ಕುಟುಂಬದ ಬಡತನವೂ

ಸೇರಿ ಮಕ್ಕಳು ಶಾಲಾ ವ್ಯವಸ್ಥೆಯಿಂದ ಹೊರಗಿರುವಂತಾಗಿದೆ. ಮನೆಯ ಬಡತನ ಜೊತೆಗೆ ಒತ್ತಡ, ಇದರ ಮೇಲೆ ಕಾರ್ಯ ನಿರ್ವಹಿಸದ ಶಾಲೆಗಳು, ಸಂವೇದನೆಯೇ ಇಲ್ಲದ ಶಿಕ್ಷಕ ವೃಂದ ಮತ್ತು ಶಾಲೆಯಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲು ಬಾರದ ಸರಕಾರದ ಸೌಲಭ್ಯಗಳು ಮೊದಲಾದುವೆಲ್ಲಾ ಸೇರಿ ಮಕ್ಕಳನ್ನು ನಗರಗಳಲ್ಲಿ ಬೆಳೆಯುತ್ತಿರುವ ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಕೂಲಿಕಾರ್ಮಿಕರನ್ನಾಗಿಸಿದೆ. ಬಾಲಕಾರ್ಮಿಕ ಪದ್ಧತಿ ನಿಶೇಧ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರದಿರುವುದು ಕೈಗಾರಿಕೋದ್ಯಮಿಗಳಿಗೆ ಹಾಗೂ ಸೇವಾ ಘಟಕಕ್ಕೆ ಸಹಾಯ ಮಾಡಿದಂತೆಯೇ ಆಗಿ, ಅವರು ಶಿಕ್ಷಣ ವಂಚಿತ ಮಕ್ಕಳನ್ನು ಕಡಿಮೆಕೂಲಿಗೆ, ಎಷ್ಟೋ ಬಾರಿ ಏಕತಾನತೆಯ ಹಾಗೂ ಅಪಾಯಕಾರಿ ಉದ್ದಿಮೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದೆ. ಬಡತನದಲ್ಲಿರುವ ಮಕ್ಕಳಿಗೆ ಶಿಕ್ಷಣದ ವಂಚನೆ ಕೇವಲ ಒಂದು ರೀತಿಯ ಅವಕಾಶ ವಂಚನೆಯಾದರೆ, ಇದೇ ಅವರ ಇನ್ನಿತರ ಸಾಮಾಜಿಕ ತೊಂದರೆಗಳನ್ನು ಗಟ್ಟಿಗೊಳಿಸುವುದು ಮತ್ತು ಅವರು ನೆಲಕಚ್ಚಿದ ಆರ್ಥಿಕ ಸ್ಥಿತಿಯಲ್ಲೇ ಉಳಿಯುವಂತೆ ಮಾಡುತ್ತದೆ.

ಬಡ ಪ್ರದೇಶಗಳಲ್ಲಿರುವ ಶಾಲೆಗಳು ಹೇಗೆ ಕೆಲಸ ಮಾಡಬೇಕೆಂದರೆ, ಮಕ್ಕಳಿಗೆ ಕುಟುಂಬ ಮತ್ತು ಸಮುದಾಯದಲ್ಲಿರುವ ಎಲ್ಲ ದುರವಸ್ಥೆಗಳನ್ನು ಮೀರಿ ನಡೆಯುವಂತಿರಬೇಕು. ಶಿಕ್ಷಣ ವಂಚನೆ ಬೃಹತ್ತಾದ ಸಮಸ್ಯೆಯಾಗಲು ಅಸಮರ್ಪಕ ಆಹಾರ ಮತ್ತು ಪೋಷಕರ ಗಮನವಿಲ್ಲದಿರುವುದು, ಕಲಿಯಲು ಪ್ರೇರೇಪಿಸಿದ ವಾತಾವರಣ, ಮತ್ತು ವ್ಯಕ್ತಿಗತವಾಗಿ ಹಾಗೂ ಗುಂಪಾಗಿ ಮಕ್ಕಳು ಎದುರಿಸುತ್ತಿರುವ ವಂಚನೆ ತೊಂದರೆಗಳನ್ನು ಪರಿಹರಿಸಲು ಸೋಲುವ ಶಾಲೆಯೂ ಕಾರಣವಾಗಿದೆ. ಈ ಸಮಸ್ಯೆಗಳನ್ನು ಬಗೆಹರಿಸಲು ಸಾಮಾಜಿಕ ರಾಜಕೀಯ, ವ್ಯವಸ್ಥೆಯಾಗಲೀ ಅಥವಾ ಸರಕಾರವಾಗಲೀ ಪ್ರಯತ್ನಿಸದಿರುವುದರಿಂದ ಮಕ್ಕಳು ಶಿಕ್ಷಣ ವಂಚಿತರಾಗಲು ಆ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಸಮತೋಲನವುಂಟಾಗಲು ಕಾರಣವಾಗಿದೆ. ಶಾಲೆ ಇವುಗಳನ್ನು ಎದುರಿಸುವ ಪಾತ್ರ ವಹಿಸಬೇಕು ಮತ್ತು ಶಾಲಾ ಶಿಕ್ಷಕರು, ಸಮುದಾಯದ ನಾಯಕರು ಮತ್ತು ಪೋಷಕರೆಲ್ಲರೂ ಸೇರಿ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನು ಸೃಷ್ಟಿಸಬೇಕು. ಮಕ್ಕಳ ಸಾಮಾಜಿಕ, ಆರ್ಥಿಕ ಹಿನ್ನೆಲೆ ಯಾವುದೇ ಆದರೂ, ಅವರಿಗೆ ಶಿಕ್ಷಣ ದೊರಕಲೇಬೇಕೆನ್ನುವ ವಿಚಾರದ ತಳಹದಿಯಲ್ಲಿ ಇಂತಹ ದೃಷ್ಟಿಕೋನ ಬೆಳೆಯಬೇಕಿದೆ.

# ಸಲಹೆಗಳು

## I. ನಗರಗಳ ಬಡ ಪ್ರದೇಶಗಳ ಶಾಲೆಗಳಿಗೆ ಸಹಾಯ

ಸ್ಲಂನಂತಹ ಸಮುದಾಯಗಳಲ್ಲಿರುವ ಶಾಲೆಗಳನ್ನು ಅಲ್ಲಿನ ಕೇಂದ್ರ ಸಂಸ್ಥೆಗಳಂತೆ ಅಭಿವೃದ್ಧಿಪಡಿಸಲು ನಿರ್ದಿಷ್ಟ ಕಾರ್ಯಕ್ರಮಗಳನ್ನು ಸರ್ಕಾರವು ರಾಜ್ಯ ಮಟ್ಟದಲ್ಲಿ ತೆಗೆದುಕೊಂಡು ಜಾರಿಗೊಳಿಸುವ ತುರ್ತು ಇದೆ. ಈ ಹಿನ್ನೆಲೆಯಲ್ಲಿ, ಈ ಶಾಲೆಗಳ ಸೇವೆ ಸಲ್ಲುತ್ತಿರುವ ಪ್ರದೇಶಗಳು ಹಾಗೂ ಸಮುದಾಯಗಳ ಆವಶ್ಯಕತೆಗಳಿಗೆ ಸೂಕ್ತವಾಗುವಂತಹ ಕಾರ್ಯಕ್ರಮಗಳನ್ನು ಸರಕಾರವು ರೂಪಿಸಿ ಜಾರಿ ಮಾಡುವ ಅವಶ್ಯಕತೆಯಿದೆ. ಬಡತನದ ಬೇಗುದಿಯಲ್ಲಿ ಬಿದ್ದಿರುವ ಮಕ್ಕಳು, ಅದರಲ್ಲೂ ನಗರಗಳ ಬಡ ಪ್ರದೇಶಗಳಲ್ಲಿರುವ ಮಕ್ಕಳು ಎದುರಿಸುವ ಹಲವು ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸರಕಾರವು ನೀಡಬೇಕಾದ ಸೇವೆ ಸಹಕಾರಗಳು ಕೇವಲ ಶಾಲೆಯೆಂಬ ಕಟ್ಟಡವನ್ನು ನೀಡುವುದಕ್ಕಷ್ಟೆ ಸೀಮಿತವಾಗದೆ, ಇನ್ನೂ ಮುಂದಕ್ಕೆ ಹೋಗಬೇಕಿದೆ. ಆಗ, ಶಾಲೆಗಳು ಮಕ್ಕಳಿಗೆ ಕೇವಲ ಶಿಕ್ಷಣವನ್ನು ಮಾತ್ರ ನೀಡುವ ಕೇಂದ್ರಗಳಾಗದೆ, ಪೌಷ್ಟಿಕ ಆಹಾರ ಒದಗಿಸುವ, ಆರೋಗ್ಯ ಹಾಗೂ ಮಕ್ಕಳ ಮಾನಸಿಕ ಸ್ವಾಸ್ಥ್ಯಕ್ಕೆ ಒತ್ತಾಸೆಯಾಗುವ ಹಲವು ಪಾತ್ರಗಳನ್ನು ತೆಗೆದುಕೊಳ್ಳುತ್ತದೆ. ಶಾಲೆಗಳು ನಿಜವಾಗಿಯೂ ಸತತವಾಗಿ ನಡೆಯಲು ಹಾಗೂ ಶಿಕ್ಷಣ ಕಾರ್ಯಗಳು ನಿತ್ಯವೂ ನಡೆಯುವುದನ್ನು ನೋಡಿಕೊಳ್ಳಬೇಕಿದೆ. ಶಿಕ್ಷಣಕ್ಕೆ ಪೂರಕವಾಗುವಂತಹ ಹಲವಾರು ಚಟುವಟಿಕೆಗಳು, ಮಧ್ಯಾಹ್ನದ ಭೋಜನ, ಪಠ್ಯಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಸಮವಸ್ತ್ರ, ಆರೋಗ್ಯ ತಪಾಸಣೆ ಮತ್ತು ಒತ್ತಾಸೆಯೇ ಮೊದಲಾದವು ಸತತವಾಗಿ ಮಕ್ಕಳಿಗೆ ಲಭ್ಯವಿರಬೇಕೇ ಹೊರತು, ಆಗಾಗ ಬದಲಾಗುವ ಜನಪ್ರಿಯ ನೀತಿ ಅಥವಾ ಯೋಜನೆಗಳಾಗಬಾರದು.

## II. ವಿಕೇಂದ್ರೀಕೃತ ಶಾಲಾ ನಿರ್ವಹಣಾ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು

ಜನರಲ್ಲಿ ಶಾಲೆಯ ಬಗ್ಗೆ ಇದು ನಮ್ಮದು ಎಂಬ ಭಾವನೆ ಬೆಳೆಯಬೇಕೆಂದರೆ, ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯವು ಗುರುತರವಾದ ಮತ್ತು ಹೆಚ್ಚಿನ

ಜವಾಬ್ದಾರಿಯ ಪಾತ್ರವಹಿಸಬೇಕೆಂದರೆ, ಶಾಲಾ ಸಮಿತಿಗಳು, ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳ ಪಾತ್ರ ಹಾಗೂ ಇಂತಹ ವ್ಯವಸ್ಥೆಗಳ ಜವಾಬ್ದಾರಿಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು ಮತ್ತು ಬೆಳೆಸಬೇಕು. ಪೋಷಕರು ಮತ್ತು ಸಮುದಾಯದ ಸದಸ್ಯರಿಗೆ ಈ ಸಮಿತಿಗಳಲ್ಲಿ ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಲು ಸೂಕ್ತ ತರಬೇತಿಯಾಗಬೇಕು. ಇಂತಹ ತರಬೇತಿಗಳಲ್ಲಿ, ಸಭೆ ಕರೆಯುಲು ತಮಗಿರುವ ಹಕ್ಕನ್ನು ಕುರಿತು ಮಾಹಿತಿ ಹಂಚಿಕೆ, (ಮುಖ್ಯೋಪಾಧ್ಯಾಯರು ಸಭೆ ಕರೆಯಲಿ ಎಂದು ಕಾಯುವುದಲ್ಲ), ದಾಖಲೆಗಳನ್ನು ಪರಿಶೀಲಿಸುವುದು ಹೇಗೆ, ಶಿಕ್ಷಕರನ್ನು ತಮ್ಮ ಕೆಲಸಗಳಿಗೆ ಹೊಣೆಗಾರರನ್ನಾಗಿ-ಸುವುದೇ ಮೊದಲಾದುವು ಇರಬೇಕು. ಈ ಸಮಿತಿಗಳ ಸದಸ್ಯರ ಪಾತ್ರ ಕೇವಲ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವಗಳ ಶಾಲಾ ಕಾರ್ಯಕ್ರಮಗಳನ್ನು ಆಯೋಜಿಸುವುದು ಮಾತ್ರ ಎಂಬುದನ್ನು ತೊಲಗಿಸಬೇಕು. ಈ ಸಮಿತಿಯ ಸದಸ್ಯರಿಗೆ ಮಕ್ಕಳ ಹಕ್ಕಗಳು, ಸಮುದಾಯದ ಸಾಮಾಜಿಕ, ಆರ್ಥಿಕ, ಹಾಗೂ ಸಾಂಸ್ಕೃತಿಕ ಅಡಚಣೆಗಳ ವ್ಯವಸ್ಥೆ ಹಾಗೂ ಮೂಲೆ ಗುಂಪಾದವರ ಮಕ್ಕಳನ್ನು ಶಾಲೆಯ ಹೊರಗಿಡುವ ಸಮುದಾಯಗಳ ಬಗ್ಗೆ ಅರ್ಥಬದ್ಧವಾದ ತಿಳಿವಳಿಕೆ ಮೂಡಿಸಬೇಕು. ಇತರ ವಾರ್ಡ್‌ಗಳಲ್ಲಿ ಅಥವಾ ವಿಭಾಗಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟಲು ಬಳಸಿದ ಯಶಸ್ವೀ ವಿಧಾನಗಳು ಹಾಗೂ ಸಾಧ್ಯಾಸಾಧ್ಯತೆಗಳ ಬಗ್ಗೆ ಉದಾಹರಣೆಗಳು ಸಹ ಇಂತಹ ತರಬೇತಿಗಳಲ್ಲಿರಬೇಕು.

## III. ಬಾಲ ಕಾರ್ಮಿಕ ಪದ್ಧತಿ ನಿಶೇಧ

ನಗರಗಳಲ್ಲಿ ಹೆಚ್ಚುತ್ತಿರುವ ಬಾಲಕಾರ್ಮಿಕರ ಸಂಖ್ಯೆಯನ್ನು ತಡೆಯಲು ಸರಕಾರವು, ಬಾಲಕಾರ್ಮಿಕ ಪದ್ಧತಿ ನಿಶೇಧ ಕಾನೂನನ್ನು ಕಟ್ಟುನಿಟ್ಟಾಗಿ ಎಲ್ಲ ಕ್ಷೇತ್ರಗಳಲ್ಲೂ ಜಾರಿಗೊಳಿಸಿ, ಜೊತೆಜೊತೆಯಾಗಿ ಶಾಲಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು. ದುಡಿಯುತ್ತಿರುವ ಮಕ್ಕಳ ಪುನರ್ವಸತಿಗೆ, ಅವರಿಗೆ ಪ್ರಾಥಮಿಕ ಶಿಕ್ಷಣ ಕೊಡಿಸಲು ಆಗಬಹುದಾಗಿದ್ದ ಖರ್ಚಿನ ನಾಲ್ಕರಷ್ಟು ಖರ್ಚು ಸರ್ಕಾರಕ್ಕೆ ಹೊರೆಯಾಗುವುದು[36] ಸಮರ್ಪಕವಾಗಿ ಬಳಕೆಯಾಗದ ಪ್ರಾಥಮಿಕ ಶಿಕ್ಷಣಕ್ಕೆ ವ್ಯವಸ್ಥೆಗಳನ್ನು ರೂಪಿಸುವುದೇ ಅಲ್ಲದೆ ಮುಂದೆ ಮಕ್ಕಳ ಪುನರ್ವಸತಿಗೂ ಖರ್ಚುಮಾಡುವ ಎರೆಡೆರಡು ಖರ್ಚುಗಳನ್ನು ತಲೆಯ ಮೇಲೆ ಹಾಕಿಕೊಳ್ಳುವ ಬದಲು, ಎಲ್ಲ ಮಕ್ಕಳನ್ನು ಒಂದೇ ರೀತಿಯ ಶಿಕ್ಷಣ ವ್ಯವಸ್ಥೆಯಡಿ ತರುವುದು ಸರಕಾರದ

[36] ಯೂನಿಸೆಫ್, ಮಕ್ಕಳ ಸ್ಥಿತಿಗತಿ. 1999

ಜವಾಬ್ದಾರಿ. ಬಾಲಕಾರ್ಮಿಕ ಪದ್ಧತಿ ನಿಶೇಧ ಕಾನೂನನ್ನು ಜಾರಿ ಮಾಡಲು ಹಲವು-ವಿಧಾನ, ವ್ಯವಸ್ಥೆಗಳ ಸಂಯೋಜನೆಯನ್ನು ಸರಕಾರವು ಜಾರಿಗೆ ತಂದು 16 ವರ್ಷದೊಳಗಿನ ಯಾವುದೇ ಮಗು ದುಡಿಯದಂತೆ ನೋಡಿಕೊಳ್ಳಬೇಕು. ಔಪಚಾರಿಕ, ಅನೌಪಚಾರಿಕ ಕ್ಷೇತ್ರಗಳಲ್ಲಿ ಹಾಗೂ ಮನೆಗಳಲ್ಲಿ ಮಕ್ಕಳಿಂದ ದುಡಿಸಿಕೊಳ್ಳುವವರ ವಿರುದ್ಧ ತೀವ್ರವಾದ ಕ್ರಮ ಕೈಗೊಳ್ಳುವುದರಿಂದ ಮಾತ್ರ ನಗರಗಳಲ್ಲಿ ಬಾಲಕಾರ್ಮಿಕರ ಸಂಖ್ಯೆಯನ್ನು ಕಡಿಮೆಗೊಳಿಸಬಹುದು. ಮಕ್ಕಳನ್ನು ದುಡಿತಕ್ಕೆ ನೇಮಿಸಿಕೊಳ್ಳುವ ಕಾನೂನುಬಾಹಿರ ಕೃತ್ಯದ ಬಗ್ಗೆ ಪ್ರಚಾರ ಮಾಡಲು ಮಾಧ್ಯಮಗಳ ಸೂಕ್ತ ಬಳಕೆಯಾಗಬೇಕು.

## IV. ಹೆಣ್ಣುಮಕ್ಕಳ ಶಿಕ್ಷಣದ ಹಕ್ಕನ್ನು ಉತ್ತೇಜಿಸುವುದು

ಹೆಣ್ಣು ಮಕ್ಕಳಿಗಿಂತ ಶಾಲೆ ಬಿಡುವ ಗಂಡು ಮಕ್ಕಳ ಸಂಖ್ಯೆ ಅತ್ಯಧಿಕವಾಗಿದ್ದರೂ ಮನೆಗೆಲಸಕ್ಕಾಗಿ, ಹಾಗೂ ಇತರ ಜವಾಬ್ದಾರಿಗಳನ್ನು ಹೇರಲು ಪೋಷಕರೇ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸುವ ಪ್ರವೃತ್ತಿಯೇ ಮೊದಲಾದುವುಗಳಿಗೆ ತೀವ್ರ ಗಮನ ನೀಡಬೇಕಿದೆ. ಶಿಕ್ಷಣ ಮುಂದುವರಿಸಲು ಹೆಣ್ಣುಮಕ್ಕಳಿಗೆ ಪ್ರೋತ್ಸಾಹನೆಗಳನ್ನು ನೀಡುವ ಜೊತೆ ಜೊತೆಗೇ ಶಾಲಾ ಸಮಿತಿಯು ಹೆಣ್ಣುಮಕ್ಕಳ ಹಾಜರಾತಿಯನ್ನು ಆಗಾಗ ಉಸ್ತುವಾರಿಮಾಡಿ, ಯಾವ ಯಾವ ಪೋಷಕರು ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲವೋ ಅವರಿಗೆ ನೋಟೀಸು ಜಾರಿ ಮಾಡಬೇಕು.

## IV. ಶಿಕ್ಷಕರ ತರಬೇತಿಯಲ್ಲಿ ಮಾರ್ಪಾಡು

ಸಮುದಾಯ ಮತ್ತು ಮಕ್ಕಳೊಡನೆ ಸಂಬಂಧ ಮತ್ತು ನಿಲುವುಗಳನ್ನು ಕುರಿತು ಮರು ತಿಳಿವಳಿಕೆಯನ್ನು ಶಿಕ್ಷಕರ ತರಬೇತಿ, ಹಾಗೂ ಶಿಕ್ಷಣ ಕಾರ್ಯಕ್ರಮಗಳಲ್ಲಿ ಅಳವಡಿಸಬೇಕು. ಪೋಷಕರ ಮತ್ತು ಮಕ್ಕಳ ಸಾಮಾಜಿಕ, ಸಾಸ್ಕೃತಿಕ ಹಿನ್ನೆಲೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುವುದರ ಬಗ್ಗೆ ಶಿಕ್ಷಕರಿಗೆ ಅರಿವು ಹೆಚ್ಚಿಸಬೇಕು. ಪೋಷಕರ ಈ ಸಾಂಸ್ಕೃತಿಕ ಕೋನದ ಬಗ್ಗೆ ಶಿಕ್ಷಕರು ಅಷ್ಟೊಂದು ಸೂಕ್ಷ್ಮಮತಿ ತೋರದ ಕಾರಣ, ಅವರು ಬಾಲ್ಯವಿವಾಹವನ್ನೇ ಮಾಡಲಿ, ಮಕ್ಕಳನ್ನು ಜೀತಕ್ಕಿಡಲಿ, ಎಲ್ಲವನ್ನೂ ಸಹಿಸಿಕೊಂಡು ಹೋಗುವ ಸ್ಥಿತಿಯಲ್ಲಿರುತ್ತಾರೆ. ಇವೇ ಮಕ್ಕಳ ಶಿಕ್ಷಣದ ಅವಕಾಶಗಳಿಗೆ ಮಾರಕವಾಗುವುದು. ಇಂತಹ ಪರಸ್ಪರ ವೈರುಧ್ಯಗಳನ್ನು ಹೊಂದಿರುವ ವಿಚಾರಗಳ ಬಗ್ಗೆ ತರಬೇತಿ ಹಾಗೂ ನೀತಿಗಳಲ್ಲಿ ಬದಲಾವಣೆ ಬರಬೇಕಿದೆ. ಪೋಷಕರ ಸಂಸ್ಕೃತಿ ಹಾಗೂ ವ್ಯಕ್ತಿತ್ವಗಳ ಬಗ್ಗೆ

ಸೂಕ್ಷ್ಮವಾಗಿರುವುದು ಹಾಗೂ ತಾಳ್ಮೆಯಿಂದಿರುವ ಬಗ್ಗೆ ಶಿಕ್ಷಕರ ತರಬೇತಿಯಲ್ಲಿ ಸೇರಿಸಬೇಕು. ಜೊತೆಗೆ, ಪೋಷಕರು ನಡೆಸುವ ಬಾಲ್ಯವಿವಾಹ, ಲಿಂಗಬೇಧ, ಶಾಲೆಗೆ ಮಕ್ಕಳನ್ನು ಕಳುಹಿಸಲು ಗಮನ ಕೊಡದಿರುವ ಬಗ್ಗೆ ಒಪ್ಪಿಕೊಂಡು ಹೋಗುವ ಹಾಗೂ "ಅವರಿಗೆ ವಯಕ್ತಿಕವಾಗಿ ಸಾಂಸ್ಕೃತಿಕವಾಗಿ ಅದು ಸರಿ ಏನು ಮಾಡಲು ಸಾಧ್ಯ" ಎಂಬ ಮನೋಭಾವನೆ ಶಿಕ್ಷಕರಲ್ಲಿ ಒಡಮೂಡದಂತಹ ಅಂಶಗಳೂ ತರಬೇತಿಯಲ್ಲಿ ಸೇರಬೇಕು.

ಶಿಕ್ಷಕರ ತರಬೇತಿಯಲ್ಲಿ ಹೊಸ ಶಿಕ್ಷಣ ವಿಧಾನಗಳು, ಹಾಗೂ ಅವುಗಳನ್ನು ಅಳವಡಿಸಿ ಬಳಸುವ ಶಿಕ್ಷಣ ವಿಚಾರಗಳೂ ಇರಬೇಕು. ಜೊತೆಗೆ ತಮ್ಮ ಸ್ವಂತಿಕೆ ಬೆಳಸಿಕೊಂಡು ಅವನ್ನೂ ಶಾಲೆಗಳಲ್ಲಿ ಪ್ರಯೋಗಿಸಲೂ ಸಹಾಯ ಮಾಡಬೇಕು. ಶಿಕ್ಷಣ ಸಾಮರ್ಥ್ಯಗಳನ್ನು ಉತ್ತೇಜಿಸುವ ಸಂಸ್ಥೆಗಳಿಗೆ ಸದಸ್ಯರಾಗಲು ಹಾಗೂ ಶಿಕ್ಷಣ ಸಂಬಂಧಿತ ಪತ್ರಿಕೆಗಳಿಗೆ ಚಂದಾದಾರರಾಗಲು ಶಿಕ್ಷಕರನ್ನು ಪ್ರಚೋದಿಸಬೇಕು.

## VI. ಶಾಲಾ ಉಸ್ತುವಾರಿ ಹಾಗೂ ವಿಮರ್ಷಿಸುವುದನ್ನು ಉತ್ತಮಗೊಳಿಸುವುದು

ಶಾಲೆಗಳನ್ನು ಉಸ್ತುವಾರಿ ಮಾಡುವ ಹಾಗೂ ಶಾಲಾ ವ್ಯವಸ್ಥೆಗಳು ಹಾಗೂ ಕೆಲಸಗಳನ್ನು ವಿಮರ್ಷಿಸುವ ಸರ್ಕಾರದ ಪಾತ್ರವನ್ನು ಇನ್ನೂ ನವಿರುಗೊಳಿಸಬೇಕಿದೆ. "ಶಾಲಾ ಸಂಯೋಜಕ" ಎನ್ನುವ ಹೊಸ ಪಾತ್ರವು ಶಿಕ್ಷಕರ ಹಾಜರಾತಿ ಪರೀಕ್ಷಿಸುವ, ದಾಖಲೆಗಳನ್ನು ನೋಡಿಕೊಳ್ಳುವ ಹಾಗೂ ತರಗತಿಗಳು ನಡೆಯುವ ಬಗ್ಗೆ ಗಮನಿಸುವುದು ಎಂದಾದರೂ, ಸಂಯೋಜಕ ಮತ್ತು ಶಿಕ್ಷಕರ ನಡುವಿನ ಗುಣಾತ್ಮಕ ಸಂಬಂಧವನ್ನು ಹೆಚ್ಚಿಸುವ ಅವಶ್ಯಕತೆಯಿಂದ ಶಾಲೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಲು ಸಂಯೋಜಕರು ಒತ್ತಾಸೆಯಾಗುವರು ಎಂದು ಶಿಕ್ಷಕರು ಭಾವಿಸಿ ಮುನ್ನಡೆಯುವತ್ತ ಈ ಸಂಬಂಧವನ್ನು ಬೆಳೆಸಬೇಕಿದೆ. ಕಲಿಸುವ ಕಲಿಯುವ ಸಾಮಗ್ರಿಗಳ ಬಳಕೆ, ಶಿಕ್ಷಣ ಸಾಧನಗಳ ಅಭಿವೃದ್ಧಿ, ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟ, ಶಿಕ್ಷಕರ ತರಬೇತಿಯೇ ಮೊದಲಾದುವುಗಳ ಬಗ್ಗೆಯೂ ಉಸ್ತುವಾರಿ ಮಾಡುವ ಹಾಗೂ ನಿರ್ದೇಶನ ನೀಡುವ ಅವಶ್ಯಕತೆ ಇದೆ. ಶಾಲೆ ಹಾಗೂ ಸಮುದಾಯದ ಸದಸ್ಯರ ನಡುವೆ ಸಂಬಂಧ ಕಲ್ಪಿಸಲು ಹಾಗೂ ಪ್ರೋತ್ಸಾಹಿಸಲೂ ಸಹ ಶಾಲಾ ಸಂಯೋಜಕರು ಮುಖ್ಯ ಪಾತ್ರ ವಹಿಸುವ ಸಾಧ್ಯತೆಯೂ ಇದೆ.

## VII. ಅಂಗನವಾಡಿ ಹಾಗೂ ಮಕ್ಕಳ ತುರ್ತು ನಿಧಿ

ನಗರಗಳ ಬಡತನ ಪ್ರದೇಶಗಳಲ್ಲಿ ಅಂಗನವಾಡಿಗಳನ್ನು ತುರ್ತಾಗಿ ಏರ್ಪಡಿಸುವ ಅವಶ್ಯಕತೆ ಇದೆ. ಕರ್ನಾಟಕದ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶಗಳಲ್ಲಿ ಅಂಗನವಾಡಿಗಳ ಸಂಖ್ಯೆ ಬಹಳ ಕಡಿಮೆ. ಅಂಗನವಾಡಿಗಳು ಇದ್ದಲ್ಲಿ, ತರಗತಿಗಳಲ್ಲಿ ತುಂಬಿಕೊಳ್ಳುವ ಅಧಿಕ ಮತ್ತು ಗಮನವನ್ನು ಅತ್ತಿತ್ತ ಸೆಳೆಯುವ ಪುಟ್ಟ ಮಕ್ಕಳಿಂದ ಟೀಚರುಗಳಿಗೆ ತೊಂದರೆ ತಪ್ಪುವುದು. ಅಲ್ಲದೆ ಆ ಪುಟ್ಟ ಮಕ್ಕಳ ಅಣ್ಣ ಹಾಗೂ ಅಕ್ಕಂದಿರಿಗೆ ಶಾಲೆಯಲ್ಲಿ ಕಲಿಯಲು ನೆರವಾಗುವುದು.

ಮನೆಯಲ್ಲಿ ಯಾರಾದರೂ ಪೋಷಕರು ನಿಧನರಾದರೆ, ಅದರಲ್ಲೂ ಅಪ್ಪ ಸತ್ತುಹೋದರೆ, ಅಥವಾ ಕುಟುಂಬದಲ್ಲಿ ಏನಾದರೂ ತುರ್ತು ಬಂದಾಗ ಬಹುತೇಕ ಮಕ್ಕಳನ್ನು ಶಾಲೆಯಿಂದ ಬಿಡಿಸುವುದು ಸಾಮಾನ್ಯ. ಇಂಥ ಮಕ್ಕಳು ಶಾಲೆಯನ್ನು ಮುಂದುವರಿಸಲು ಆರ್ಥಿಕ ಅಥವಾ ವಸ್ತುರೂಪದ ಸಹಾಯ ನೀಡಿದಲ್ಲಿ ಪರಿಸ್ಥಿತಿಯನ್ನು ಬದಲಿಸಬಹುದು. ಬಿ.ಇ.ಓ ಅವರ ಮಟ್ಟದಲ್ಲಿ ತುರ್ತಿನಲ್ಲಿರುವ ಮಕ್ಕಳ ನಿಧಿ ಎಂಬುದು ಇದ್ದು, ಅದಕ್ಕೆ ಅಧ್ಯಾಪಕರು ಅಥವಾ ಶಿಕ್ಷಣ ಸಮಿತಿಯ ಸದಸ್ಯರು ಅರ್ಜಿ ಸಲ್ಲಿಸಿ ಪಡೆಯುವಂತಿರಬೇಕು.

## VIII. ವಾರ್ಡ್ ಮಟ್ಟದಲ್ಲಿ ಶಾಲೆಗಳಿಗೆ ಪ್ರಶಸ್ತಿ

ಶಾಲೆಗಳ ಗುಣಮಟ್ಟವನ್ನು ಕಾಯ್ದಿಟ್ಟುಕೊಳ್ಳಲು ಒಂದು ವಿಧಾನ, ವಾರ್ಡ್ ಮತ್ತು ವಲಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಆರಂಭಿಸುವುದು. ಇಂತಹ ಪ್ರಶಸ್ತಿ ನೀಡಲು ಶಾಲೆಗಳನ್ನು ಅವುಗಳ ಕಾರ್ಯಶೈಲಿ, ಹಾಜರಾತಿ ಮಟ್ಟ, ಶಾಲಾ ವ್ಯವಸ್ಥೆಗಳನ್ನು ನೋಡಿಕೊಳ್ಳುವುದು, ಶಿಕ್ಷಕರ ಕೆಲಸ ನಿರ್ವಹಣೆ ಮತ್ತು ಮಕ್ಕಳ ಸಾಧನೆಗಳ ಮಟ್ಟವನ್ನು ಆಧರಿಸಿ ಮೌಲ್ಯಮಾಪನ ಮಾಡಬಹುದು. ಈ ಪ್ರಶಸ್ತಿಗಳನ್ನು ಪ್ರಕಟಿಸುವ ಮೂಲಕ ಇವೇ ಶಾಲಾ ಗುಣಮಟ್ಟವನ್ನು ಕಾಪಾಡಲು ಆಂತರಿಕವಾದ ವಿಧಾನಗಳನ್ನಾಗಿ ಏರ್ಪಡಿಸಬಹುದು.

## IX. ವಿಕೇಂದ್ರೀಕೃತ ಮಾಹಿತಿ ಸಂಗ್ರಹ

ಶಾಲೆಯ ಸಾಮಿಪ್ಯ, ಪ್ರತಿಶಾಲೆಯ ಮೂಲಭೂತ ಸೌಲಭ್ಯಗಳ ಆವಶ್ಯಕತೆ ಏನು ಹಾಗೂ ಶಾಲೆ ಬಿಟ್ಟಮಕ್ಕಳು (ಅವರ ಸ್ಥಿತಿಗತಿ, ಅವರು ಕೆಲಸದಲ್ಲಿ

ಬಿದ್ದಿದ್ದಾರೆಂಯೇ ಇಲ್ಲವೋ) ಇವೇ ಮೊದಲಾದ ಮಾಹಿತಿಯನ್ನು ಸೂಕ್ಷ್ಮಯೋಜನೆಯ ಮೂಲಕ ಸಂಗ್ರಹಿಸಿ ಅವುಗಳನ್ನು ಶಾಲೆ ಹಾಗೂ ವಾರ್ಡ್ ಮಟ್ಟದಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಶಾಲೆಯ ಹೊರಗಿರುವ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ ಇಟ್ಟುಕೊಳ್ಳಲು ಅಧ್ಯಾಪಕರನ್ನು ಪ್ರೋತ್ಸಾಹಿಸಬೇಕು. ಶಾಲೆಗೆ ನಿಗಧಿಯಾಗಿರುವ ಸಂಪನ್ಮೂಲಗಳು, ಹಣ, ಉಸ್ತುವಾರಿ ಮತ್ತು ಶಾಲಾ ಕೆಲಸಗಳ ವಿವರಗಳು ಶಾಲಾ ಮಟ್ಟದ ಮಾಹಿತಿಯ ಭಾಗವಾಗಬೇಕು. ಅತೀ ಕಡಿಮೆ ಶಾಲಾ ನೋಂದಣಿ ಹಾಗೂ ಹಾಜರಾತಿ ಕುರಿತು ಮಾಹಿತಿಯು ಆಯಾ ಸಮುದಾಯದ ಶಾಲೆಯ ಸಾಮಾಜಿಕ ಆರ್ಥಿಕ ಹಿನ್ನೆಲೆ ಹಾಗೂ ಇಂತಹ ಪರಿಸ್ಥಿತಿಗೆ ಏನು ಕಾರಣ ಎಂಬುದನ್ನು ಸಹ ಹೊಂದಿರಬೇಕು. ಈ ಮಾಹಿತಿಯನ್ನು ಕನಿಷ್ಟ ಆರು ತಿಂಗಳಿಗೊಮ್ಮೆ ವಿಮರ್ಷಿಸಿ, ಮುಖ್ಯೋಪಾಧ್ಯಾಯರು ಅಥವಾ ಮುಖ್ಯೋಪಾಧ್ಯಾಯಿನಿ ಮತ್ತು ಶಾಲಾ ಸಮಿತಿಯು ನೆರವಿನಿಂದ ಬದಲಾಯಿಸುತ್ತಿರಬೇಕು. ಪ್ರತಿ ಶಾಲೆಯಲ್ಲಿ ಆಯಾ ಶಾಲಾ ವಲಯದಲ್ಲಿರುವ ಶಾಲಾ ವಯಸ್ಸಿನ ಎಲ್ಲ ಮಕ್ಕಳು ಹಾಗೂ ಶಾಲೆಯಿಂದ ಹೊರಗಿರುವ ಹಾಗೂ ಒಳಗಿರುವ ಮಕ್ಕಳ ವಿವರಗಳು ಇರಬೇಕು.

ಬೆಂಗಳೂರುನಲ್ಲಿ ನಡೆಸಿದ ಕ್ಷೇತ್ರಾಧ್ಯಯನವನ್ನು ಈ ವರದಿಯು ಆಧರಿಸಿದೆ. ಇದು ಭಾರತದ ಆರು ರಾಜ್ಯಗಳಲ್ಲಿ NIAS ನಡೆಸಿದ ಅಧ್ಯಯನದ ಒಂದು ಭಾಗ. ಈ ವರದಿಯಲ್ಲಿ ನಗರಗಳ ಬಡಜನರಿಗೆ ಪ್ರಾಥಮಿಕ ಶಿಕ್ಷಣದ ವಂಚನೆ ಹೇಗೆ ಆಗುತ್ತಿದೆ ಹಾಗೂ ಶಾಲಾ ಪರಿಸ್ಥಿತಿಗಳು ಹೇಗಿವೆ ಎನ್ನುವುದನ್ನು ಎತ್ತಿ ತೋರಿಸಲಾಗಿದೆ.

ಈ ಸರಣಿಯ ಇತರ ವರದಿಗಳು

- ಜಾನ್‌ಪುರ, ಉತ್ತರಾಂಚಲ
- ಖಾತೇಗಾಂ, ಮಧ್ಯಪ್ರದೇಶ್
- ಜೈಪುರ, ರಾಜಾಸ್ಥಾನ್
- ತಂಜಾವೂರು, ತಮಿಳುನಾಡು
- ಚಿರಾಲ, ಆಂಧ್ರಪ್ರದೇಶ್

ISBN 81-87663-33-2